# ಜನತಾವಾಣಿ

ಸಂಪಾದಕರು : ವಿಕಾಸ್ ಷಡಾಕ್ಷರಪ್ಪ ಮೆಳ್ಳೇಕಟ್ಟೆ

ಮಧ್ಯ ಕರ್ನಾಟಕದ ಆಪ್ತ ಒಡನಾಡಿ

ದಾವಣಗೆರೆ, ಚಿತ್ರದುರ್ಗ, ಹಾವೇರಿ, ಶಿವಮೊಗ್ಗ, ವಿಜಯನಗರ, ಚಿಕ್ಕಮಗಳೂರು, ತುಮಕೂರು, ಗದಗ ಜಿಲ್ಲೆಗಳಲ್ಲಿ ಪ್ರಸಾರ ಹೊಂದಿರುವ ಪ್ರಾದೇಶಿಕ ಪತ್ರಿಕೆ

ದಾವಣಗೆರೆ ಭಾನುವಾರ, ಆಗಸ್ಟ್ 28, 2022

ಸಂಪುಟ : 49 ಸಂಚಿಕೆ : 106 ☎ 254736 91642 99999 RNI No: 27369/75 KA/SK/CTA-275/2021-2023. O/P @ B.V. Nagar P.O. ಪುಟ : 6 ರೂ : 5.00 www.janathavani.com janathavani@mac.com


## ಕ್ಷುದ್ರ ರಾಜಕೀಯಕ್ಕೆ ಸಾವರ್ಕರ್ ದೂಷಣೆ

ದಾವಣಗೆರೆ, ಆ. 27 – ಕ್ಷುದ್ರ ರಾಜಕೀಯ ಕಾರಣಕ್ಕಾಗಿ ಸ್ವಾತಂತ್ರ್ಯ ಹೋರಾಟಗಾರ ವಿ.ಡಿ. ಸಾವರ್ಕರ್ ಅವರು ವಿರುದ್ಧ ದೇಶ ವಿಭಜನೆಯ ಹಾಗೂ ಮಹಾತ್ಮ ಗಾಂಧೀಜಿ ಹತ್ಯೆಯ ಆರೋಪಗಳನ್ನು ಮಾಡಲಾಗುತ್ತಿದೆ ಎಂದು ಪತ್ರಕರ್ತೆ ಶ್ರೀಲಕ್ಷ್ಮಿ ರಾಜ್‌ಕುಮಾರ್ ಹೇಳಿದರು.

ಮಿತ್ರ ಮಂಡಳಿ ಸಂಸ್ಥೆಯ ವತಿಯಿಂದ ನಗರದ ಹರಿಹರ ಅರ್ಬನ್ ಕೋ ಆಪರೇಟಿವ್ ಬ್ಯಾಂಕ್ ಸಮುದಾಯ ಭವನದಲ್ಲಿ ಇಂದು ಸಂಜೆ ಆಯೋಜಿಸಲಾಗಿದ್ದ 'ಸ್ವತಂತ್ರ್ಯತೇ ಭಗವತಿ ಜಯೋಸ್ತುತೆ' ಕಾರ್ಯಕ್ರಮದಲ್ಲಿ ಅವರು ದಿಕ್ಸೂಚಿ ಭಾಷಣ ಮಾಡಿದರು.

### ಸಾವರ್ಕರ್ ಪುಸ್ತಕ ಕ್ರಾಂತಿಕಾರಿಗಳ ಭಗವದ್ಗೀತೆ ಆಗಿತ್ತು

- ಶ್ರೀಲಕ್ಷ್ಮಿ ರಾಜ್‌ಕುಮಾರ್ ಪತ್ರಕರ್ತೆ



ಸಾವರ್ಕರ್ ಅವರು ಬ್ರಿಟಿಷರಿಗೆ ಕ್ಷಮಾದಾನ ಪತ್ರ ಬರೆದಿದ್ದರು ಹಾಗೂ ಮಹಾತ್ಮ ಗಾಂಧೀಜಿ ಹಂತಕ ನಾಥೂರಾಮ್ ಗೂಡ್ಸೆ ಜೊತೆ ಸಂಪರ್ಕದಲ್ಲಿದ್ದರು ಎಂಬ ಎರಡನೇ ವಿಚಾರಗಳನ್ನು ಮುಂದಿಟ್ಟುಕೊಂಡು ಸಾವರ್ಕರ್ ವಿರುದ್ಧ ರಾಜಕೀಯ ಕಾರಣಕ್ಕಾಗಿ ದೂಷಣೆ ಮಾಡಲಾಗುತ್ತಿದೆ ಎಂದವರು ಹೇಳಿದರು.

ಕ್ಷಮಾದಾನ ಕೇಳಿ ಬ್ರಿಟಿಷರಿಗೆ ಸಾವರ್ಕರ್ ಪತ್ರ ಬರೆದಿದ್ದಾರೆ ಎಂದು ಹೇಳಲಾಗುತ್ತಿದೆ. ಆದರೆ, ಮಹಾತ್ಮ ಗಾಂಧೀಜಿಯಂತಹ ನಾಯಕರೇ ಬ್ರಿಟಿಷರಿಗೆ ನಿಷ್ಠ ಸೇವಕರಾಗಿರುವುದಾಗಿ ಪತ್ರ ಬರೆದಿದ್ದಾರೆ. ಅದರ ಬಗ್ಗೆ ಏಕೆ ಮಾತನಾಡುವುದಿಲ್ಲ? ಎಂದವರು ಪ್ರಶ್ನಿಸಿದರು.

ಗೂಡ್ಸೆ ಹಲವು ಬಾರಿ ಸಾವರ್ಕರ್ ಭೇಟಿ ಮಾಡಿದ್ದನ್ನೇ ಮುಂದಿಟ್ಟುಕೊಂಡು ಅವರ ವಿರುದ್ಧ ಗಾಂಧೀಜಿ ಹತ್ಯೆ ಕುರಿತು ಆರೋಪ ಮಾಡಲಾಗುತ್ತಿದೆ. ಎರಡು ಬಾರಿ ನ್ಯಾಯಾಲಯ ಅವರನ್ನು ಆರೋಪದಿಂದ ಮುಕ್ತಗೊಳಿಸಿತ್ತು. ಸಂವಿಧಾನ ಶಿಲ್ಪಿ ಬಿ.ಆರ್. ಅಂಬೇಡ್ಕರ್ ಅಂಥವರೇ, ಸಾವರ್ಕರ್‌ಗೆ ಅನ್ಯಾಯ ಆಗಬಾರದು ಎಂದು ತಿಳಿಸಿದ್ದರು ಎಂದು ಶ್ರೀಲಕ್ಷ್ಮಿ ಹೇಳಿದರು. ದ್ವಿರಾಷ್ಟ್ರ ಸಿದ್ಧಾಂತ ಪ್ರತಿಪಾದಕ ಸಾವರ್ಕರ್ (2ನೇ ಪುಟಕ್ಕೆ)

## ಮುರುಘಾ ಶರಣರ ಮೇಲೆ ಲೈಂಗಿಕ ದೌರ್ಜನ್ಯ ಕೇಸ್

### ಮಠದ ಆಡಳಿತಾಧಿಕಾರಿ ಹಾಗೂ ಪತ್ನಿ ವಿರುದ್ಧವೂ ಅತ್ಯಾಚಾರ ಯತ್ನ ಪ್ರಕರಣ

ಬೆಂಗಳೂರು, ಆ. 27 – ನಾಡಿನ ಪ್ರಮುಖ ಮಠಗಳಲ್ಲಿ ಒಂದಾಗಿರುವ ಚಿತ್ರದುರ್ಗದ ಮುರುಘಾ ಮಠದ ಶ್ರೀ ಶಿವಮೂರ್ತಿ ಶರಣರ ವಿರುದ್ಧ ಲೈಂಗಿಕ ದೌರ್ಜನ್ಯದ ಪ್ರಕರಣ ದಾಖಲಿಸಲಾಗಿದೆ.

ಶರಣರಷ್ಟೇ ಅಲ್ಲದೇ, ಹಾಸ್ಟೆಲ್‌ನ ಮಹಿಳಾ ವಾರ್ಡನ್, ಮಠದ ಉತ್ತರಾಧಿಕಾರಿಯಾಗಿರುವ ಶ್ರೀ ಬಸವಾದಿತ್ಯ, ಮಠದ ಕಾರ್ಯದರ್ಶಿ ಪರಮಶಿವಯ್ಯ ಹಾಗೂ ವಕೀಲ ಗಂಗಾಧರಯ್ಯ ಅವರ ವಿರುದ್ಧ ಮೈಸೂರಿನಲ್ಲಿ ಇಬ್ಬರು ಅಪ್ರಾಪ್ತೆಯರು ಲೈಂಗಿಕ ದೌರ್ಜನ್ಯಕ್ಕೆ ಸಂಬಂಧಿಸಿದಂತೆ ದೂರು ನೀಡಿದ್ದಾರೆ. ಈ ಸಂಬಂಧ ಎಫ್.ಐ.ಆರ್. ದಾಖಲಿಸಲಾಗಿದೆ.

ಇದರ ಬೆನ್ನಲ್ಲೇ, ಮುರುಘಾ ಮಠದ ಆಡಳಿತಾಧಿಕಾರಿ ಎಸ್.ಕೆ. ಬಸವರಾಜನ್ ಹಾಗೂ ಅವರ ಪತ್ನಿ ಸೌಭಾಗ್ಯ ಬಸವರಾಜನ್ ವಿರುದ್ಧ ಅತ್ಯಾಚಾರ ಯತ್ನದ ಪ್ರಕರಣ ದಾಖಲಿಸಲಾಗಿದೆ.

ತಮ್ಮ ಮೇಲೆ ಅತ್ಯಾಚಾರದ ಯತ್ನ ನಡೆಸಲಾಗಿದೆ ಎಂದು ಮಠದ ಹಾಸ್ಟೆಲ್‌ನ ಮಹಿಳಾ ವಾರ್ಡನ್ ಚಿತ್ರದುರ್ಗ ಗ್ರಾಮಾಂತರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಿಸಿದ್ದಾರೆ.

ತಮ್ಮ ವಿರುದ್ಧದ ಆರೋಪಗಳನ್ನು ತಳ್ಳಿ ಹಾಕಿರುವ ಮುರುಘಾ ಶರಣರು, ಮಠದಲ್ಲಿದ್ದವರೇ ಅಧಿಕಾರಕ್ಕಾಗಿ ತಮ್ಮ ವಿರುದ್ಧ ಸಂಚು ನಡೆಸಿದ್ದಾರೆ. ತಮ್ಮನ್ನು ಬ್ಲಾಕ್‌ಮೇಲ್ ಮಾಡುವ ಪ್ರಯತ್ನ ನಡೆಸಲಾಗುತ್ತಿದ್ದು, ಇದಕ್ಕೆ ಮಣಿಯುವುದಿಲ್ಲ ಎಂದಿದ್ದಾರೆ.

**ಶರಣರ ವಿರುದ್ಧ ದೂರು :** ಮುರುಘಾ ಮಠದ ಹಾಸ್ಟೆಲ್‌ನಲ್ಲಿದ್ದ ಇಬ್ಬರು ವಿದ್ಯಾರ್ಥಿನಿಯರು ಮೈಸೂರಿನ ನಜರಾಬಾದ್ ಠಾಣೆಯಲ್ಲಿ ಪೋಕ್ಸೋ (3ನೇ ಪುಟಕ್ಕೆ)

### ಮಠದಲ್ಲಿದ್ದವರಿಂದಲೇ ಸಂಚು, ಬ್ಲಾಕ್‌ಮೇಲ್

ಚಿತ್ರದುರ್ಗ, ಆ. 26 – ತಮ್ಮ ವಿರುದ್ಧ ಮಠದಲ್ಲಿದ್ದವರೇ ಸಂಚು ಮಾಡಿದ್ದಾರೆ. ಅಧಿಕಾರಕ್ಕಾಗಿ ಈ ಸಂಘರ್ಷ ನಡೆಸುತ್ತಿದ್ದಾರೆ. ಅನಾರೋಗ್ಯಕರ ಬ್ಲಾಕ್‌ಮೇಲ್ - ರೋಲ್‌ಕಾಲ್ ಮಾಡುತ್ತಿದ್ದಾರೆ ಎಂದು ಚಿತ್ರದುರ್ಗ ಮುರುಘಾ ಮಠದ ಶ್ರೀ ಶಿವಮೂರ್ತಿ ಮುರುಘಾ ಶರಣರು ಹೇಳಿದ್ದಾರೆ.



ಇಬ್ಬರು ಅಪ್ರಾಪ್ತೆಯರ ಮೇಲೆ ದೌರ್ಜನ್ಯ ಎಸಗಿದ ಆರೋಪದ ಮೇಲೆ ಪ್ರಕರಣ ದಾಖಲಾದ ಹಿನ್ನೆಲೆಯಲ್ಲಿ ಶರಣರು ಈ ಹೇಳಿಕೆ ನೀಡಿದ್ದಾರೆ.

ಪ್ರಕರಣ ದಾಖಲಾದ ಹಿನ್ನೆಲೆಯಲ್ಲಿ ಹಲವಾರು ಮಠಾಧೀಶರು ಹಾಗೂ ಸಮಾಜದ ಮುಖಂಡರು ಶರಣರನ್ನು ಭೇಟಿ ಮಾಡಿ ಅವರಿಗೆ ಬೆಂಬಲಿಸಿದರು. ಈ ಸಂದರ್ಭದಲ್ಲಿ ಬೆಂಬಲಿಗರನ್ನು ಉದ್ದೇಶಿಸಿ ಮಾತನಾಡಿದ ಶರಣರು, ನಮ್ಮ ಎದುರು ಸಂಧಾನ ಹಾಗೂ ಸಮರ ಎಂಬ ಎರಡು ಆಯ್ಕೆಗಳಿವೆ. ಸಂಧಾನ ಬೇಕಾದರೂ ಮಾಡಿಕೊಳ್ಳೋಣ, ಬೇಡ ಎಂದರೆ ಸಮರ ಇದ್ದೇ ಇದೆ ಎಂದಿದ್ದಾರೆ.

ಎಲ್ಲ ಕಾಲದಲ್ಲಿ ಸಮಾಜ ಸುಧಾರಕರಿಗೆ ದುಷ್ಟ ಶಕ್ತಿಗಳು ಕಾಟ ನೀಡಿವೆ. ಇಂತಹ ಕಾಟ ತಮಗೂ ಎದುರಾಗಿದೆ. ಇದು ತಮ್ಮ ಬದುಕಿನ ಆತ್ಯಂತಿಕ ಕಿರುಕುಳ. ಈ ವಿಷಯದಲ್ಲಿ ನಾನು ರಾಜೀ ಆಗುವುದಿಲ್ಲ. ಜೀವಗಳ್ಳನಾಗಿ ರಾಜೀ ಮಾಡಿಕೊಂಡರೆ ನನ್ನ ಜೀವನ ಅತ್ಯಂತ ಕಳಂಕಮಯವಾಗುತ್ತದೆ ಎಂದು ಶರಣರು ಹೇಳಿದ್ದಾರೆ.

ಮಠದಲ್ಲಿದ್ದವರೇ ತಮ್ಮ ವಿರುದ್ಧ ಸಂಚು ಮಾಡಿದ್ದಾರೆ. ಅನಾರೋಗ್ಯಕರವಾದ ಬ್ಲಾಕ್‌ಮೇಲ್ ಹಾಗೂ ರೋಲ್‌ಕಾಲ್ ನಡೆಸುತ್ತಿದ್ದಾರೆ. ಬ್ಲಾಕ್‌ಮೇಲ್ ತಂತ್ರದ ಮೂಲಕ ಅಧಿಕಾರ ಎಂಬುದು ಅವರ ಧೋರಣೆಯಾಗಿದೆ ಎಂದು ಶರಣರು ಹೇಳಿದರು. ಸಮಸ್ಯೆಗಳು ಹಾಗೂ ಸವಾಲುಗಳು ತಾತ್ಕಾಲಿಕ. ಮುರುಘಾ ಮಠ ಹಾಗೂ ಮುರುಘಾ ಶರಣರ ಅಭಿಮಾನವನ್ನು ಬಡಿದೆಬ್ಬಿಸಲು ಈ ಸಮಸ್ಯೆ ಬಂದಿದೆ ಎಂದು ತಾವು ಭಾವಿಸಿರುವುದಾಗಿ ಅವರು ಹೇಳಿದರು.

ಇಂತಹ ಹಲವು ಸನ್ನಿವೇಶಗಳನ್ನು ಕಾನೂನು ಮೂಲಕ ಎದುರಿಸಿದ್ದೇವೆ. ಇದು ಗರಿಷ್ಠ ಮಟ್ಟದ ಕಿರುಕುಳ, ಪಿತೂರಿ, ಸಂಚು. ಎಲ್ಲ ರೀತಿಯ ಸಮಸ್ಯೆಗಳಿಗೂ ಪರಿಹಾರ ಇದೆ. ಈ ದಿಸೆಯಲ್ಲಿ ಹೋರಾಟವನ್ನು ಮುಂದುವರೆಸುತ್ತೇವೆ ಎಂದು ಶರಣರು ಹೇಳಿದ್ದಾರೆ.

### ಪ್ರಕರಣ ಸಿಐಡಿಗೆ: ಸರ್ಕಾರದ ಚಿಂತನೆ

**ಬೆಂಗಳೂರು, ಆ. 27 - ಚಿತ್ರದುರ್ಗದ ಮುರುಘಾ ಮಠದ ಶಿವಮೂರ್ತಿ ಮುರುಘಾ ಶರಣರ ವಿರುದ್ಧ ಬಂದಿರುವ ಲೈಂಗಿಕ ಕಿರುಕುಳ ಆರೋಪವನ್ನು ರಾಜ್ಯ ಸರ್ಕಾರ ಗಂಭೀರವಾಗಿ ಪರಿಗಣಿಸಿದ್ದು, ಇದನ್ನು ಸಿಐಡಿಗೆ ಹಸ್ತಾಂತರಿಸುವ ಬಗ್ಗೆ ಚಿಂತನೆ ನಡೆಸಿದೆ.**

**ಪ್ರಕರಣ ಚಿತ್ರದುರ್ಗದಲ್ಲಿ ನಡೆದಿದ್ದರೂ ಮೊಕದ್ದಮೆ ಮೈಸೂರು ಪೊಲೀಸ್ ಠಾಣೆಯಲ್ಲಿ ದಾಖಲಾಗಿದೆ. ಪ್ರಕರಣದ ಆರೋಪ ಹೊರಬರುತ್ತಿದ್ದಂತೆ ಸಮಾಜ ಕಲ್ಯಾಣ, ಶಿಕ್ಷಣ ಇಲಾಖೆ ಹಾಗೂ ಪೊಲೀಸ್ ಇಲಾಖೆ ಪ್ರತ್ಯೇಕವಾಗಿ ಸಭೆಗಳನ್ನು ನಡೆಸಿ, ಮುಂದೆ ಯಾವ ನಿರ್ಧಾರ ಕೈಗೊಳ್ಳಬೇಕೆಂಬುದರ ಬಗ್ಗೆ ಚರ್ಚೆ ಮಾಡಲಾಗಿದೆ.**

**ಮುರುಘಾ ಶ್ರೀಗಳ ಬಗ್ಗೆ ಬಂದಿರುವ ಆರೋಪವು ಶುದ್ಧ ಸುಳ್ಳು ಎಂದು ಮಠದ ಸಲಹಾ ಸಮಿತಿ ತಿಳಿಸಿದೆ.**

**ಈ ಮಧ್ಯೆ ಮುರುಘಾ ಶರಣರ ಪ್ರಕರಣವನ್ನು ನ್ಯಾಯಾಂಗ ತನಿಖೆಗೆ ಒಳಪಡಿಸಬೇಕೆಂದು ಒಡನಾಡಿ ಸಂಸ್ಥೆ ಒತ್ತಾಯಿಸಿದೆ.**

**ಇದರ ನಡುವೆ ಇಬ್ಬರು ಸಂತ್ರಸ್ತ ವಿದ್ಯಾರ್ಥಿಗಳು ತಂಗಿದ್ದ** (3ನೇ ಪುಟಕ್ಕೆ)

## ಆಧಾರ್ - ಮತದಾರರ ಚೀಟಿ ಲಿಂಕ್

ಹರಿಹರ, ಆ. 27 - ಸರ್ಕಾರದ ಆದೇಶದಂತೆ ತಾಲ್ಲೂಕಿನಲ್ಲಿ ಶೇ. 50 ರಷ್ಟು ಸಾರ್ವಜನಿಕರ ಆಧಾರ್ ಕಾರ್ಡ್‌ಗಳನ್ನು ಮತದಾರರ ಗುರುತಿನ ಚೀಟಿಗೆ ಲಿಂಕ್ ಮಾಡಲಾಗಿದೆ. ಇದರಿಂದಾಗಿ ದಾವಣಗೆರೆ ಜಿಲ್ಲೆಯಲ್ಲಿ



ಹರಿಹರ ತಾಲ್ಲೂಕು ಎರಡನೇ ಸ್ಥಾನದಲ್ಲಿದ್ದು, ಇನ್ನು ಕೆಲವೇ ದಿನಗಳಲ್ಲಿ ಶೇ. 100 ರಷ್ಟು ಮತದಾರರ ಚೀಟಿಗೆ ಆಧಾರ್ ಲಿಂಕ್ ಮಾಡಲಾಗುವುದು ಎಂದು ಕ್ಷೇತ್ರ ಶಿಕ್ಷಣಾಧಿಕಾರಿ ಬಿ.ಸಿ. ಸಿದ್ದಪ್ಪ ತಿಳಿಸಿದ್ದಾರೆ.

**ಜಿಲ್ಲೆಯಲ್ಲಿ 2ನೇ ಸ್ಥಾನದಲ್ಲಿ ಹರಿಹರ ತಾಲ್ಲೂಕು**

ನಗರದ ಹೊಸಭರಂಪುರ ಬಡಾವಣೆ ಸೇರಿದಂತೆ ವಿವಿಧ ಬಡಾವಣೆಗಳ ಬಿಎಲ್‌ಓ ಮತ್ತು ಅಂಗನವಾಡಿ ಕಾರ್ಯಕರ್ತರು ಮನೆ ಮನೆಗೆ ತೆರಳಿ ಆಧಾರ ಲಿಂಕ್ ಮಾಡುವುದನ್ನು ಪರಿಶೀಲಿಸಿ ಮತ್ತು ಸಾರ್ವಜನಿಕರಿಗೆ ಆಧಾರ್ ಲಿಂಕ್ (2ನೇ ಪುಟಕ್ಕೆ)

## ಪ್ರತಿ ತಿಂಗಳು ರಾಜ್ಯಕ್ಕೆ ಮೋದಿ ಆಗಮನ



ಬೆಂಗಳೂರು, ಆ. 27 – ಮುಂಬರುವ ವಿಧಾನಸಭಾ ಚುನಾವಣೆ ಹಿನ್ನೆಲೆಯಲ್ಲಿ ಪ್ರಧಾನ ಮಂತ್ರಿ ನರೇಂದ್ರ ಮೋದಿ ಅವರು ಕರ್ನಾಟಕಕ್ಕೆ ತಿಂಗಳಿಗೆ ಒಂದು ಬಾರಿಯಾದರೂ ಭೇಟಿ ನೀಡುವಂತೆ ತಾವು ಮಾಡಿಕೊಂಡಿರುವ ಮನವಿಗೆ ಪ್ರಧಾನ ಮಂತ್ರಿ ನರೇಂದ್ರ ಮೋದಿ ಸಮ್ಮತಿಸಿದ್ದಾರೆ ಎಂದು ಬಿಜೆಪಿ ಹಿರಿಯ ನಾಯಕ ಬಿ.ಎಸ್. ಯಡಿಯೂರಪ್ಪ ಹೇಳಿದ್ದಾರೆ.

ಯಡಿಯೂರಪ್ಪ ಅವರು ಶುಕ್ರವಾರ ದೆಹಲಿಗೆ ತೆರಳಿ ಪಕ್ಷದ ಕೇಂದ್ರ ನಾಯಕತ್ವದ ಜೊತೆ ಚರ್ಚೆ ನಡೆಸಿದ್ದರು. ನಂತರ (2ನೇ ಪುಟಕ್ಕೆ)

## 200 ನೇ ದಿನಕ್ಕೆ ರಾಜನಹಳ್ಳಿ ಶ್ರೀಗಳ ಧರಣಿ ಸತ್ಯಾಗ್ರಹ

ನಿವೃತ್ತ ನ್ಯಾಯಾಧೀಶರಾದ ನಾಗಮೋಹನ್ ದಾಸ್ ಆಯೋಗದ ವರದಿ ಅನುಷ್ಠಾನಕ್ಕೆ (ಎಸ್ಸಿ-ಎಸ್ಟಿ ಮೀಸಲಾತಿ ಹೆಚ್ಚಿಸುವಂತೆ) ಒತ್ತಾಯಿಸಿ, ರಾಜನಹಳ್ಳಿಯ ವಾಲ್ಮೀಕಿ ಗುರುಪೀಠದ ಶ್ರೀ ವಾಲ್ಮೀಕಿ ಪ್ರಸನ್ನಾನಂದ ಸ್ವಾಮೀಜಿ ಬೆಂಗಳೂರಿನ ಫ್ರೀಡಂ ಪಾರ್ಕ್‌ನಲ್ಲಿ ನಡೆಸುತ್ತಿರುವ ಅಹೋರಾತ್ರಿ ಧರಣಿ ಸತ್ಯಾಗ್ರಹವು ಇಂದು 200ನೇ ದಿನಕ್ಕೆ ಕಾಲಿಡಲಿದೆ.ಈ



ಹಿನ್ನಲೆಯಲ್ಲಿ ಇಂದು ಬೆಳಿಗ್ಗೆ 11 ಗಂಟೆಗೆ ಬೆಂಗಳೂರಿನ ಡಾ. ಬಿ.ಆರ್.ಅಂಬೇಡ್ಕರ್ ಭವನದಲ್ಲಿ ರಾಜ್ಯಮಟ್ಟದ ಎಸ್ಸಿ-ಎಸ್ಟಿ ಸಮಾಜದ ಗುರುಗಳ ಮತ್ತು ಜನಪ್ರತಿನಿಧಿಗಳ, ಹೋರಾಟಗಾರರ ಸಮಾಜದ ಜಿಲ್ಲಾ ಹಾಗೂ ತಾಲ್ಲೂಕು ಅಧ್ಯಕ್ಷರುಗಳ ಸಭೆಯನ್ನು ಕರೆಯಲಾಗಿದೆ ಎಂದು ರಾಜನಹಳ್ಳಿ ಮಠದ ಆಡಳಿತಾಧಿಕಾರಿ ಟಿ.ಓಬಳಪ್ಪ ತಿಳಿಸಿದ್ದಾರೆ. ಸಭೆಯಲ್ಲಿ ಮುಂದಿನ ಹೋರಾಟದ ರೂಪು-ರೇಷೆಗಳನ್ನು ಸಿದ್ದಪಡಿಸುವ ಬಗ್ಗೆ ತೀರ್ಮಾನ ಕೈಗೊಳ್ಳುವ ಸಾಧ್ಯತೆ ಇದೆ.



ಕನ್ನಡದ ಏಕತೆಯ ನೃತ್ಯರೂಪಕ ಪ್ರದರ್ಶನ

ದಾವಣಗೆರೆ, ಆ. 27 – ನಗರದ ಖುಷಿ ಇವೆಂಟ್ಸ್ ವತಿಯಿಂದ ಜಯದೇವ ವೃತ್ತದಲ್ಲಿ ಕನ್ನಡ ಭಾಷೆಯ ಏಕತೆ, ಸಂಸ್ಕೃತಿ ಬಿಂಬಿಸುವ ಸಾಮೂಹಿಕ ನೃತ್ಯ ರೂಪಕವನ್ನು ಆಯೋಜಿಸಲಾಗಿತ್ತು.

ಭಾರತದಲ್ಲಿ ವಿಲೀನವಾಗಲು ಮೈಸೂರು ಮಹಾರಾಜರು ಒಪ್ಪಂದಕ್ಕೆ ಸಹಿ ಮಾಡಿದ ಐತಿಹಾಸಿಕ ಘಟನೆ ಬಗ್ಗೆ ಜಾಗೃತಿ ಮೂಡಿಸಲು ಈ ಕಾರ್ಯಕ್ರಮ ಆಯೋಜಿಸಲಾಗಿತ್ತು.

ಖುಷಿ ಇವೆಂಟ್ಸ್ ವತಿಯಿಂದ ಆಯೋಜಿಸಲಾಗಿರುವ ಮಿಸ್ಟರ್ ಅಂಡ್ ಮಿಸಸ್ ದಾವಣಗೆರೆ ಕಾರ್ಯಕ್ರಮದಲ್ಲಿ ಅಂತಿಮ ಸುತ್ತಿಗೆ ಆಯ್ಕೆಯಾದ ಸ್ಪರ್ಧಿಗಳು, ವಿವಿಧ ಕನ್ನಡ ಪರ ಸಂಘಟನೆಗಳವರು ಈ ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದರು.

ಪಾಲಿಕೆ ಪ್ರತಿಪಕ್ಷದ ನಾಯಕ ಮಂಜುನಾಥ್ ಗಡಿಗುಡಾಳ್, ಪಾಲಿಕೆ ಸದಸ್ಯ ಎ. ನಾಗರಾಜ್, ಖುಷಿ ಇವೆಂಟ್ಸ್‌ನ ಮಯೂರ್, ಶಿವ ರತನ್, ರೂಪಿತ್ ನಾಗರಾಜ್, ಕನ್ನಡಪರ ಸಂಘಟನೆಯ ಒಕ್ಕೂಟದ ಅಧ್ಯಕ್ಷ ಶಿವಣ್ಣ, ನಾಗರಾಜ ಗೌಡ ಮತ್ತಿತರರು ಉಪಸ್ಥಿತರಿದ್ದರು.

## ಡೈಮಂಡ್ ಲೀಗ್‌ನಲ್ಲಿ ಛೋಪ್ರಾಗೆ ಪ್ರಶಸ್ತಿ

ಲೌಸಾನ್ನೆ, ಆ. 26 – ಡೈಮಂಡ್ ಲೀಗ್ ಮೀಟಿಂಗ್ ಸ್ಪರ್ಧೆಯ ಜಾವಲಿನ್ ಎಸೆತದಲ್ಲಿ ನೀರಜ್ ಛೋಪ್ರ ಅವರು ಗೆಲುವು ದಾಖಲಿಸಿದ್ದಾರೆ. ಇದು ಒಲಂಪಿಕ್‌ನಲ್ಲಿ ಸ್ವರ್ಣ ವಿಜೇತ ಛೋಪ್ರ ಅವರಿಗೆ ಮತ್ತೊಂದು ಗರಿಯಾಗಿದೆ.

24 ವರ್ಷದ ಛೋಪ್ರ ಅವರು ಮೊದಲ ಪ್ರಯತ್ನದಲ್ಲಿ ಜಾವಲಿನ್ ಅನ್ನು 89.08 ಮೀಟರ್ ದೂರ ದಾಖಲಿಸುವ ಮೂಲಕ ಗೆಲುವು ತಮ್ಮದಾಗಿಸಿಕೊಂಡಿದ್ದಾರೆ. ಗಾಯದ ಕಾರಣದಿಂದಾಗಿ ಛೋಪ್ರ ಅವರು ಬರ್ಮಿಂಗ್‌ಹ್ಯಾಮ್ ಕಾಮನ್‌ವೆಲ್ತ್ ಕ್ರೀಡಾಕೂಟದಲ್ಲಿ ಭಾಗವಹಿಸಿರಲಿಲ್ಲ.






## ನಗರದಲ್ಲಿ ಇಂದು ಶ್ರೀ ಲಿಂಗೇಶ್ವರ ಸ್ವಾಮಿ ರಥೋತ್ಸವ



ಶ್ರೀ ಲಿಂಗೇಶ್ವರ ಸ್ವಾಮಿ ರಥೋತ್ಸವವು ಇಂದು ನಡೆಯಲಿದೆ. ಬ್ರಾಹ್ಮೀ ಶುಭ ಮುಹೂರ್ತದಲ್ಲಿ ಶ್ರೀ ಲಿಂಗೇಶ್ವರ ಸ್ವಾಮಿಗೆ ಮಹಾರುದ್ರಾಭಿಷೇಕ, ಪ್ರಸಾದ ವಿನಿಯೋಗ ಏರ್ಪಾಡಾಗಿದ್ದು, ನಂತರ ಬೆಳಿಗ್ಗೆ 9.30 ರಿಂದ ರಾಜ ಬೀದಿಗಳಲ್ಲಿ ಶ್ರೀ ಲಿಂಗೇಶ್ವರ ಸ್ವಾಮಿಯ ರಥೋ ತ್ಸವ ಜರುಗಲಿದೆ. ಭಕ್ತಾದಿಗಳಿಗೆ ಅನ್ನ ಸಂತರ್ಪಣೆ ಏರ್ಪಡಿಸಲಾಗಿದೆ. ಪ್ರಪಂಚದಾದ್ಯಂತ ತಾಂಡವ ವಾಡಿದ ಕೊರೊನಾ ಅಲೆಯ ಹಿನ್ನೆಲೆಯಲ್ಲಿ ಸರ್ಕಾ ರದ ಮಾರ್ಗಸೂಚಿ ಅನ್ವಯ ಶ್ರೀ ಲಿಂಗೇಶ್ವರ ಸ್ವಾಮಿ ರಥೋತ್ಸವ ನಡೆಸಲು ಸಾಧ್ಯವಾಗಿರಲಿಲ್ಲ. ಈ ವರ್ಷ ಶ್ರೀ ಸ್ವಾಮಿ ರಥೋತ್ಸವ ಪದ್ಧತಿ ಪ್ರಕಾರ ನಡೆಸಲು ದೇವಸ್ಥಾನದ ಆಡಳಿತ ಮಂಡಳಿ ತೀರ್ಮಾನಿಸಿದೆ. ಭಕ್ತಾಧಿಗಳು ಪೂಜಾ ಕಾರ್ಯಕ್ರಮ ಮತ್ತು ರಥೋತ್ಸವ ಹಾಗೂ ಅನ್ನ ಸಂತರ್ಪಣೆ ಕಾರ್ಯಕ್ರಮಗಳಲ್ಲಿ ಪಾಲ್ಗೊಳ್ಳುವುದರ ಮೂಲಕ ಶ್ರೀ ಸ್ವಾಮಿಯ ಕೃಪೆಗೆ ಪಾತ್ರರಾಗಬೇಕೆಂದು ದೇವಸ್ಥಾನದ ಆಡಳಿತ ಮಂಡಳಿ ವಿನಂತಿಸಿದೆ.

## ಅಕ್ಟೋಬರ್‌ನಿಂದ ರಸಗೊಬ್ಬರಗಳಿಗೆ ಒಂದೇ ಬ್ರಾಂಡ್

ನವದೆಹಲಿ, ಆ. 27 – ಯುರಿಯಾ ಹಾಗೂ ಡಿಎಪಿ ಸೇರಿದಂತೆ ಸಬ್ಸಿಡಿ ಹೊಂದಿರುವ ಎಲ್ಲ ರಸಗೊಬ್ಬರಗಳನ್ನು ಬರುವ ಅಕ್ಟೋಬರ್‌ನಿಂದ ರೈತರಿಗೆ 'ಭಾರತ್' ಎಂಬ ಒಂದೇ ಬ್ರಾಂಡ್‌ನಲ್ಲಿ ಮಾರಲಾಗುವುದು.

ಒಂದು ದೇಶ, ಒಂದು ರಾಸಗೊಬ್ಬರ ಘೋಷಣೆಯ ಅನ್ವಯ ಈ (2ನೇ ಪುಟಕ್ಕೆ)


6ನೇ ವರ್ಷದ ಪುಣ್ಯಸ್ಮರಣೆ



ಶ್ರೀಮತಿ ಹೆಚ್. ಹಾಲಮ್ಮ ಕರೆಪ್ಪನವರ್

"ಅಮ್ಮ ಎನ್ನಲು ಕೋಟಿ ಪುಣ್ಯವೋ
ಇವಳ ತ್ಯಾಗಕ್ಕೆ ಸಾಟಿ ಇಲ್ಲವೋ
ದೇವರಿಗೆಲ್ಲ ಮಿಗಿಲಾದ ದೇವರು ಅಮ್ಮ"
ನಿಮ್ಮ ನೆನಪು ನಮ್ಮ ಜೀವನಕ್ಕೆ ಸ್ಫೂರ್ತಿ
ನಿಮ್ಮ ಸ್ಮರಣೆಯೇ ನಮ್ಮ ಶಕ್ತಿ....

Miss you Ajji...
- Amogh

ಸದಾ ನಿಮ್ಮ ನೆನಪಲ್ಲಿ : ◆ಹೆಚ್. ಆಂಜನೇಯ, ಮಾಜಿ ಸಚಿವರು ◆ಹೆಚ್.ಬಿ. ಕರೆಪ್ಪನವರ್ ◆ರಾಕೇಶ್ ಹೆಚ್., ಅನಿತಾ ರಾಕೇಶ್, ಸ್ವಾಮಿ ವಿವೇಕಾನಂದ ಲೇಔಟ್, ದಾವಣಗೆರೆ.





# ಶಿಕ್ಷಣ ಇಲಾಖೆಯನ್ನು ಭ್ರಷ್ಟಾಚಾರ ಮುಕ್ತ ಮಾಡಲಾಗುವುದು : ವೈಎಎನ್



ಹರಿಹರ

ಹರಿಹರ, ಆ. 27 - ಶಿಕ್ಷಣ ಇಲಾಖೆಯನ್ನು ಭ್ರಷ್ಟಾಚಾರ ಮುಕ್ತ ಇಲಾಖೆಯನ್ನಾಗಿ ಮಾಡಲಾಗುವುದು ಎಂದು ವಿಧಾನ ಪರಿಷತ್ ಮುಖ್ಯ ಸಚೇತಕ ವೈ.ಎ. ನಾರಾಯಣಸ್ವಾಮಿ ಹೇಳಿದರು.

ನಗರದ ಬಿಇಓ ಕಚೇರಿಯ ಸಭಾಂಗಣದಲ್ಲಿ ಮೊನ್ನೆ ನಡೆದ ಕಾರ್ಯಕ್ರಮದ ನಂತರ ತಮ್ಮನ್ನು ಭೇಟಿಯಾದ ಪತ್ರಕರ್ತರೊಂದಿಗೆ ಅವರು ಮಾತನಾಡಿದರು.

ಬಿಜೆಪಿ ಸರ್ಕಾರ ಆಡಳಿತಕ್ಕೆ ಬಂದ ನಂತರದಲ್ಲಿ ಶಿಕ್ಷಣ ಇಲಾಖೆಗೆ ಸರ್ವ ರೀತಿಯಲ್ಲೂ ಸಹಕಾರವನ್ನು ನೀಡುತ್ತಾ ಬಂದಿದೆ. ಹಿಂದೆ ಆಡಳಿತ ಮಾಡಿದ ಜೆಡಿಎಸ್ ಮತ್ತು ಕಾಂಗ್ರೆಸ್ ಸರ್ಕಾರಕ್ಕೆ ಹೆಚ್ಚಿನ ಪ್ರೋತ್ಸಾಹ ನೀಡುತ್ತಿರಲಿಲ್ಲ ಎಂದರು.

ನಮ್ಮ ಸರ್ಕಾರದ ಅವಧಿಯಲ್ಲಿ ಶಿಕ್ಷಕರ ಏಳಿಗೆಗಾಗಿ 5 ಮತ್ತು 6ನೇ ವೇತನವನ್ನು ಜಾರಿಗೆ ತರಲಾಗಿದೆ. ಮುಂದೆ 7ನೇ ವೇತನವನ್ನು ಜಾರಿಗೊಳಿ ಸುವ ಕಾರ್ಯ ಮಾಡಲಾಗುವುದು ಎಂದವರು ಹೇಳಿದರು.

ನಮ್ಮ ವ್ಯಾಪ್ತಿಯಲ್ಲಿ ಬರುವ 5 ಜಿಲ್ಲೆಯ ಶಾಲೆಗಳಲ್ಲಿ ಒಂದು ಘಟಕಕ್ಕೆ 2 ಲಕ್ಷ ರೂಪಾಯಿಯಂತೆ ಸುಮಾರು 20 ಕೋಟಿ ವೆಚ್ಚದಲ್ಲಿ 1 ಸಾವಿರ ಶುದ್ಧ ಕುಡಿಯುವ ನೀರಿನ ಘಟಕಗಳನ್ನು ಆರಂಭಿಸಲಾಗುವುದು. ಅದರ ಅನ್ವಯ ಇಂದು ಹರಿಹರ ತಾಲ್ಲೂಕಿನ 5 ಶಾಲೆಗಳಲ್ಲಿ ನೀರಿನ ಘಟಕಗಳಿಗೆ ಚಾಲನೆ ನೀಡಲಾಯಿತು ಎಂದರು.

ಈಗಾಗಲೇ ರಾಜ್ಯ ಸರ್ಕಾರ 2015 ಕ್ಕೆ ಮುಂಚಿತವಾಗಿ ಖಾಲಿ ಇದ್ದ 15 ಸಾವಿರ ಅನುದಾನಿತ ಶಿಕ್ಷಕರ ನೇಮಕಾತಿ ಭರ್ತಿ ಮಾಡಲು ಅಧಿಸೂಚನೆ ಹೊರಡಿಸಿದೆ ಎಂದು ಹೇಳಿದರು.

ಬಿಇಓಗಳ ನಡವಳಿಕೆಯ ಬಗ್ಗೆ ಈಗಾಗಲೇ ಪರಿಶೀಲನೆ ನಡೆಯುತ್ತಿದೆ. ಎಲ್ಲಾ ಬಿಇಓಗಳು ತಮ್ಮ ಕೈ ಸ್ವಚ್ಛವಾಗಿ ಇಟ್ಟುಕೊಂಡು ಕೆಲಸ ಮಾಡಬೇಕು ಎಂದು ತಿಳಿಸಿದರು.

ಈ ಸಂದರ್ಭದಲ್ಲಿ ಬಿಇಓ ಬಿ.ಸಿ.ಸಿದ್ದಪ್ಪ, ಶಿಕ್ಷಕರಾದ ಪದ್ದಪ್ಪ, ತಿಪ್ಪಣ್ಣರಾಜ್, ಡಿ.ಎಂ. ಮಂಜುನಾಥಯ್ಯ, ರೇವಣ್ಣನಾಯ್ಕ್ , ಶ್ರೀಧರಮಯ್ಯ, ಶಿವಮೂರ್ತಿ, ನಿವೃತ್ತ ಶಿಕ್ಷಕರಾದ ಕೃಷ್ಣಮೂರ್ತಿ ಶೆಟ್ಟಿ, ಕುಮಾರ್ ಸ್ವಾಮಿ, ಎಂ.ಎನ್. ಬಸವರಾಜಪ್ಪ ದಾವಣಗೆರೆ ರಾಮರಡ್ಡಿ ಮತ್ತಿತರರು ಹಾಜರಿದ್ದರು.

# ಶಾಂತಿ - ಸುವ್ಯವಸ್ಥೆಯಡಿಯಲ್ಲಿ ಗಣೇಶ ಹಬ್ಬ ಆಚರಿಸಲು ಕರೆ

ಹರಪನಹಳ್ಳಿ, ಆ.27- ಶಾಂತಿ ಹಾಗೂ ಸುವ್ಯವಸ್ಥೆ ಅಡಿಯಲ್ಲಿ ಗಣೇಶ ಹಬ್ಬವನ್ನು ಸರ್ಕಾರದ ನಿಯಮದಂತೆ ಆಚರಿಸಲು ಮುಂದಾಗಬೇಕು ಎಂದು ಉಪ ವಿಭಾಗಾಧಿಕಾರಿ ಟಿ.ವಿ.ಪ್ರಕಾಶ್ ಕರೆ ನೀಡಿದ್ದಾರೆ.

ಪಟ್ಟಣದ ನಟರಾಜ ಕಲಾಭವನದಲ್ಲಿ ತಾಲ್ಲೂಕು ಆಡಳಿತ ಹರಪನಹಳ್ಳಿ ಹಾಗೂ ಪೊಲೀಸ್ ಇಲಾಖೆಯ ವತಿಯಿಂದ ಇಂದು ಆಯೋಜಿಸಿದ್ದ ಗೌರಿ - ಗಣೇಶ ಹಬ್ಬದ ಪ್ರಯುಕ್ತ ಶಾಂತಿ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು, ಕೊರೊನಾದಿಂದ ಎರಡು ವರ್ಷ ಆಚರಣೆ ಸರಳವಾಗಿತ್ತು, ಈ ಬಾರಿ ಕೆಲವು ಕಾನೂನು ಚೌಕಟ್ಟಿನಲ್ಲಿ ಅದ್ಧೂರಿಯಾಗಿ ನಾವೆಲ್ಲರೂ ಹಬ್ಬವನ್ನು ಸಂಭ್ರಮಿಸೋಣ ಎಂದರು.

ನದಿ ಪಾತ್ರದ ಗ್ರಾಮಗಳಲ್ಲಿನ ಜನರು ಗಣೇಶ ವಿಸರ್ಜನೆ ವೇಳೆ ಜಾಗೃತಿ ಇರಲಿ, ನಮ್ಮ ಜೀವ ನಮ್ಮ ಕೈಯಲ್ಲಿದೆ ಎನ್ನುವ ಭಾವನೆಯೊಂದಿಗೆ, ಪೊಲೀಸ್ ಇಲಾಖೆಯ ಸಹಕಾರ



ದಿಂದ ಹಬ್ಬವನ್ನು ಸಂತಸದಿಂದ ಆಚರಿಸಬೇಕು ಎಂದು ಅವರು ಕಿವಿಮಾತು ಹೇಳಿದರು.

ಡಿವೈಎಸ್‌ಪಿ ವಿ.ಎಸ್.ಹಾಲಮೂರ್ತಿ ಮಾತನಾಡಿ, ಪಟ್ಟಣ ಸೇರಿದಂತೆ ತಾಲ್ಲೂಕಿನಾದ್ಯಂತ ಗಣೇಶೋತ್ಸವ ಆಚರಿಸುವ ಸಂಘ-ಸಂಸ್ಥೆಗಳು ಯಾವುದೇ ಧಾರ್ಮಿಕ ಭಾವನೆಗೆ ದಕ್ಕೆಯಾಗದಂತೆ ಹಬ್ಬವನ್ನು ಆಚರಿಸಬೇಕು. ಉಚ್ಚ ನ್ಯಾಯಾಲಯದ ನಿರ್ದೇಶನ ಹಾಗೂ ಜಿಲ್ಲಾಧಿಕಾರಿಗಳ ಆದೇಶದಂತೆ ಡಿಜೆ ಧ್ವನಿವರ್ಧಕ ಹಾಗೂ ಇತರೆ ನಿಯಮಗಳನ್ನು ಕಡ್ಡಾಯವಾಗಿ ಪಾಲಿಸಬೇಕು ಎಂದರು.

**ಶಾಂತಿ ಸಭೆಯಲ್ಲಿ ಹರಪನಹಳ್ಳಿ ಉಪ ವಿಭಾಗಾಧಿಕಾರಿ ಟಿ.ವಿ.ಪ್ರಕಾಶ್**

ಸಿಪಿಐ ನಾಗರಾಜ ಕಮ್ಮಾರ ಮಾತನಾಡಿ, ಗಣಪತಿ ಪ್ರತಿಷ್ಠಾಪನೆಯ ಪೆಂಡಾಲ್‌ಗಳಲ್ಲಿ ಸಿ.ಸಿ.ಕ್ಯಾಮೆರಾ ಅಳವಡಿಸಿ, ಅನಧಿಕೃತ ವಿದ್ಯುತ್ ಸಂಪರ್ಕ ಬೇಡ, ಗಣೇಶ ಸ್ಥಾಪನೆಯಿಂದ ವಿಸರ್ಜನೆಯವರೆಗೂ ನಿಮ್ಮ ಕರ್ತವ್ಯ ಇರುತ್ತದೆ. ನಮ್ಮ ಸಿಬ್ಬಂದಿ ಸಹ ಇರುತ್ತಾರೆ. ರಾತ್ರಿ 10ರಿಂದ ಬೆಳಿಗ್ಗೆ 6 ವರೆಗೂ ಧ್ವನಿವರ್ಧಕ ಬಳಸಬಾರದು, ಗ್ರಾಮೀಣ ಭಾಗದಲ್ಲಿ ಜೂಜಾಟ, ಇಸ್ಪೀಟ್ ಆಡುವಂತಿಲ್ಲ, ಸುಳ್ಳು ಸುದ್ದಿಯನ್ನು ಸಾಮಾಜಿಕ ಜಾಲತಾಣದಲ್ಲಿ ಹಾಕುವ ಬದಲು ನಮ್ಮ ಗಮನಕ್ಕೆ ತನ್ನಿ, ಎಲ್ಲರೂ ಸರ್ಕಾರದ ನಿರ್ದೇಶನವನ್ನು ಪಾಲನೆ ಮಾಡೋಣ ಎಂದರು.

ಪುರಸಭೆ ಅಧ್ಯಕ್ಷ ಎಚ್.ಎಂ.ಅಶೋಕ, ಪುರಸಭೆ ಮುಖ್ಯಾಧಿಕಾರಿ ಎರಗುಡಿ ಶಿವಕುಮಾರ, ತಹಶೀಲ್ದಾರ್ ಡಾ.ಶಿವಕುಮಾರ ಬಿರಾದಾರ, ಪಿಎಸ್‌ಐ ಪ್ರಕಾಶ್, ಪ್ರಶಾಂತ ಮಾತನಾಡಿದರು.

ಪುರಸಭೆ ಸದಸ್ಯ ಕಿರಣ ಶ್ಯಾನಭಾಗ್, ಗೌಳಿ ವಿನಯ, ಹನುಮಂತಪ್ಪ, ಯಡಿಹಳ್ಳಿ ಗ್ರಾಮ ಪಂಚಾಯಿತಿ ಮಾಜಿ ಅಧ್ಯಕ್ಷ ಶೇಖರಪ್ಪ, ಹಲುವಾಗಲು ಪಿಎಸ್‌ಐ ಗುರುರಾಜ, ಚಿಗಟೇರಿ ಪಿಎಸ್‌ಐ ನಾಗರಾಜ, ವಿದ್ಯುತ್ ಇಲಾಖೆಯ ಮಾರುತೇಶ್, ಡಿಸ್ ವೆಂಕಟೇಶ, ಮಾರುತಿ, ನಿಟ್ಟೂರು ಸುರೇಶ ಸೇರಿದಂತೆ ಇತರರು ಸಭೆಯಲ್ಲಿ ಉಪಸ್ಥಿತರಿದ್ದರು.

# ಮಲೇಬೆನ್ನೂರು : ಮತದಾರರ ಪಟ್ಟಿಗೆ ಆಧಾರ್ ಜೋಡಣೆ ಮಾಡುವಂತೆ ಜಾಥಾ



ಮಲೇಬೆನ್ನೂರು, ಆ.27- ಪ್ರತಿಯೊಬ್ಬ ಮತದಾರರು ತಮ್ಮ ಮತದಾರ ಪಟ್ಟಿಗೆ ಆಧಾರ್ ಜೋಡಣೆ ಮಾಡುವಂತೆ ಪಟ್ಟಣದಲ್ಲಿ ಶನಿವಾರ ನಾಡ ಕಚೇರಿ ಮತ್ತು ಪುರಸಭೆ ವತಿಯಿಂದ ವಿಶೇಷ ಅಭಿಯಾನ ನಡೆಸಲಾಯಿತು.

ಈ ಕುರಿತು ವಿವಿಧ ವಾರ್ಡ್‌ಗಳಲ್ಲಿ ಜಾಗೃತಿ ಜಾಥಾ ನಡೆಸಿದ ಉಪತಹಶೀಲ್ದಾರ್ ಆರ್. ರವಿ, ಪುರಸಭೆ ಮುಖ್ಯಾಧಿಕಾರಿ ಎ. ಸುರೇಶ್ ಅವರು, ಮತದಾರರ ಪಟ್ಟಿಗೆ ಆಧಾರ್ ಕಾರ್ಡ್ ಜೋಡಣೆ ಮಾಡಿಸುವ ಕುರಿತು ಜನರಿಗೆ ಮಾಹಿತಿ ನೀಡಿದರು.

ಪುರಸಭೆ ಸದಸ್ಯರಾದ ಕೆ.ಜಿ.ಲೋಕೇಶ್, ಸಾಬೀರ್ ಅಲಿ, ಗ್ರಾಮ ಲೆಕ್ಕಾಧಿಕಾರಿ ಕೊಟ್ರೇಶ್, ವಿಕಲ ಚೇತನರ ಸಂಘದ ಅಧ್ಯಕ್ಷ ಪಿ.ಗಂಗಾಧರ್, ಮುಖ್ಯ ಶಿಕ್ಷಕ ಮೊಹಮ್ಮದ್ ಖಲೀಲ್, ಅಂಗನವಾಡಿ ಕಾರ್ಯಕರ್ತೆ ಮಂಜುಳಾ, ಗ್ರಾಮ ಸಹಾ ಯಕ ಮಾರುತಿ ಮತ್ತಿತರರು ಜಾಥಾದಲ್ಲಿ ಭಾಗವಹಿಸಿದ್ದರು.

# ಅಕ್ರಮ ಪಡಿತರ ಅಕ್ಕಿ ವಶ : ಬಂಧನ

ಮಲೇಬೆನ್ನೂರು, ಆ.27- ಸಾರ್ವಜನಿಕರಿಗೆ ನೀಡಿರುವ ಪಡಿತರ ಚೀಟಿಯ ಅಕ್ಕಿಯನ್ನು ಅಕ್ರಮವಾಗಿ ಸಂಗ್ರಹಿಸಿ, ಸಾಗಾಟ ಮಾಡುತ್ತಿದ್ದ ಪಟ್ಟಣದ ಮುಕ್ತಿಯಾರ್ ಎಂಬಾತನನ್ನು ಮಲೇಬೆನ್ನೂರು ಪೊಲೀಸರು ಶನಿವಾರ ಅಕ್ಕಿ ಸಮೇತ ಬಂದಿಸಿದ್ದಾರೆ.



ಮಲೇಬೆನ್ನೂರು

ಆಹಾರ ನಿರೀಕ್ಷಕ ಎಂ.ನಜರುಲ್ಲಾ ಅವರ ದೂರಿನನ್ವಯ ಮಲೇ ಬೆನ್ನೂರು ಪಿಎಸ್‌ಐ ರವಿಕುಮಾರ್ ಹಾಗೂ ಅವರ ಸಿಬ್ಬಂದಿಗಳು ಮುಕ್ತಿಯಾರ್ ಎಂಬಾತನ ಚಲನವನ ಗಮನಿಸಿ, ಶನಿವಾರ ಟಾಟಾ ಏಸ್ ವಾಹನ ದಲ್ಲಿ ಸುಮಾರು 22 ಚೀಲ ಪಡಿತರ ಅಕ್ಕಿಯನ್ನು ಅಕ್ರಮವಾಗಿ ಹೆಚ್ಚಿನ ಹಣ ಕ್ಕಾಗಿ ಬೇರೆಡೆಗೆ ಸಾಗಿಸುತ್ತಿರುವಾಗ ದಾಳಿ ಮಾಡಿ, ವಶಕ್ಕೆ ಪಡೆದುಕೊಂಡಿದ್ದಾರೆ.

# ಪ್ರತಿ ತಿಂಗಳು ರಾಜ್ಯಕ್ಕೆ ಮೋದಿ ಆಗಮನ

**(1ನೇ ಪುಟದಿಂದ)** ಮಾತನಾಡಿರುವ ಯಡಿಯೂರಪ್ಪ, ರಾಜ್ಯದಲ್ಲಿ ಬಿಜೆಪಿ ಅಧಿಕಾರಕ್ಕೆ ಮರಳುವುದನ್ನು ತಡೆಯಲು ಯಾರಿಂದಲೂ ಸಾಧ್ಯವಿಲ್ಲ ಎಂದಿದ್ದಾರೆ. ಪ್ರಧಾನಿ ಮೋದಿ ಅವರು ಸೆಪ್ಟೆಂಬರ್ 2ರಂದು ಮಂಗಳೂರಿನಲ್ಲಿ ಆಯೋಜಿಸಲಾಗಿರುವ ಸಮಾರಂಭದಲ್ಲಿ ಪಾಲ್ಗೊಳ್ಳಲಿದ್ದಾರೆ ಎಂದು ಯಡಿಯೂರಪ್ಪ ಹೇಳಿದ್ದಾರೆ.

# ಕ್ಷುದ್ರ ರಾಜಕೀಯಕ್ಕೆ ಸಾವರ್ಕರ್ ದೂಷಣೆ



**(1ನೇ ಪುಟದಿಂದ)** ಎಂದು ಆರೋಪಿ ಸಲಾಗುತ್ತಿದೆ. ದೇಶವನ್ನು ಎರಡು ಭಾಗ ಮಾಡಿ ಇನ್ನೊಬ್ಬರಿಗೆ ಕೊಡಲು ಸಾವರ್ಕರ್ ಅವರಿಗೆ ತಲೆ ಕೆಟ್ಟಿರಲಿಲ್ಲ. ದೇಶ ವಿಭಜನೆಯ ಸಿದ್ಧಾಂತ ಪ್ರತಿಪಾದಿಸಿದ್ದು ಸರ್ ಸೈಯದ್ ಅಹಮದ್. ದೇಶ ವಿಭಜನೆಯ ಪ್ರತಿಯೊಂದು ಹಂತದ ಬಗ್ಗೆ ಅವರು ಹೇಳಿದ್ದರು. ಈ ಬಗ್ಗೆ 1937ರಲ್ಲೇ ಸಾವರ್ಕರ್ ಎಚ್ಚರಿಕೆ ನೀಡಿದ್ದರು. ಆಗಿನ ಕಾಂಗ್ರೆಸ್ ಮುಸ್ಲಿಮ್ ಓಲೈಕೆಯ ಧೋರಣೆ ಅನುಸರಿಸ ಬಾರದು ಎಂದು ತಿಳಿಸಿದ್ದರು ಎಂದು ಶ್ರೀಲಕ್ಷ್ಮಿ ಹೇಳಿದರು.

ಕೇವಲ ಒಂದು ಪಾಕಿಸ್ತಾನ ಅಲ್ಲ, ಆಗಿನ ಹಲವಾರು ಪ್ರಾಂತ್ಯಗಳಲ್ಲಿ 13 'ಸ್ಥಾನ'ಗಳನ್ನು ರೂಪಿಸಲು ನೀಲನಕ್ಷೆಗಳನ್ನು ರೂಪಿಸಲಾಗಿತ್ತು. ಅಂತಹ ಪ್ರಯತ್ನಗಳನ್ನು ಸಾವರ್ಕರ್ ವಿರೋಧಿಸಿದ್ದರು ಎಂದು ಹೇಳಿದರು.

ಸಾವರ್ಕರ್ ಅವರು ವೈಯಕ್ತಿಕ ಪ್ರಕರಣದಲ್ಲಿ ಜೈಲಿಗೆ ಹೋಗಿದ್ದರು ಎಂದೂ ಕೆಲವರು ಆರೋಪಿಸುತ್ತಿದ್ದಾರೆ. ಆದರೆ, ಬ್ರಿಟಿಷ್ ಸಾಮ್ರಾಜ್ಯಶಾಹಿ ವಿರುದ್ಧದ ಹೋರಾಟಕ್ಕಾಗಿ ಅವರು ಜೈಲಿಗೆ ಹೋಗಿದ್ದರು. ಅವರ ಇಡೀ ಕುಟುಂಬ ದೇಶಕ್ಕಾಗಿ ತ್ಯಾಗ ಬಲಿದಾನ ಮಾಡಿತ್ತು. ಅವರು 1857ರ ಸ್ವಾತಂತ್ರ್ಯ ಹೋರಾಟದ ಕುರಿತು ಬರೆದ ಪುಸ್ತಕ ಕ್ರಾಂತಿಕಾರಿಗಳಿಗೆ ಭಗವದ್ಗೀತೆ ಆಗಿತ್ತು ಎಂದವರು ಹೇಳಿದರು.

ನೇತಾಜಿ ಸುಭಾಷ್ ಚಂದ್ರ ಬೋಸ್ ಅವರ ಹೋರಾಟಕ್ಕೂ ಸಾವರ್ಕರ್ ಅವರ ಪುಸ್ತಕ ತಾಲೀಮು ಒದಗಿಸಿತ್ತು. ಎರಡನೇ ಮಹಾಯುದ್ಧ ಬಳಸಿಕೊಂಡು ಭಾರತ ಸ್ವಾತಂತ್ರ್ಯದ ಹೋರಾಟದಲ್ಲಿ ಯಶಸ್ಸು ಗಳಿಸಬಹುದು ಎಂಬ ಚಿಂತೆ ಸಾವರ್ಕರ್ ಅವರಲ್ಲಿತ್ತು ಎಂದರು.

ಪ್ರಾಸ್ತಾವಿಕವಾಗಿ ಮಾತನಾಡಿದ ಹಿರಿಯ ಸಮಾಜ ಸೇವಕ ಕೆ.ಬಿ. ಶಂಕರ ನಾರಾಯಣ, ಎಡಪಂಥೀಯರಾಗಿರುವ ಬರಗೂರು ರಾಮಚಂದ್ರಪ್ಪ ಅವರ ನೇತೃತ್ವದ ಸಮಿತಿ ಪಠ್ಯದಲ್ಲಿ ಭಾರತದ ಇತಿಹಾಸ ತಿರುಚಿತ್ತು. ನಂತರದಲ್ಲಿ ರೂಪಿಸಲಾದ ಸಮಿತಿ ನೈಜ ಇತಿಹಾಸ ಬರೆಯುತ್ತಿದೆ ಎಂದು ಹೇಳಿದರು.

ವೇದಿಕೆಯ ಮೇಲೆ ದಾವಣಗೆರೆ - ಹರಿಹರ ಅರ್ಬನ್ ಕೋ ಆಪರೇಟಿವ್ ಬ್ಯಾಂಕ್ ಅಧ್ಯಕ್ಷ ಎನ್.ಎ. ಮುರುಗೇಶ್ ಉಪಸ್ಥಿತರಿದ್ದರು.

# ಬಿಲ್ಕಿಸ್ ಬಾನು ಅತ್ಯಾಚಾರ, ಕೊಲೆ ಪ್ರಕರಣ

## ಅಪರಾಧಿಗಳ ಶಿಕ್ಷಾ ವಿನಾಯಿತಿ ಹಿಂಪಡೆಗೆ ಆಗ್ರಹ



ದಾವಣಗೆರೆ, ಆ.27- ಬಿಲ್ಕಿಸ್ ಬಾನು ಪ್ರಕರಣದಲ್ಲಿ ಅಪರಾಧಿಗಳ ಶಿಕ್ಷಾ ವಿನಾಯಿತಿ ಅಥವಾ ಅವಧಿಪೂರ್ವ ಬಿಡುಗಡೆಯನ್ನು ತಕ್ಷಣವೇ ಹಿಂಪಡೆಯಬೇಕು ಮತ್ತು ಕಠಿಣ ಸಜೆಯನ್ನು ಮುಂದುವರೆಸಬೇಕು ಎಂದು ಆಗ್ರಹಿಸಿ, ಪ್ರಗತಿಪರ ಸಂಘಟನೆಗಳ ಒಕ್ಕೂಟದ ನೇತೃತ್ವದಲ್ಲಿ ಇಂದು ನಗರದಲ್ಲಿ ಪ್ರತಿಭಟನೆ ನಡೆಸಲಾಯಿತು.

ಜಯದೇವ ವೃತ್ತದಲ್ಲಿ ನೆರಳು ಬೀಡಿ ಕಾರ್ಮಿಕರ ಯೂನಿಯನ್, ಕರ್ನಾಟಕ ರಾಜ್ಯ ಅಲ್ಪಸಂಖ್ಯಾತರ ಜಾಗೃತಿ ವೇದಿಕೆ ಸ್ಲಂ ಜನಂದೋಲ ಕರ್ನಾಟಕ ಹಾಗೂ ಸಾವಿತ್ರಿ ಬಾಪುಲೇ ಮಹಿಳಾ ಸಂಘಟನೆ, ಎಸ್ ಯು.ಸಿ.ಐ.(ಸಿ), ಎಐಎಂಎಸ್‌ಎಸ್, ಸೇಂಟರ್ ಆಫ್ ಇಂಡಿಯನ್ ಟ್ರೇಡ್ ಯೂನಿಯನ್ಸ್, ಕರ್ನಾಟಕ ಸೋಷಿಯಲ್ ಸರ್ವಿಸ್ ಸಂಘಟನೆಗಳು ಒಟ್ಟುಗೂಡಿ ಬಿಲ್ಕಿಸ್ ಬಾನು ಪ್ರಕರಣದಲ್ಲಿ ಸಾಮೂಹಿಕ ಅತ್ಯಾಚಾರ ಮತ್ತು ಕೊಲೆ ಆರೋಪದ ಮೇಲೆ ಜೀವಾವಧಿ ಶಿಕ್ಷೆಗೊಳಗಾಗಿದ್ದ 11 ಅವರಾಧಿಗಳ ಅವಧಿಪೂರ್ವ ಬಿಡುಗಡೆ ಮತ್ತು ಶಿಕ್ಷೆ ಕಡಿತ ಮಾಡಿರುವ ಗುಜರಾತ್ ಸರ್ಕಾರದ ನಡೆ ಖಂಡಿಸಿ ಅಸಮಾಧಾನ ವ್ಯಕ್ತಪಡಿಸಿದವು.

ಗುಜರಾತ್ ಸರ್ಕಾರದ ಈ ನಿರ್ಲಜ್ಜ ಕ್ರಮವು ದೇಶದ ಕಾನೂನನ್ನು ನಿರ್ಲಕ್ಷಿಸುವುದಲ್ಲದೆ ಅತ್ಯಾಚಾರಕ್ಕೊಳಗಾದ ಮಹಿಳೆ, ಬಿಲ್ಕಿಸ್ ಬಾನು ಅವರು ಈಗಲೇ ಅನುಭವಿಸಿರುವ ಮಾನಸಿಕ ವೇದನೆ, ಅವಮಾನ ಮತ್ತು ಹಿಂಸೆಯನ್ನು ಕಡೆಗಣಿಸುತ್ತದೆ. ಗುಜರಾತ್ ಸರ್ಕಾರದ ಈ ಕ್ರಮವು ಮಹಿಳೆಯರ ಮೇಲಿನ ಅತ್ಯಾಚಾರ ಮತ್ತು ಪುರುಷರ ಅತ್ಯಾಚಾರಿ/ಹಿಂಸಾಚಾರಿ ಧೋರಣೆ ಎರಡನ್ನೂ ಬಲಪಡಿಸುತ್ತದೆ ಎಂದು ಆರೋಪಿಸಿದರು.

ಗುಜರಾತ್ ಸರ್ಕಾರವು ಸ್ವಾತಂತ್ರ್ಯದ ಅಮೃತ ಮಹೋತ್ಸವದ ಸಂದರ್ಭದಲ್ಲಿ ಔದಾರ್ಯದಿಂದ ಈ 11 ಅಪರಾಧಿಗಳನ್ನು ಸನ್ನಡತೆಯ ಆಧಾರದ ಮೇಲೆ ಬಿಡುಗಡೆ ಮಾಡಿದೆ. ದೇಶದ ಸರ್ವೋಚ್ಚ ನ್ಯಾಯಾಲಯ, ಗುಜರಾತ್ ರಾಜ್ಯಪಾಲರು, ಕೇಂದ್ರ ಗೃಹ ಮಂತ್ರಾಲಯವು ಸ್ವ ಪ್ರೇರಣೆಯಿಂದ ಈ ಪ್ರಕರಣವನ್ನು ಅಪರೂಪದ ಪ್ರಕರಣ ಎಂದು ಪರಿಗಣಿಸಿ, ಶಿಕ್ಷಾ ವಿನಾಯಿತಿ ಪಡೆದು ಬಿಡುಗಡೆಯಾಗಿರುವ 11 ಅಪರಾಧಿಗಳನ್ನು ನ್ಯಾಯಾಲಯದ ಆದೇಶದಂತೆ ಜೀವಿತಾವಧಿಯ ಸೆರೆವಾಸದ ಶಿಕ್ಷೆಗೊಳಪಡಿಸುವಂತೆ ಒತ್ತಾಯಿಸಿದರು.

ಪ್ರತಿಭಟನೆಯಲ್ಲಿ ತೇಜಸ್ವಿ ಪಟೇಲ್, ಹೆಗ್ಗೆರೆ ರಂಗಪ್ಪ, ರೇಣುಕಾ ಯಲ್ಲಮ್ಮ, ಎಂ. ಕರಿಬಸಪ್ಪ, ಆವರಗೆರೆ ಚಂದ್ರು, ಅನಿಷ ಪಾಷ, ಮಂಜುನಾಥ್ ಕುಕ್ಕವಾಡ, ಭಾರತಿ, ಶಿರೀನ್ ಬಾನು, ನೂರು ಫಾತೀಮ, ಇಮ್ತಿಯಾಜ್ ಹುಸೇನ್, ಫನ್ನಿತಾಹಿರ್, ಭಾಗ್ಯ, ಶಬ್ಬೀರ್ ಸೇರಿದಂತೆ ಇತರರು ಭಾಗವಹಿಸಿದ್ದರು.

# ರಾಣೇಬೆನ್ನೂರಿನಲ್ಲಿ ಅನ್ನ ಸಂತರ್ಪಣೆ




ರಾಣೇಬೆನ್ನೂರು, ಆ.27- ಇಲ್ಲಿನ ಕುರುಬಗೇರಿ ಪ್ರಾಚೀನ ಶ್ರೀ ಬನಶಂಕರಿ ಹಾಗೂ ಸಿದ್ದೇಶ್ವರ ನಗರದ ಶ್ರೀ ಸಿದ್ದೇಶ್ವರ ದೇವಸ್ಥಾನಗಳಲ್ಲಿ ಶ್ರಾವಣ ಮಾಸದ ಪ್ರಯುಕ್ತ ಅನ್ನಸಂತರ್ಪಣೆ ಏರ್ಪಡಿಸಲಾಗಿತ್ತು. ಮಂಜುನಾಥ ಗೌಡ ಶಿವಣ್ಣನವರ, ಶಂಕ್ರಪ್ಪ ಮೈಲಾರ, ಶಂಕ್ರಪ್ಪ ಬುರಡಿಕಟ್ಟಿ, ಎಂ.ಎಂ ಪೂಜಾರ ಮತ್ತಿತರರಿದ್ದರು.

# ಭದ್ರಾ ಜಲಾಶಯಕ್ಕೆ ಇಂದು ಬಾಗಿನ

ಭರ್ತಿಯಾಗಿರುವ ಭದ್ರಾ ಜಲಾಶಯಕ್ಕೆ ಇಂದು ಬೆಳಿಗ್ಗೆ 11.30ಕ್ಕೆ ಮಲೇಬೆನ್ನೂರಿನ ಶಿವ ವಿವಿಧೋದ್ದೇಶ ಸಹಕಾರ ಸಂಘದ ವತಿಯಿಂದ ಬಾಗಿನ ಅರ್ಪಿಸಲಾಗುವುದು ಎಂದು ಸಂಘದ ಅಧ್ಯಕ್ಷ ಡಾ. ಬಿ.ಚಂದ್ರಶೇಖರ್ ತಿಳಿಸಿದ್ದಾರೆ.

# ಸಿಜೆಐ ಆಗಿ ನ್ಯಾಯಮೂರ್ತಿ ಲಲಿತ್ ಪ್ರಮಾಣ ವಚನ



ನವದೆಹಲಿ, ಆ. 27 – ನ್ಯಾಯಮೂರ್ತಿ ಉದಯ್ ಉಮೇಶ್ ಲಲಿತ್ ಅವರು ಸುಪ್ರೀಂ ಕೋರ್ಟ್‌ನ 49ನೇ ಮುಖ್ಯ ನ್ಯಾಯಮೂರ್ತಿಯಾಗಿ ಅಧಿಕಾರ ವಹಿಸಿಕೊಂಡಿದ್ದಾರೆ.

ರಾಷ್ಟ್ರಪತಿ ಭವನದಲ್ಲಿ ಆಯೋಜಿಸಲಾಗಿದ್ದ ಸಮಾರಂಭದಲ್ಲಿ ರಾಷ್ಟ್ರಪತಿ ದ್ರೌಪದಿ ಮುರ್ಮು ಅವರು ನ್ಯಾಯಮೂರ್ತಿ ಲಲಿತ್‌ಗೆ ಪ್ರಮಾಣ ವಚನ ಬೋಧಿಸಿದ್ದಾರೆ. ಲಲಿತ್ ಅವರು ಸುಪ್ರೀಂ ಕೋರ್ಟ್ ಮುಖ್ಯ ನ್ಯಾಯಮೂರ್ತಿಯಾಗಿ 74 ದಿನಗಳ ಕಾಲ ಕಾರ್ಯ ನಿರ್ವಹಿಸಲಿದ್ದಾರೆ. ನವೆಂಬರ್ 8ರಂದು ಅವರು ನಿವೃತ್ತರಾಗಲಿದ್ದಾರೆ.

# ಐ.ಬಿ.ಪಿ.ಎಸ್. ರಾಷ್ಟ್ರೀಕೃತ ಬ್ಯಾಂಕ್ ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ತರಬೇತಿ

ದಾವಣಗೆರೆ, ಆ.27- ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಕರಾಮುವಿ ಸ್ಪರ್ಧಾತ್ಮಕ ಪರೀಕ್ಷಾ ತರಬೇತಿ ಕೇಂದ್ರದ ವತಿಯಿಂದ ಐ.ಬಿ.ಪಿ.ಎಸ್ ರಾಷ್ಟ್ರೀಕೃತ ಬ್ಯಾಂಕ್‌ನವರು ಅಧಿಕಾರಿಗಳ ಮತ್ತು ಗುಮಾಸ್ತರ ಹುದ್ದೆಗಳಿಗೆ ನೇಮಕ ಮಾಡಿಕೊಳ್ಳಲು ನಡೆಸುವ ಸ್ಪರ್ಧಾತ್ಮಕ ಪರೀಕ್ಷೆಗಳಿಗೆ 45 ದಿನಗಳ ತರಬೇತಿಯನ್ನು ನೀಡಲಾಗುತ್ತದೆ. ಆಸಕ್ತರು ನಾಡಿದ್ದು ದಿನಾಂಕ 29 ರೊಳಗಾಗಿ ಹೆಸರು ನೋದಾಯಿಸಿಕೊಳ್ಳಲು ದೂರವಾಣಿ: 0821-2515944 ಸಂಖ್ಯೆಯನ್ನು ಸಂಪರ್ಕಿಸಬಹುದೆಂದು ಕರಾಮುವಿ ಪ್ರಭಾರ ಕುಲಸಚಿವ ಡಾ. ಎ. ಖಾದರ್ ಪಾಷ ಅವರು ತಿಳಿಸಿದ್ದಾರೆ.

# ಆಧಾರ್ - ಮತದಾರರ ಚೀಟಿ ಲಿಂಕ್

**(1ನೇ ಪುಟದಿಂದ)** ಮಾಡುವಂತೆ ಮನವೊಲಿಸಿ ನಂತರ ಪತ್ರಕರ್ತರೊಂದಿಗೆ ಅವರು ಮಾತನಾಡಿದರು.

ಇನ್ನೂ ಕೆಲವೇ ದಿನಗಳಲ್ಲಿ ತಾಲ್ಲೂಕಿನ ಎಲ್ಲಾ ಆಧಾರ ಕಾರ್ಡ್ ಲಿಂಕ್ ಮಾಡುವ ಮೂಲಕ ಜಿಲ್ಲೆಯಲ್ಲೇ ಪ್ರಥಮ ಸ್ಥಾನವನ್ನು ಗಳಿಸುವ ಹೆಜ್ಜೆಗಳನ್ನು ನಮ್ಮ ತಾಲ್ಲೂಕಿನ ಬಿಎಲ್‌ಓ ಮತ್ತು ಅಂಗನವಾಡಿ ಆಶಾ ಕಾರ್ಯಕರ್ತರು ಯಶಸ್ವಿಯಾಗಲಿದ್ದಾರೆ ಎಂದವರು ಹೇಳಿದರು.

ಕೆಲವು ಅಲ್ಪಸಂಖ್ಯಾತ ಜನಾಂಗದ ಜನರು ವಾಸಿಸುವ ಸ್ಥಳದಲ್ಲಿ ಸಾರ್ವಜನಿಕರು ಲಿಂಕ್ ಮಾಡುವುದಕ್ಕೆ ಮುಂದೆ ಬರುತ್ತಿಲ್ಲ. ಅವರ ಮನವೊಲಿಸಲು ಮುಂದಾಗಿರುವುದಾಗಿ ಎಂದು ಹೇಳಿದರು.

ಈ ಸಂದರ್ಭದಲ್ಲಿ ಶಿವಮೂರ್ತಿ, ರಮೇಶ್, ಉದಯಕುಮಾರ್, ಮಂಜುನಾಥ್ ಕಮ್ಮಾರ್ ಮತ್ತಿತರರು ಹಾಜರಿದ್ದರು.

# ರಸಗೊಬ್ಬರಗಳಿಗೆ ಒಂದೇ ಬ್ರಾಂಡ್

**(1ನೇ ಪುಟದಿಂದ)** ಕ್ರಮ ತೆಗೆದುಕೊಳ್ಳ ಲಾಗುತ್ತಿದೆ. ಈ ಯೋಜನೆಗೆ 'ಪ್ರಧಾನ ಮಂತ್ರಿ ಭಾರತೀಯ ಜನುರ್ವಾರಕ್ ಪರಿಯೋಜನ' (ಪಿಎಂ - ಬಿಜೆಪಿ) ಎಂದು ಹೆಸರಿಡಲಾಗಿದೆ ಎಂದು ಕೇಂದ್ರ ರಸಾಯನಿಕ ಹಾಗೂ ರಸಗೊಬ್ಬರ ಸಚಿವ ಮನ್‌ಸುಖ್ ಮಾಂಡವೀಯ ಹೇಳಿದ್ದಾರೆ.

ಗೊಬ್ಬರ ಚೀಲದ ಮೂರನೇ 2 ಭಾಗದಲ್ಲಿ 'ಭಾರತ್' ಬ್ರಾಂಡ್ ಹೆಸರು ಇರಲಿದೆ. ಉಳಿದ ಭಾಗದಲ್ಲಿ ಮಾತ್ರ ಕಂಪನಿಗಳು ಇತರೆ ವಿವರಗಳನ್ನು ಪ್ರಕಟಿಸಲಿವೆ. ರಸಗೊಬ್ಬರಗಳಿಗೆ ಸರ್ಕಾರ ಶೇ.80ರವರೆಗೆ ಸಬ್ಸಿಡಿ ನೀಡುತ್ತಿದೆ. ವಾರ್ಷಿಕ 6ರಿಂದ 9 ಸಾವಿರ ಕೋಟಿ ರೂ.ಗಳ ಸಾಗಾಣಿಕೆ ವೆಚ್ಚವನ್ನೂ ಭರಿಸಲಾಗುತ್ತಿದೆ. ಈ ಹಿನ್ನೆಲೆಯಲ್ಲಿ ಒಂದೇ ಬ್ರಾಂಡ್‌ನಡಿ ಗೊಬ್ಬರ ಮಾರಲು ನಿರ್ಧರಿಸಲಾಗಿದೆ ಎಂದವರು ತಿಳಿಸಿದ್ದಾರೆ.

# ನಗರದಲ್ಲಿ ಇಂದು ಯಕ್ಷಗಾನ- ಬಯಲಾಟ ಪ್ರದರ್ಶನ

ದಕ್ಷಿಣ ಕನ್ನಡ ಜಿಲ್ಲೆಯ ಶ್ರೀ ಕ್ಷೇತ್ರ ಕಟೀಲು ಮತ್ತು ಶ್ರೀ ಕ್ಷೇತ್ರ ಧರ್ಮಸ್ಥಳ ಮೇಳಗಳ ಆಯ್ದ ಕಲಾವಿದರಿಂದ ಯಕ್ಷಗಾನ-ಬಯಲಾಟ 'ಶ್ರೀ ಸ್ಯಮಂತಕೋಪಾಖ್ಯಾನ ಹಾಗೂ ಶ್ರೀ ಭಾರ್ಗವ ವಿಜಯ' ಇಂದು ಸಂಜೆ 6.30 ರಿಂದ ರಾತ್ರಿ 10 ರವರೆಗೆ ರಿಂಗ್ ರಸ್ತೆಯ ಶ್ರೀ ಶಾರದಾಂಬ ದೇವಸ್ಥಾನದ ಹತ್ತಿರವಿರುವ ಸದ್ಗುರು ಶ್ರೀ ಬ್ರಹ್ಮಚೈತನ್ಯ ಮಂದಿರದಲ್ಲಿ ನಡೆಯಲಿದೆ.

## ವೀರಪ್ಪ ಪಲ್ಲೇದ ನಿಧನ



ದಾವಣಗೆರೆ ಜೆ.ಹೆಚ್. ಪಟೇಲ್ ನಗರ, ಬಿ ಬ್ಲಾಕ್, 4ನೇ ಮುಖ್ಯರಸ್ತೆ ವಾಸಿ, ಶ್ರೀ ವೀರಪ್ಪ ಪಲ್ಲೇದ ಅವರು ದಿನಾಂಕ : 27.08.2022ರ ಶನಿವಾರ ಮಧ್ಯಾಹ್ನ 1.30ಕ್ಕೆ ನಿಧನರಾದರೆಂದು ತಿಳಿಸಲು ವಿಷಾಧಿಸುತ್ತೇವೆ. ಮೃತರಿಗೆ ಸುಮಾರು 68 ವರ್ಷ ವಯಸ್ಸಾಗಿತ್ತು. ಪತ್ನಿ, ಇಬ್ಬರು ಪುತ್ರರು, ಓರ್ವ ಪುತ್ರಿ ಹಾಗೂ ಅಪಾರ ಬಂಧು-ಬಳಗವನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯನ್ನು ದಿನಾಂಕ : 28.08.2022ರ ಭಾನುವಾರ ಮಧ್ಯಾಹ್ನ 1.30ಕ್ಕೆ ಗಾಂಧಿ ನಗರದಲ್ಲಿರುವ ವೀರಶೈವ ರುದ್ರಭೂಮಿಯಲ್ಲಿ ನೆರವೇರಿಸಲಾಗುವುದು.

**ದುಃಖತಪ್ತ ಕುಟುಂಬ ವರ್ಗ**

**99867 41550, 93418 34904, 90360 03692**

॥ ಶ್ರೀ ಮೈಲಾರಲಿಂಗೇಶ್ವರ ಕೃಪ ॥

## 8ನೇ ವರ್ಷದ ಪುಣ್ಯಸ್ಮರಣೆ



**ದಿ॥ ಎಂ. ಮಂಜುನಾಥ (ಗಡ್ಡದ ಮಂಜಣ್ಣ)**

ನೀವು ನಮ್ಮನ್ನಗಲಿ ಇಂದಿಗೆ 8 ವರ್ಷಗಳಾದವು. ನಿಮ್ಮ ಆದರ್ಶಗಳೇ ನಮಗೆ ದಾರಿದೀಪ. ಭೌತಿಕವಾಗಿ ನೀವು ನಮ್ಮೊಂದಿಗಿಲ್ಲದಿದ್ದರೂ ಎಲ್ಲರ ಪ್ರೀತಿಗೆ ಪಾತ್ರರಾಗಿ ಸದಾ ನಮ್ಮ ಮನಸ್ಸಿನಲ್ಲಿದ್ದೀರಿ. ಭಗವಂತನು ನಿಮ್ಮ ಆತ್ಮಕ್ಕೆ ಚಿರಶಾಂತಿ ನೀಡಲಿ. ಸದಾ ನಿಮ್ಮ ಸ್ಮರಣೆಯಲ್ಲಿರುವ,

ಪತ್ನಿ : ಶಾಂತಮ್ಮ ದಿ. ಎಂ. ಮಂಜುನಾಥ

ಸಹೋದರ, ಸಹೋದರಿಯರು, ಮಾವಂದಿರು, ಸೊಸೆಯಂದಿರು, ಅಳಿಯಂದಿರು, ಮಕ್ಕಳು, ಮೊಮ್ಮಕ್ಕಳು ಹಾಗೂ ಅಪಾರ ಬಂಧು-ಬಳಗ

## ಚಿರಸ್ಮರಣೆ



ಕಾತರಕಿ ವೀರಭದ್ರಪ್ಪನವರು — ನಿಧನ : 19.2.2014

ಕಾತರಕಿ ವೀರಮ್ಮನವರು — ನಿಧನ : 28.8.2005

ನೀವು ಹಾಕಿಕೊಟ್ಟ ಮಾರ್ಗದರ್ಶನದಲ್ಲಿ ಮುನ್ನಡೆಯುತ್ತಿರುವ ಹಾಗೂ ಸದಾ ನಿಮ್ಮ ಸ್ಮರಣೆಯಲ್ಲಿರುವ,

**ಶ್ರೀಮತಿ ರೂಪಾ ಮತ್ತು ಶ್ರೀ ಕಾತರಕಿ ರುದ್ರೇಶ್**

**ಶ್ರೀಮತಿ ಕವಿತಾ ಮತ್ತು ಶ್ರೀ ಪ್ರಭಾಕರ್**

ಮೊಮ್ಮಕ್ಕಳಾದ : ಚಿ॥ ಕಾತರಕಿ ಗೌತಮ್‌ರಾಜ್,ಚಿ॥ ಕಾತರಕಿ ವಿಜೇತ್, ಕು॥ ಪ್ರಾರ್ಥನಾ

**ಬಂಧುಗಳು**, ವಿನೋಬನಗರ, ದಾವಣಗೆರೆ. ಮೊ : 9482586657

## ದೊಡ್ಡನಾಗಪ್ಪ ನಿಧನ



ಹರಿಹರ ತಾಲ್ಲೂಕು ಹಲಸಬಾಳು ಗ್ರಾಮದ ದಿ. ಗಂಗಣ್ಣರ ಬಸಪ್ಪ ಇವರ ಮಗನಾದ ಗಂಗಣ್ಣ ದೊಡ್ಡನಾಗಪ್ಪ (75) ಇವರು ದಿನಾಂಕ 27.8.2022ರ ಶನಿವಾರ ಸಂಜೆ 5.30ಕ್ಕೆ ನಿಧನರಾದರು. ಇಬ್ಬರು ಪುತ್ರರು, ಇಬ್ಬರು ಪುತ್ರಿಯರು ಸೊಸೆ, ಮೊಮ್ಮಕ್ಕಳು ಹಾಗೂ ಅಪಾರ ಬಂಧು-ಬಳಗವನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯು ದಿನಾಂಕ 28.8.2022ರ ಭಾನುವಾರ ಮಧ್ಯಾಹ್ನ 12 ಗಂಟೆಗೆ ಹರಿಹರ ತಾಲ್ಲೂಕು ಹಲಸಬಾಳು ಗ್ರಾಮದ ಮೃತರ ಸ್ವಂತ ಜಮೀನಿನಲ್ಲಿ ನೆರವೇರಲಿದೆ.

# ಜಗಳೂರಿನಲ್ಲಿ ಕರಡಿ ದಾಳಿ: ಗಂಭೀರ



ಜಗಳೂರು, ಆ.27- ಜಮೀನಿನಲ್ಲಿ ಮೆಕ್ಕೆಜೋಳ ಕಾಯಲು ಹೋಗಿದ್ದ ವೃದ್ದನ ಮೇಲೆ ಹಿಂಬದಿಯಿಂದ ಕರಡಿ ದಾಳಿ ನಡೆಸಿ ವೃದ್ದನೋರ್ವ ತೀವ್ರವಾಗಿ ಗಾಯಗೊಂಡಿರುವ ಘಟನೆ ಜಗಳೂರು ತಾಲ್ಲೂಕಿನ ಕೆಳಗೋಟೆ ಗ್ರಾಮದಲ್ಲಿ ಶುಕ್ರವಾರ ಸಂಜೆ ಜರುಗಿದೆ. ಗ್ರಾಮದ 55 ವರ್ಷದ ಬಸವರಾಜ್ ಎಂಬ ವೃದ್ದ ಗಾಯ ಗೊಂಡಿದ್ದು ಗಾಯಾಳುವನ್ನು ಜಗಳೂರು ಸಾರ್ವಜನಿಕ ಆಸ್ಪತ್ರೆಗೆ ದಾಖಲಿಸಿ ಚಿಕಿತ್ಸೆ ನೀಡಲಾಗುತ್ತದೆ. ಕಳೆದ ಒಂದುವರೆ ವರ್ಷದ ಹಿಂದೆಯೂ ಈತನ ಮೇಲಿನ ಕರಡಿ ಎರಗಿದ್ದು ಇದೀಗ ಎರಡನೇ ಬಾರಿ ಎರಗಿ ಗಾಯಗೊಳಿಸಿದೆ. ಆದರೆ ಕಳೆದ ಬಾರಿ ಕರಡಿ ದಾಳಿಯಿಂದ ಸರ್ಕಾರಗಳ ಯಾವುದೇ ಪರಿಹಾರ ನೀಡಲಿಲ್ಲ ಎಂದು ಬೇಸರ ವ್ಯಕ್ತಪಡಿಸಿದರು. ಆಸ್ಪತ್ರೆಗೆ ಪಿ.ಎಸ್.ಐ ಮಹೇಶ್ ಹೊಸಪೇಟೆ ಹಾಗೂ ಅರಣ್ಯ ಇಲಾಖೆಯ ಸಿಬ್ಬಂದಿಗಳು ಭೇಟಿ ನೀಡಿ ಮಾಹಿತಿ ಪಡೆದರು. ಅರಣ್ಯ ರಕ್ಷಕ ಪ್ರವೀಣ್, ಅಂಜಿನಪ್ಪ, ಅರಣ್ಯ ವೀಕ್ಷಕ ಮಂಜಪ್ಪ ಸೇರಿದಂತೆ ಇತರರಿದ್ದರು.

# ಭದ್ರಾ ನಾಲೆಯಲ್ಲಿ ಅಪರಿಚಿತ ಶವ ಪತ್ತೆ

ಹರಿಹರ, ಆ.27- ಹರಿಹರ ತಾಲ್ಲೂಕು ಬನ್ನಿಕೊಡು ಮತ್ತು ಕೆ. ಬೇವಿನಹಳ್ಳಿ ಗ್ರಾಮಗಳ ಮಧ್ಯೆ ಹಾದು ಹೋಗಿರುವ ಭದ್ರಾ ನಾಲೆಯಲ್ಲಿ ಸುಮಾರು 35-40 ವರ್ಷದ ಅಪರಿಚಿತ ಗಂಡಸಿನ ಶವ ನಿನ್ನೆ ಬೆಳಿಗ್ಗೆ ತೇಲಿ ಬಂದಿದೆ.

ಮೃತನ ಮೈಮೇಲೆ ನೀಲಿ ಬಣ್ಣದ ಬಿಳಿ ಚುಕ್ಕಿ ಇರುವ ಟೀ ಶರ್ಟ್ ಮತ್ತು ಕೆಂಪು ಬಣ್ಣದ ಬನಿಯನ್ ಇದೆ. ಸಂಬಂಧಪಟ್ಟವರು ಹರಿಹರ ಗ್ರಾಮಾಂತರ ಪೊಲೀಸ್ ಠಾಣೆಗೆ ಮಾಹಿತಿ ತಿಳಿಸಲು ಕೋರಿದೆ. ಫೋನ್ ನಂಬರ್ 0812-272027. 9480803258. 9480803234.

# ವಾರ ಭವಿಷ್ಯ

**ದಿನಾಂಕ : 28.08.2022 ರಿಂದ 03.09.2022**

**- ಜಯತೀರ್ಥಾಚಾರ್ ವಡೇರ್, ದಾವಣಗೆರೆ.**

**ಮೇಷ (ಅಶ್ವಿನಿ, ಭರಣಿ, ಕೃತ್ತಿಕಾ)**
**(ಚೂ.ಚೇ.ಚೋ.ಲ.ಲಿ.ಉ.ಲೇ.ಲೊ.ಅ.)**

ವಸ್ತುಗಳನ್ನು ಖರೀದಿಸುವಾಗ ಬೇಕು, ಬೇಡಗಳ ಅರಿವಿರಲಿ. ಆದಾಯ ಹೆಚ್ಚಾಗುವುದರಿಂದ ಹಳೇ ಸಾಲಗಳನ್ನು ತೀರಿಸುವುದರ ಕಡೆ ಗಮನಕೊಡಿ. ನೀವಾಡಲಿರುವ ಮಾತು ಸತ್ಯವಾಗಿದ್ದರೂ ಅದು ಕಠೋರವಾಗಿರುವುದರಿಂದ ಬೇರೆಯವರಿಗೆ ಬೇರೆಯದೇ ಅರ್ಥ ಕೊಡಲಿದೆ. ಅಲಂಕಾರಿಕ ವಸ್ತುಗಳು ಹೆಚ್ಚಿನ ಪ್ರಮಾಣದಲ್ಲಿ ಮಾರಾಟವಾಗಲಿದ್ದು, ಲಾಭಾಧಿಕ್ಯವಾಗಲಿದೆ. ಗೆಳೆಯರ ಸಲಹೆಯಂತೆ ನಡೆದುಕೊಂಡಲ್ಲಿ, ಔದ್ಯೋಗಿಕ ಸಮಸ್ಯೆಗಳು ಪರಿಹಾರವಾಗಲಿವೆ. ಗೋ ಸೇವೆಯಿದ್ದು ಹೆಚ್ಚಿನ ಪುಣ್ಯ ಪ್ರಾಪ್ತಿಯಾಗಲಿದೆ. ಗುರು ಚರಿತ್ರೆ ಪಠಿಸಿ. ಭಾನು -ಸೋಮ-ಮಂಗಳ-ಶುಭ ದಿನಗಳು.

**ವೃಷಭ (ಕೃತ್ತಿಕಾ, 2,3,4, ರೋಹಿಣಿ, ಮೃಗ 1,2)**
**(ಇ.ಉ.ಎ.ಒ.ವ.ವಿ.ವು.ವೆ.ವೋ)**

ಅವಿವಾಹಿತರಿಗೆ ಕಂಕಣಬಲ ಕೂಡಿಬಂದರೂ, ಆಕಸ್ಮಿಕವೋ ಎಂಬಂತೆ ಮದುವೆ ಮಾತುಕತೆ ಮುಂದು ಹೋಗಲಿದೆ. ತಾಂತ್ರಿಕ ಪದವೀಧರರಿಗೆ ಪ್ರತಿಷ್ಠಿತ ಕಂಪನಿಯೊಂದರಲ್ಲಿ ನೌಕರಿ ಸಿಗಲಿದೆ. ಪ್ರೇಮಿಗಳ ವಿವಾಹಕ್ಕೆ ಮನೆಯಲ್ಲಿ ಹಿರಿಯರಿಂದ ವಿರೋಧ ಬರಲಿದೆ. ಹಣದ ಹರಿವು ಅವಶ್ಯಕತೆಗೆ ತಕ್ಕಂತೆ ಇರುವುದರಿಂದ ದೈನಂದಿನ ಜೀವನದ ಬಗ್ಗೆ ಚಿಂತೆಬೇಡ. ಬೇಳೆಕಾಳುಗಳ ಸಗಟು ವ್ಯಾಪಾರಿಗಳಿಗೆ ಮಧ್ಯವರ್ತಿಗಳಿಂದ ಮೋಸಹೋಗುವ ಸಂಭವವಿದೆ. ಹಿರಿಯರು ಇಚ್ಚಿಸಿದ ಯೋಜನೆಯೊಂದನ್ನು ಕಾರ್ಯರೂಪಕ್ಕೆ ತರಲು ತುಸು ಕಷ್ಟಪಡುವಿರಿ. ಗುರು-ಶುಕ್ರ-ಶನಿ-ಶುಭ ದಿನಗಳು

**ಮಿಥುನ (3,4, ಆರಿದ್ರಾ, ಪುನರ್ವಸು 1,2,3)**
**(ಕ.ಕಿ.ಕು.ಘ, ಔ, ಚ.ಕೆ.ಕೋ.ಹ.)**

ಅನಿರೀಕ್ಷಿತವಾಗಿ ಕುಟುಂಬ ಪರಿವಾರ ಸಮೇತ ತೀರ್ಥ ಕ್ಷೇತ್ರಗಳ ಸಂದರ್ಶನ ಭಾಗ್ಯ ಒದಗಿ ಬರಲಿದೆ. ಆಸ್ತಿ ಖರೀದಿಸುವ ಅಥವಾ ಮನೆ ಕಟ್ಟುವ ಇರಾದೆ ಇದ್ದಲ್ಲಿ, ಸೋದರರ ಸಂಪೂರ್ಣ ನೆರವು ದೊರೆಯಲಿದೆ. ಮಡದಿ, ಮಕ್ಕಳ ಅನಾವಶ್ಯಕ ಖರ್ಚು, ವೆಚ್ಚಗಳ ಮೇಲೆ ಕಡಿವಾಣ ಹಾಕದೇ ಹೋದಲ್ಲಿ, ಸಾಲ ಮಾಡಬೇಕಾದ ಪ್ರಸಂಗ ಬಂದೀತು. ವ್ಯವಹಾರದಲ್ಲಿ, ಹಣಕಾಸಿನ ವಿಚಾರದಲ್ಲಿ ಲಿಖಿತ ಒಪ್ಪಂದ ಮಾಡಿಕೊಳ್ಳು ವುದು ಮೇಲು. ಸಾಕು ಪ್ರಾಣಿಗಳಿಂದ ಚಿಕ್ಕಮಕ್ಕಳಿಗೆ ಅಪಾಯವಾಗಬಹುದು. ಹಿರಿಯರು ಕೊಡಬಹುದಾದ ಕೆಲವು ಸಲಹೆಗಳು ಉತ್ತಮವಾಗಿರುವುದು. ಬುಧ-ಗುರು-ಶುಕ್ರ-ಶುಭ ದಿನಗಳು.

**ಕರ್ಕಾಟಕ (ಪುನ 4, ಪುಷ್ಯ, ಆಶ್ಲೇಷ)**
**(ಹಿ.ಹು.ಹೆ.ಹೊ.ಡ.ಡಿ.ಡು.ಡೆ.ಡೋ)**

ಕಳೆದ ವಾರ ಅನೇಕ ಸಮಸ್ಯೆಗಳಿಂದಾಗಿ ಮನೆಯಲ್ಲಿ ನೆಮ್ಮದಿ ಕಳೆದುಕೊಂಡಿದ್ದ ನಿಮಗೆ, ಈ ವಾರ ತುಸು ನೆಮ್ಮದಿ ಸಿಗಲಿದೆ. ಆಯ-ವ್ಯಯ ಸಮವಾಗಿರುವುದರಿಂದ ಉಳಿತಾಯದ ಯೋಚನೆ ಬೇಡ. ಹೈನುಗಾರಿಕೆಯಲ್ಲಿ ತುಸು ಕಡಿಮೆ ಇಳುವರಿಯಾಗಲಿದೆ. ನಿರುದ್ಯೋಗಿಗಳು ನೌಕರಿಗೋಸ್ಕರ ಅಲ್ಲಿಂದಿಲ್ಲಿಗೆ ಓಡಾಡಬೇಕಾದೀತು. ಪ್ರಭಾವೀ ವ್ಯಕ್ತಿಗಳ ಮಾತನ್ನು ನಂಬದಿರುವುದು ಒಳಿತು. ಕರಗುತ್ತಿರುವ ಆರ್ಥಿಕ ವಿಷಯಗಳ ಬಗ್ಗೆ ಹೆಚ್ಚಿನ ಗಮನ ಕೊಡಿ. ಮಹಿಳೆಯರಿಗೆ ಉತ್ತಮ ದಿನಗಳಾದರೂ ಅವರ ವೈಯಕ್ತಿಕ ಆರೋಗ್ಯದ ಕಡೆ ಗಮನವಿಡುವುದು ಉತ್ತಮ. ಸೋಮ-ಮಂಗಳ-ಗುರು-ಶುಭ ದಿನಗಳು.

**ಸಿಂಹ ( ಮಘ, ಪುಬ್ಬ, ಉತ್ತರ 1)**
**(ಮ.ಮಿ.ಮು.ಮೋ.ವೆ.ಟ.ಟಿ.ಟು.ಟೆ)**

ಉನ್ನತಾಧ್ಯಯನದೊಂದಿಗೆ ಸಂಶೋಧನಾ ರಂಗದಲ್ಲಿ ತೊಡಗಿಕೊಂಡವರಿಗೆ, ಅತ್ಯಂತ ಮೇಧಾವಿಗಳ ಪರಿಚಯವಾಗಿ, ಹೆಚ್ಚಿನ ನೆರವಾಗಲಿದೆ. ಖಾಸಗಿ ಕಂಪನಿಯಲ್ಲಿ ಕೆಲಸ ಮಾಡುವ ಮಹಿಳೆಯರಿಗೆ, ಸಹೋದ್ಯೋಗಿಗಳ ನೆರವು ಸಿಗಲಿದೆ. ಕಳೆದುಹೋಗಿದ್ದ ಅಮೂಲ್ಯ ವಸ್ತುವೊಂದು ಅನಿರೀಕ್ಷಿತವಾಗಿ ಸಿಗಲಿದೆ. ದಾಖಲೆಗಳನ್ನು ಪರಿಶೀಲಿಸದೆ ಸಹಿ ಹಾಕಬೇಡಿ. ವಾಹನಗಳ ಬಿಡಿಭಾಗಗಳ ಮಾರಾಟ ಜೋರಾಗಿಯೇ ನಡೆಯಲಿದೆ. ವ್ಯಾಪಾರ-ವ್ಯವಹಾರಗಳಲ್ಲಿ ತುಸು ಏರುಪೇರಾಗಲಿದೆ. ಹಾಗೆಂದ ಮಾತ್ರಕ್ಕೆ ಚಿಂತೆಬೇಡ. ವೈಯಕ್ತಿಕ ಆರೋಗ್ಯವನ್ನು ಅಲಕ್ಷಿಸಬೇಡಿ. ಭಾನು-ಬುಧ-ಗುರು-ಶುಭ ದಿನಗಳು.

**ಕನ್ಯಾ (ಉತ್ತರಾ 2,3,4, ಹಸ್ತಾ, ಚಿತ್ತಾ 1,2)**
**(ಟೋ.ಪ.ಪಿ.ಪು.ಷ.ಣ.ಠ.ಪೆ.ಪೋ)**

ಯುವಕರಿಗೆ ಬದುಕಿನಲ್ಲಿ ಏನನ್ನಾದರೂ ಸಾಧಿಸಲೇಬೇಕೆಂಬ ಛಲವಿದ್ದರೂ ಆತ್ಮವಿಶ್ವಾಸದ ಕೊರತೆಯಿಂದಾಗಿ ಹಿನ್ನಡೆಯಾಗಲಿದೆ. ರಾಜಕಾರಣಿಗಳಲ್ಲಿ ಅತಿಯಾದ ವಿಶ್ವಾಸವಿಡುವುದು ಮೂರ್ಖತನದ ಮಾತಾದೀತು. ಹಣಕಾಸಿನ ಹರಿವು ಮಂದಗತಿಯಲ್ಲಿರುವುದರಿಂದ ಆರ್ಥಿಕ ಲೆಕ್ಕಾಚಾರ ವ್ಯತ್ಯಾಸವಾಗಲಿದೆ. ಬೇರೆಯವರಿಗೆ ನೀವು ಹೂಡಿದ ಬಾಣವು, ಗುರಿತಪ್ಪಿ ನಿಮ್ಮ ಕಡೆಗೇ ತಿರುಗೀತೆಂಬ ಎಚ್ಚರವಿರಲಿ. ಬಹಳ ವರ್ಷಗಳ ನಂತರ ಗರ್ಭಿಣಿಯಾದವರು ಸಾಕಷ್ಟು ಎಚ್ಚರದಿಂದಿರಿ. ಹಿರಿಯರಿಗೆ ಗೌರವಿಸುವುದನ್ನು ಮಕ್ಕಳಿಗೆ ಕಲಿಸಿಕೊಡಿ, ಗುರು ಸೇವೆ ಉತ್ತಮ. ಬುಧ-ಗುರು-ಶುಕ್ರ-ಶುಭ ದಿನಗಳು.

**ತುಲಾ (ಚಿತ್ತಾ 3,4, ಸ್ವಾತಿ, ವಿಶಾಖ 1,2,3)**
**(ರ.ರಿ.ರು.ರೆ.ರೊ.ತ.ತಿ.ತು.ತೆ.)**

ಮಂತ್ರಿ, ಮಹೋದಯರ ಶಿಫಾರಸ್ಸಿನ ಮೇಲೆ ವರ್ಗಾವಣೆ ಮಾಡಿಸಿಕೊಳ್ಳಬಲ್ಲೆ ಎಂಬ ನಿಮ್ಮ ಅಹಮ್ಮಿಗೆ ಪೆಟ್ಟುಬೀಳಲಿದೆ. ಕೂಡು ಕುಟುಂಬದಲ್ಲಿರುವ ಸದಸ್ಯರ ನಡುವೆ ಭಿನ್ನಾಭಿಪ್ರಾಯಗಳು ಮೂಡಲಿವೆ. ಕೇಟರಿಂಗ್ ವ್ಯವಹಾರ ಉತ್ತಮವಾಗಿದ್ದರೂ, ಲಾಭಾಂಶ ತೀರ ಕಡಿಮೆ. ಷೇರು ಮಾರುಕಟ್ಟೆಯನ್ನು ಪ್ರವೇಶಿಸುವ ಮೊದಲು ಅದರ ಆಳಗಲದ ಅರಿವಿರುವುದು ಮೇಲು. ಜಮೀನು ಮಾರಾಟದಲ್ಲಿ ಮತ್ತೊಬ್ಬರಿಗೆ ಜಾಮೀನಾಗಲು ಹೋಗಬೇಡಿ. ಸಂಪಾದನೆ ಎಷ್ಟೇ ಉತ್ತಮವಾಗಿದ್ದರೂ ಮಕ್ಕಳ ಬೇಡಿಕೆಗಳು ಅವೆಲ್ಲವನ್ನೂ ಕರಗಿಸಲಿವೆ. ಮಹಿಳೆಯರಿಗೆ ಶುಭ ದಿನಗಳು. ಸೋಮ-ಬುಧ-ಶುಕ್ರ-ಶುಭ ದಿನಗಳು,

**ವೃಶ್ಚಿಕ (ವಿಶಾಖ 4, ಅನೂ, ಜೇಷ್ಠ)**
**(ತೊ.ನ.ನಿ.ನು.ನೆ.ನೋ.ಯ.ಯಿ.ಯು.)**

ಪ್ರತಿಭಾವಂತರಾದ ಹಾಗು ವಿಷಯ ಪರಿಚಯ ಚೆನ್ನಾಗಿ ಅರಿತ ಉಪಾಧ್ಯಾಯರಿಗೆ ಅನೇಕ ವಿದ್ಯಾಸಂಸ್ಥೆಗಳಿಂದ ಆಹ್ವಾನ ಬರಲಿದೆ. ಸರ್ಕಾರಿ ನೌಕರರಿಗೆ ಪದೋನ್ನತಿಯಾದರೂ ಕಾಲಕ್ರಮೇಣ ಅದರಲ್ಲಿ ಅವರಿಗೆ, ನಿರಾಸಕ್ತಿ ಮೂಡಲಿದೆ. ಕಾರಣ ಏನೇ ಇದ್ದರೂ ಮುಂದಿಟ್ಟ ಹೆಜ್ಜೆ ಹಿಂದಿಡಬೇಡಿ. ವ್ಯವಹಾರದಲ್ಲಿ ಕಾಲಕ್ಕೆ ತಕ್ಕಂತೆ ಬದಲಾವಣೆ ಅನಿವಾರ್ಯ. ವೈಯಕ್ತಿಕ ಆಸೆ-ಆಕಾಂಕ್ಷೆಗಳು ಹಲವಾರಿದ್ದರೂ ಅದರಲ್ಲಿ ಕೆಲವಂತೂ ಖಂಡಿತಾ ಈಡೇರಲಿವೆ. ಒತ್ತಡದ ವಾತಾವರಣದಲ್ಲಿ, ಕೆಲಸ ಮಾಡಬೇಡಿ, ಅದು ಆರೋಗ್ಯಕ್ಕೆ ಒಳ್ಳೆಯದಲ್ಲ. ಭಾನು-ಮಂಗಳ-ಬುಧ-ಶುಭ ದಿನಗಳು.

**ಧನಸ್ಸು (ಮೂಲ, ಪೂರ್ವಾಷಾಢ, ಉತ್ತರಾಷಾಢ)**
**(ಯೆ.ಯೋ. ಬ.ಬಿ.ಬು.ಧ.ಫ.ಡ.ಬೆ.)**

ಕೈಗಾರಿಕೋದ್ಯಮಿಗಳು ತಮ್ಮ ಕಾರ್ಮಿಕರ ವಿಚಾರದಲ್ಲಿ ಸಾಕಷ್ಟು ತಾಳ್ಮೆಯಿಂದ ನಡೆದುಕೊಳ್ಳುವುದು ಮೇಲು. ತುಸು ವ್ಯತ್ಯಾಸವಾದರೂ ಅನೇಕ ದುರ್ಘಟನೆಗಳು ಸಂಭವಿಸಬಹುದು. ವಿಶೇಷ ಪರಿಣಿತೆ ಪಡೆದಿರುವ ದಂತ ವೈದ್ಯರಿಗೆ ಹೆಚ್ಚಿನ ಸಂಪಾದನೆಯಾಗಲಿದೆ. ಆಸ್ತಿಗೆ ಸಂಬಂಧಪಟ್ಟಂತೆ, ನ್ಯಾಯಾಲಯದ ಮೆಟ್ಟಲೇರಿದ್ದ ವ್ಯಾಜ್ಯವು ನಿಮ್ಮ ಪರವಾಗಿ ವಾಲಿದರೂ, ತೀರ್ಪು ಬರುವುದು ತುಸು ತಡವಾಗಬಹುದು. ಆಪ್ತಮಿತ್ರರೊಂದಿಗೆ ನಡೆಸಿದ ಸಮಾಲೋಚನೆಯಿಂದಾಗಿ, ಕುಟುಂಬಕ್ಕೆ ಸಂಬಂಧಿಸಿದ್ದ, ಗಂಭೀರ ಸಮಸ್ಯೆಯೊಂದು ಬಗೆಹರಿಯಲಿದೆ. ಭಾನು-ಸೋಮ-ಗುರು-ಶುಭ ದಿನಗಳು.

**ಮಕರ (ಉತ್ತರಾಷಾಢ 2,3,4, ಶ್ರವಣ, ಧನಿಷ್ಠಾ 1,2)**
**(ಜೊ.ಜ.ಜಿ.ಜೆ.ಶಿ.ಶು.ಶೇ.ಶೋ.ಗ.ಗಿ)**

ಇಷ್ಟು ದಿನಗಳ ಕಾಲ, ಶ್ರಮ-ಶ್ರದ್ಧೆ ಮತ್ತು ಪ್ರಾಮಾಣಿಕತೆಯಿಂದ ದುಡಿದ ಹಾಗೂ ದುಡಿಯುತ್ತಿರುವ ನಿಮಗೆ ಕನಸುಗಳು ಕೈಗೂಡುವ ದಿನಗಳು ಅತ್ಯಂತ ಸನಿಹದಲ್ಲಿಯೇ ಇವೆ. ಜೊತೆಗೆ ಸಾಮಾಜಿಕ ಗೌರವವೂ ಸಲ್ಲಲಿದೆ. ಆದಾಯಕ್ಕೆ ತಕ್ಕಂತೆ ಅದನ್ನು ನಿರ್ವಹಿಸುವ ಕಲೆ ನಿಮಗೀಗಾಗಲೇ ಕರಗತವಾಗಿದೆ. ಮಗನ ಉದ್ಯೋಗದಲ್ಲಿ ಬದಲಾವಣೆಯಾಗುವ ಸಂಭವವಿದ್ದು, ಈ ವಿಷಯದಲ್ಲಿ ಮುನ್ನೆಚ್ಚರಿಕೆಯಿಂದ ನಿರ್ಧಾರಗಳನ್ನು ತೆಗೆದುಕೊಳ್ಳುವುದು ಮೇಲು. ಗೃಹೋಪಕರಣ-ಅಲಂಕಾರಿಕ ವಸ್ತುಗಳ ಮಾರಾಟಗಾರರಿಗೆ ವಹಿವಾಟು ಹೆಚ್ಚಲಿದೆ. ಗುರುಗಳನ್ನು ಆರಾಧಿಸಿ ಬುಧ-ಗುರು-ಶನಿ-ಶುಭ ದಿನಗಳು,

**ಕುಂಭ (ಧನಿಷ್ಠಾ, ಶತಭಿಷಾ, ಪೂರ್ವಾಭಾದ್ರ 1,2,3)**
**(ಗು.ಗೆ.ಗೊ.ಸ.ಸಿ.ಸು.ಸೆ.ಸೋ.ದ)**

ಸೃಜನಶೀಲ ಬರಹಗಾರರಿಗೆ ಉತ್ತಮ ದಿನಗಳು. ಇವರಿಗೆ ಖ್ಯಾತಿಯೊಂದಿಗೆ ಧನ ಸಂಪಾದನೆಯೂ ಆಗಲಿದೆ. ನಿಷ್ಠೆಯಿಂದಿರುವವರಿಗೆ ಯಾವುದೇ ವಾದ-ವಿವಾದಗಳಾಗಲೀ ಅವರ ಸಾಧನೆಗೆ ಅಡ್ಡಿಯಾಗುವುದಿಲ್ಲ. ನಿವೃತ್ತಿಯಂಚಿನಲ್ಲಿರುವವರಿಗೆ ಅಧ್ಯಾತ್ಮದಲ್ಲಿ ಒಲವು ಹೆಚ್ಚಲಿದೆ. ಮಕ್ಕಳ ನಡಾವಳಿಯಲ್ಲಿ ಕಂಡುಬರಲಿರುವ ವ್ಯತ್ಯಾಸ, ನಿಮ್ಮ ತಾಳ್ಮೆಯನ್ನು ಪರೀಕ್ಷಿಸಲಿದೆ. ಮಿತಿಮೀರುತ್ತಿರುವ ಖರ್ಚು ವೆಚ್ಚಗಳನ್ನು ಅಲಕ್ಷಿಸುವುದು ಒಳ್ಳೆಯ ಲಕ್ಷಣವಲ್ಲ. ಬಂಧುಗಳ ಮನೆಯಲ್ಲಿ ನಡೆಯಲಿರುವ ಶುಭ ಸಮಾರಂಭಕ್ಕೆ ಪರಿವಾರ ಸಮೇತ ಹೋಗಿಬರುವಿರಿ. ಮೋಜು, ಮಸ್ತಿಗಳು ಇತಿಮಿತಿಯಲ್ಲಿರುವುದು ಉತ್ತಮ. ಸೋಮ-ಬುಧ-ಶನಿ-ಶುಭ ದಿನಗಳು.

**ಮೀನ (ಪೂರ್ವಾಭಾದ್ರ 4, ಉತ್ತರಾಭಾದ್ರ, ರೇವತಿ)**
**(ದಿ.ದು.ಖ.ಝ.ಥ.ದೆ.ದೋ.ಖ.ಚ.ಚಿ.)**

ನೀವು ಸರ್ಕಾರಿ ನೌಕರರಾಗಿದ್ದಲ್ಲಿ ಬಂದಿರುವ ಔದ್ಯೋಗಿಕ ಸಮಸ್ಯೆಯೊಂದನ್ನು ಸಹೋದ್ಯೋಗಿಯೊಬ್ಬರು ಬಗೆಹರಿಸುವರು. ಉದ್ಯಮದಲ್ಲಿರುವವರು ಅವರ ಶ್ರಮಕ್ಕೆ ತಕ್ಕಂತೆ ಪ್ರತಿಫಲ ಪಡೆಯುವರು. ಖಾಸಗಿ ಕಂಪನಿಯಲ್ಲಿರುವ ನೌಕರರಿಗೆ ಅದೃಷ್ಟವೆಂಬಂತೆ ಕೆಲಸದ ಮೇಲೆ, ವಿದೇಶಕ್ಕೆ ಹೋಗುವ ಅವಕಾಶ ದೊರೆಯಲಿದೆ. ವಕೀಲ ವೃತ್ತಿಯಲ್ಲಿರುವವರಿಗೆ ಪಂಥಾಹ್ವಾನ ನೀಡುವಂತಹ ಕೇಸುಗಳು ಮೇಲಿಂದ ಮೇಲೆ ಬರಲಿವೆ. ವೈದ್ಯಕೀಯ ವ್ಯಾಸಂಗದಲ್ಲಿರುವ ವಿದ್ಯಾರ್ಥಿಗಳಿಗೆ ಅಧ್ಯಯನದಲ್ಲಿ ಪ್ರಗತಿ ಕಂಡುಬರಲಿದೆ. ಆದಾಯದ ಮೂಲದಲ್ಲಿ ಹೆಚ್ಚಳವಾಗಲಿದೆ. ಭಾನು-ಮಂಗಳ-ಗುರು-ಶುಭ ದಿನಗಳು.

**ವಿಶೇಷ ದಿನಗಳು : ದಿನಾಂಕ: 30.8.2022 ನೇ ಮಂಗಳವಾರ ಸ್ವರ್ಣಗೌರೀ ವ್ರತ,**
**ದಿನಾಂಕ: 31.8.2022 ನೇ ಬುಧವಾರ ಗಣೇಶ ಚತುರ್ಥಿ**
**ದಿನಾಂಕ:- 1.9.2022ನೇ ಗುರುವಾರ ಋಷಿ ಪಂಚಮೀ ವ್ರತ**
**ದಿನಾಂಕ: 3.9.2022 ನೇ ಶನಿವಾರ ಜ್ಯೇಷ್ಠಾದೇವಿ ಆವಾಹನೆ.**

## ಕಾಂಗ್ರೆಸ್‌ಗೆ ರಾಹುಲ್ ಬಿಟ್ಟರೆ ಬೇರಿಲ್ಲ : ಮಲ್ಲಿಕಾರ್ಜುನ ಖರ್ಗೆ

ಬೆಂಗಳೂರು, ಆ. 27 - ಕಾಂಗ್ರೆಸ್ ಅಧ್ಯಕ್ಷ ಸ್ಥಾನಕ್ಕೆ ಮರಳುವಂತೆ ರಾಹುಲ್ ಗಾಂಧಿ ಅವರ ಮನವೊಲಿಸಲಾಗುವುದು ಎಂದು ರಾಜ್ಯಸಭೆಯಲ್ಲಿನ ವಿರೋಧ ಪಕ್ಷದ ನಾಯಕ ಮಲ್ಲಿಕಾರ್ಜುನ ಖರ್ಗೆ ಹೇಳಿದ್ದಾರೆ.

ರಾಹುಲ್ ಗಾಂಧಿ ಅವರಂತೆ ಕಾಂಗ್ರೆಸ್ ಪಕ್ಷದಲ್ಲಿ ಭಾರತಾದ್ಯಂತ ಪ್ರಭಾವಳಿ ಹೊಂದಿರುವ ಬೇರೆ ಯಾವ ನಾಯಕನೂ ಇಲ್ಲ ಎಂದು ಖರ್ಗೆ ಅಭಿಪ್ರಾಯಪಟ್ಟಿದ್ದಾರೆ. ಪಕ್ಷವನ್ನು ಮುನ್ನಡೆಸುವ ಆಕಾಂಕ್ಷೆ ಹೊಂದಿರುವ ಯಾವುದೇ ವ್ಯಕ್ತಿಯು ದೇಶಾದ್ಯಂತ ಪರಿಚಿತನಾಗಿರಬೇಕು. ಅವರಿಗೆ ಕನ್ಯಾಕುಮಾರಿಯಿಂದ ಕಾಶ್ಮೀರದವರೆಗೆ ಮತ್ತು ಪಶ್ಚಿಮ ಬಂಗಾಳದಿಂದ ಗುಜರಾತ್‌ವರೆಗೂ ಬೆಂಬಲ ಹೊಂದಿರಬೇಕು ಎಂದು ಖರ್ಗೆ ಅವರು ಪಕ್ಷದ ಅಧ್ಯಕ್ಷ ಸ್ಥಾನ ಬಯಸುವ ವ್ಯಕ್ತಿ ಬಹಳ ಜನಪ್ರಿಯರಾಗಿರಬೇಕು ಎಂದು ತಿಳಿಸಿದ್ದಾರೆ.

ಅವರು ಸಾಕಷ್ಟು ಜನಪ್ರಿಯತೆ ಹೊಂದಿರಬೇಕು. ಇಡೀ ಕಾಂಗ್ರೆಸ್ ಪಕ್ಷವು ಒಪ್ಪಿಕೊಂಡಿರುವಂತಹ ವ್ಯಕ್ತಿಯಾಗಿರಬೇಕು. ಹೀಗಾಗಿ ಅಂತಹ ಶ್ರೇಷ್ಠತೆ ಹೊಂದಿರುವ ವ್ಯಕ್ತಿ ಪಕ್ಷದಲ್ಲಿ ಯಾರೂ ಇಲ್ಲ ಎಂದು ಹಿರಿಯ ನಾಯಕ ಖರ್ಗೆ ಹೇಳಿದ್ದಾರೆ. ಪಕ್ಷ ಸೇರಿ ಕಾರ್ಯನಿರ್ವಹಿಸುವಂತೆ ಕಾಂಗ್ರೆಸ್ ನಾಯಕಿ ಸೋನಿಯಾ ಗಾಂಧಿ ಅವರಿಗೆ ಎಲ್ಲಾ ಹಿರಿಯ ನಾಯಕರು ಒತ್ತಾಯ ಮಾಡಿದ್ದರು. ರಾಹುಲ್ ಗಾಂಧಿ ಅವರು ಈಗ ಬಂದು ಹೋರಾಟ ನಡೆಸುವಂತೆ ನಾವು ಮನವಿ ಮಾಡಿಕೊಂಡಿದ್ದೇವೆ ಎಂದು ಖರ್ಗೆ ಹೇಳಿದ್ದಾರೆ. ಅಧ್ಯಕ್ಷ ಸ್ಥಾನ ವಹಿಸಿಕೊಳ್ಳಲು ರಾಹುಲ್ ಗಾಂಧಿ ಹಿಂಜರಿಯುತ್ತಿದ್ದಾರೆ ಎಂಬ ವರದಿಗಳ ಬಗ್ಗೆ ಪ್ರತಿಕ್ರಿಯಿಸಿದ ಅವರು, ಪಕ್ಷದ ಹಿತಕ್ಕಾಗಿ, ದೇಶದ ಹಿತಕ್ಕಾಗಿ, ಆರ್.ಎಸ್.ಎಸ್. - ಬಿಜೆಪಿ ವಿರುದ್ಧ ಹೋರಾಡಲು ಹಾಗೂ ದೇಶವನ್ನು ಒಗ್ಗಟ್ಟಾಗಿರಿಸಲು ಅವರು ಅಧ್ಯಕ್ಷ ಸ್ಥಾನ ವಹಿಸಿಕೊಳ್ಳಬೇಕಿದೆ ಎಂದಿದ್ದಾರೆ.

# ಕಾನೂನಿನಲ್ಲಿ ವಿಕಲಚೇತನರಿಗೆ ವಿಶೇಷ ರಕ್ಷಣೆ



**ಜಗಳೂರಿನ ಕಾರ್ಯಕ್ರಮದಲ್ಲಿ ನ್ಯಾಯಾಧೀಶರಾದ ಮಹ್ಮದ್ ಯೂನುಸ್ ಅಥಣಿ**

ಜಗಳೂರು, ಆ. 27- ವಿಶೇಷ ಚೇತನರು ಸಮಾಜದ ಒಂದು ಭಾಗವಾಗಿದ್ದು, ಅವರಿಗೆ ಸಮಾನ ಅವಕಾಶ ನೀಡಬೇಕೆಂದು ಕೇಂದ್ರ ಸರ್ಕಾರ ಅವರಿಗಾಗಿ ಕಲಂ 84ರ ಅಡಿಯಲ್ಲಿ ಕರ್ನಾಟಕದಲ್ಲಿ 30 ವಿಶೇಷ ನ್ಯಾಯಾಲಯಗಳನ್ನು ಪ್ರತಿ ಜಿಲ್ಲಾ ಕೇಂದ್ರಗಳಲ್ಲಿ ಸ್ಥಾಪನೆ ಮಾಡಿದೆ. ವಿಶೇಷ ಚೇತನರಿಗಾಗಿ ಕಲಂ 92ರ ಅಡಿಯಲ್ಲಿ ಕಾನೂನಿನ ರಕ್ಷಣೆ ಮತ್ತು ಹಕ್ಕುಗಳನ್ನು ಒದಗಿಸಲಾಗಿದೆ ಎಂದು ನ್ಯಾಯಾಧೀಶರಾದ ಮಹ್ಮದ್ ಯೂನುಸ್ ಅಥಣಿ ತಿಳಿಸಿದರು.

ತಾಲ್ಲೂಕಿನ ನ್ಯಾಯಾಲಯದ ಆವರಣದಲ್ಲಿ 2016ರ ಆಕ್ಟ್ ಅಡಿಯಲ್ಲಿ ವಿಕಲಚೇತನರಿಗೆ ಸಿಗಬೇಕಾಗಿರುವ ಸರ್ಕಾರಿ ಸೌಲಭ್ಯಗಳ ವಂಚನೆ ಮತ್ತು ದೌರ್ಜನ್ಯ, ನಿಂದನೆಯ ಪ್ರಕರಣಗಳು ನಡೆದಾಗ ವಿಕಲಚೇತನರಿಗೆ ಉಚಿತವಾಗಿ ಸಿಗಬಹುದಾದ ಕಾನೂನಿನ ನೆರವು ಮತ್ತು ವಿಶೇಷ ನ್ಯಾಯಾಲಯದ ಬಗ್ಗೆ ಕಾನೂನು ನೆರವು-ಅರಿವು ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ವಿಶೇಷಚೇತನರಿಗೆ ನಿಂದನೆ, ಹಲ್ಲೆ, ಅಪಮಾನ ಮಾಡುವುದು, ಮೂಲಭೂತ ಸೌಲಭ್ಯಗಳನ್ನು ವಂಚಿಸುವುದು, ವಿಕಲಚೇತನರು ಬಳಸುವಂತಹ ಸಾಧನ ಸಲಕರಣೆಗಳನ್ನು ಹಾಳು ಮಾಡುವುದು ಇವೆಲ್ಲವೂ ಜಾಮೀನು ರಹಿತ ಅಪರಾಧವಾಗಿವೆ. ಈ ಪ್ರಕರಣಗಳಲ್ಲಿ ಅಪರಾಧಿಗಳಿಗೆ ಆರು ತಿಂಗಳಿನಿಂದ 6 ವರ್ಷದವರೆಗೆ ಕಠಿಣ ಶಿಕ್ಷೆಯನ್ನು ವಿಧಿಸಲಾಗುತ್ತದೆ.

ಸರ್ಕಾರಿ ಕಚೇರಿಗಳಲ್ಲಿ ವಿಕಲ ಚೇತನರನ್ನು ಅಗೌರವದಿಂದ ಕಾಣುವುದು ಮತ್ತು ಅವರಿಗೆ ಸರಿಯಾದ ಮಾಹಿತಿ ನೀಡದಿದ್ದಲ್ಲಿ ಅಂತಹ ಅಧಿಕಾರಿಗಳಿಗೆ ಈ ಕಲಂ ಅಡಿಯಲ್ಲಿ ಇಪ್ಪತ್ತೈದು ಸಾವಿರ ರೂ. ದಂಡ ವಿಧಿಸಬಹುದಾಗಿದೆ ಎಂದು ನ್ಯಾಯಾಧೀಶರು ತಿಳಿಸಿದರು. ಆರನೇ ತರಗತಿಯಿಂದ ದ್ವಿತೀಯ ಪಿಯುಸಿಯವರೆಗೆ ಉಚಿತ ಶಿಕ್ಷಣವನ್ನು ಸರ್ಕಾರ ಜಾರಿಗೆ ತಂದಿದೆ ಆದ್ದರಿಂದ ವಿಕಲಚೇತನ ಮಕ್ಕಳು ಪ್ರತಿಯೊಬ್ಬರೂ ವಿದ್ಯಾವಂತರಾಗಲು ಸಹಾಯಕವಾಗುತ್ತದೆ ಎಂದು ಅಭಿಪ್ರಾಯ ವ್ಯಕ್ತಪಡಿಸಿದರು.

ವಿಕಲಚೇತನ ಕ್ಷೇಮಾಭಿವೃದ್ಧಿ ಸಂಘದ ರಾಜ್ಯಾಧ್ಯಕ್ಷ ಮಹಾಂತೇಶ್ ಬ್ರಹ್ಮ ಮಾತನಾಡಿ, ನಾವು ವಿಕಲಚೇತನರಾಗಿ ಹುಟ್ಟಿರುವುದು ಶಾಪವಲ್ಲ ನಮಗೆ ಸಮಾಜದಲ್ಲಿ ಸಮಾನತೆ ಮತ್ತು ಸಮಾನ ಅವಕಾಶ ನೀಡದಿದ್ದರೆ ಅದೇ ನಮಗೆ ದೊಡ್ಡ ಶಾಪ. ಸರ್ಕಾರದ ಸೌಲಭ್ಯಗಳನ್ನು ಬಳಸಿಕೊಂಡು ಆತ್ಮವಿಶ್ವಾಸದಿಂದ ಜೀವನ ನಡೆಸಬೇಕು ಎಂದರು.

ಈ ಸಂದರ್ಭದಲ್ಲಿ ತಾಲ್ಲೂಕು ವಕೀಲರ ಸಂಘದ ಅಧ್ಯಕ್ಷ ಇ. ಓಂಕಾರೇಶ್ವರ, ಕಾರ್ಯದರ್ಶಿ ಕೆ.ವಿ. ರುದ್ರೇಶ್, ಮಾಜಿ ಕಾರ್ಯದರ್ಶಿ ವಿ.ತಿಪ್ಪೇಸ್ವಾಮಿ, ಹೆಚ್.ಎಂ. ಕರಿಬಸಪ್ಪ, ನಗರ ಪುನರ್ವಸತಿ ಕಾರ್ಯಕರ್ತರು, ವಿಕಲಚೇತನ ಸದಸ್ಯರು ಹಾಗೂ ವಕೀಲರಾದ ಓಬಳೇಶ್, ಮಹಾಂತೇಶ್, ಅರುಣ್ ಕುಮಾರ್ ಸೇರಿದಂತೆ ಇತರರು ಉಪಸ್ಥಿತರಿದ್ದರು.

# ಮುರುಘಾ ಶರಣರ ಮೇಲೆ ಲೈಂಗಿಕ ದೌರ್ಜನ್ಯ ಕೇಸ್

**(1ನೇ ಪುಟದಿಂದ)** ಕಾಯ್ದೆಯಡಿ ಶರಣರ ವಿರುದ್ಧ ದೂರು ಶುಕ್ರವಾರ ದೂರು ದಾಖಲಿಸಿದ್ದರು.

ಮುರುಘಾ ಶರಣರು ಒಬ್ಬ ವಿದ್ಯಾರ್ಥಿಯನ್ನು ಮೂರುವರೆ ವರ್ಷಗಳಿಂದ, ಇನ್ನೊಬ್ಬ ವಿದ್ಯಾರ್ಥಿನಿಯನ್ನು ಒಂದೂವರೆ ವರ್ಷದಿಂದ ಲೈಂಗಿಕ ದೌರ್ಜನ್ಯಕ್ಕೆ ಗುರಿಪಡಿಸಿದ್ದರು. ಉಳಿದ ಆರೋಪಿಗಳು ಇದಕ್ಕೆ ಸಹಕರಿಸಿದ್ದಾರೆ ಎಂದು ಆರೋಪಿಸಲಾಗಿದೆ.

ಮೈಸೂರಿನ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಸಮಿತಿ ಸದಸ್ಯರ ಎದುರು ವಿದ್ಯಾರ್ಥಿನಿಯರು ಈ ಬಗ್ಗೆ ಹೇಳಿಕೆ ನೀಡಿದ್ದರು. ನಂತರ ಸಮಿತಿ ಸದಸ್ಯರು ನೀಡಿದ ದೂರಿನ ಅನ್ವಯ ಎಫ್.ಐ.ಆರ್. ದಾಖಲಿಸಲಾಗಿದೆ.

ವಿದ್ಯಾರ್ಥಿನಿಯರನ್ನು ಮಕ್ಕಳ ಕಲ್ಯಾಣ ಸಮಿತಿ ಮುಂದೆ ಆಪ್ತ ಸಮಾಲೋಚನೆಗೆ ಒಳಪಡಿಸಲಾಗಿತ್ತು. ಈ ಸಂದರ್ಭದಲ್ಲಿ ಲೈಂಗಿಕ ದೌರ್ಜನ್ಯದ ಬಗ್ಗೆ ವಿದ್ಯಾರ್ಥಿನಿಯರು ತಿಳಿಸಿದ್ದಾರೆ ಎಂದು ದೂರಿನಲ್ಲಿ ಹೇಳಲಾಗಿದೆ. ಉತ್ತರ ಕರ್ನಾಟಕದ ಇಬ್ಬರು ವಿದ್ಯಾರ್ಥಿನಿಯರು ಮುರುಘಾ ಮಠದ ಹಾಸ್ಟೆಲ್‌ನಲ್ಲಿದ್ದರು. ಅವರು ನ್ಯಾಯ ಕೋರಿ ಬೆಂಗಳೂರಿನ ಕಾಟನ್ ಪೇಟೆ ಪೊಲೀಸ್ ಠಾಣೆಗೆ ಹೋಗಿದ್ದರು. ಅಲ್ಲಿಯೂ ನ್ಯಾಯ ಸಿಗಲಿಲ್ಲ ಎಂದು ವಿದ್ಯಾರ್ಥಿನಿಯರು ತಿಳಿಸಿದ್ದಾರೆ. ನಂತರ ವಿಷಯ ತಿಳಿದ ಪೋಷಕರು, ವಿದ್ಯಾರ್ಥಿನಿಯರನ್ನು ಆಪ್ತ ಸಮಾಲೋಚನೆಗಾಗಿ ಒಡನಾಡಿ ಸಂಸ್ಥೆಗೆ ಕಳಿಸಿದರು ಎಂದು ಸಂಸ್ಥೆಯ ಮುಖ್ಯಸ್ಥ ಸ್ಟ್ಯಾನ್ಲಿ ಹೇಳಿದ್ದಾರೆ.

ಈ ಪ್ರಕರಣ ಪೋಕ್ಸೋ ಕಾಯ್ದೆ ವ್ಯಾಪ್ತಿಯಲ್ಲಿ ಬರುವುದರಿಂದ ವಿಳಂಬ ಮಾಡದೇ ಬಾಲಕಿಯರು ನಮ್ಮ ಬಳಿ ಬಂದ ತಕ್ಷಣ ಸಮಾಲೋಚನೆ ನಡೆಸಿ ಮಕ್ಕಳ ಕಲ್ಯಾಣ ಸಮಿತಿ ಮುಂದೆ ಹಾಜರು ಪಡಿಸಿದ್ದೇವೆ ಎಂದವರು ತಿಳಿಸಿದ್ದಾರೆ.

ನಂತರದಲ್ಲಿ, ಜಿಲ್ಲಾ ಮಕ್ಕಳ ರಕ್ಷಣಾ ಘಟಕದ ಕಾನೂನು ಮತ್ತು ಪರಿವೀಕ್ಷಣಾಧಿಕಾರಿ ಚಂದ್ರಕುಮಾರ್ ಅವರು ನೀಡಿದ ದೂರಿನ ಅನ್ವಯ ಮೈಸೂರಿನ ಠಾಣೆಯೊಂದರಲ್ಲಿ ಐವರ ವಿರುದ್ಧ ಪೋಕ್ಸೋ ಪ್ರಕರಣದ ಅಡಿ ಎಫ್.ಐ.ಆರ್. ದಾಖಲಾಗಿದೆ.

**ಬಸವರಾಜನ್ ವಿರುದ್ಧ ದೂರು** : ಮೈಸೂರಿನಲ್ಲಿ ಆದ ಬೆಳವಣಿಗೆಯ ಕೆಲವೇ ಗಂಟೆಗಳ ನಂತರ ಬಸವರಾಜನ್ ವಿರುದ್ಧ ವಾರ್ಡನ್ ರಶ್ಮಿ ಅವರು ಅತ್ಯಾಚಾರ ಯತ್ನದ ದೂರು ದಾಖಲಿಸಿದ್ದಾರೆ. ಕಳೆದ ಜುಲೈ 27ರಂದು ವಿದ್ಯಾರ್ಥಿ ನಿಲಯದ ತಪಾಸಣೆಯ ನೆಪದಲ್ಲಿ ಬಂದಿದ್ದ ಬಸವರಾಜನ್, ಯಾರೂ ಇಲ್ಲದ ಸಮಯದಲ್ಲಿ ಬಲಾತ್ಕಾರಕ್ಕೆ ಯತ್ನಿಸಿದ್ದಾಗಿ ಮತ್ತು ವಿರೋಧಿಸಿದಾಗ ಕೊಲೆ ಬೆದರಿಕೆ ಹಾಕಿರುವುದಾಗಿ ರಶ್ಮಿ ದೂರಿನಲ್ಲಿ ಹೇಳಿದ್ದಾರೆ.

ಇದಕ್ಕೂ ಮುಂಚೆ ಜುಲೈ 24ರಂದು ಮುರುಘಾ ಮಠದ ಬಾಲಕಿಯರ ವಸತಿ ನಿಲಯದ ಇಬ್ಬರು ಅಪ್ರಾಪ್ತ ವಿದ್ಯಾರ್ಥಿನಿಯರು ಗೇಟ್ ಪಾಸ್ ಪಡೆದು ಹೊರ ಹೋಗಿದ್ದರು. ನಂತರ ಅವರು ಅದೇ ದಿನ ಬೆಂಗಳೂರಿನ ಕಾಟನ್ ಪೇಟೆ ಪೊಲೀಸ್ ಠಾಣೆಯ ಎದುರು ಹಾಜರಾಗಿದ್ದರು. ಈ ಬಗ್ಗೆ ಪೊಲೀಸರು ಮುರುಘಾ ಮಠ ಹಾಗೂ ಬಸವರಾಜನ್ ಅವರಿಗೆ ಮಾಹಿತಿ ನೀಡಿದ್ದರು.

ಬಸವರಾಜನ್ ಹಾಗೂ ಅವರ ಪತ್ನಿ ಸೌಭಾಗ್ಯ ಅವರು ಠಾಣೆಗೆ ತೆರಳಿ ಅಪ್ರಾಪ್ತ ಬಾಲಕಿಯರನ್ನು ವಶಕ್ಕೆ ಪಡೆದುಕೊಂಡಿದ್ದರು. ಆದರೆ, ಅವರನ್ನು ಪೋಷಕರಿಗೆ ಅಥವಾ ವಿದ್ಯಾರ್ಥಿ ನಿಲಯಕ್ಕೆ ಒಪ್ಪಿಸದೇ, ಜುಲೈ 27ರವರೆಗೆ ತಮ್ಮ ವಶದಲ್ಲಿಟ್ಟುಕೊಂಡಿದ್ದರು ಎಂದು ದೂರಿನಲ್ಲಿ ಹೇಳಲಾಗಿದೆ.

## ಮಠದಲ್ಲಿದ್ದವರಿಂದಲೇ ಶರಣರಿಗೆ ತೊಂದರೆ : ಜ್ಞಾನೇಂದ್ರ

ಬೆಂಗಳೂರು, ಆ. 27 - ಚಿತ್ರದುರ್ಗ ಮುರುಘಾ ಶರಣರಿಗೆ ಮಠದ ಉದ್ಯೋಗಿಯೇ ತೊಂದರೆ ನೀಡುತ್ತಿದ್ದಾನೆ ಎಂದು ಗೃಹ ಸಚಿವ ಆರಗ ಜ್ಞಾನೇಂದ್ರ ಹೇಳಿದ್ದಾರೆ.

ಶರಣರ ವಿರುದ್ಧ ದಾಖಲಾಗಿರುವ ಪ್ರಕರಣದ ಕುರಿತು ಪತ್ರಕರ್ತರು ಕೇಳಿದ ಪ್ರಶ್ನೆಗೆ ಪ್ರತಿಕ್ರಿಯಿಸಿದ ಅವರು, ಮಠದಲ್ಲಿದ್ದವರು ಯಾರೋ ತೊಂದರೆ ಮಾಡುತ್ತಿರುವ ಹಾಗೆ ಕಾಣುತ್ತಿದೆ. ಮಠದ ಒಳಗಡೆನೇ ಯಾರೋ ಸರಿ ಇರಲಿಲ್ಲ. ಅವರ ಉದ್ಯೋಗಿಯೇ ಈ ರೀತಿ ಮಾಡಿದ್ದಾರೆ ಎಂಬ ಬಗ್ಗೆ ತಮಗೆ ಮಾಹಿತಿ ಇದೆ ಎಂದು ಹೇಳಿದ್ದಾರೆ.

## ಪ್ರಕರಣ ಸಿಐಡಿಗೆ: ಸರ್ಕಾರದ ಚಿಂತನೆ

**(1ನೇ ಪುಟದಿಂದ) ತಂಗಿದ್ದ ಹಾಸ್ಟೆಲ್‌ನ ಎಲ್ಲಾ ಮಕ್ಕಳ ಹೇಳಿಕೆಗಳನ್ನು ಸಮಾಜ ಕಲ್ಯಾಣ ಇಲಾಖೆ ಅಧಿಕಾರಿಗಳು ದಾಖಲೆ ಮಾಡಿಕೊಂಡಿದ್ದಾರೆ. ಪ್ರಕರಣಕ್ಕೆ ಸಂಬಂಧಿಸಿದಂತೆ ಸರ್ಕಾರ ಇದುವರೆಗೂ ಯಾವುದೇ ಮಾಹಿತಿಯನ್ನು ಬಹಿರಂಗಪಡಿಸಿಲ್ಲ. ಹೇಳಿಕೆಯನ್ನೂ ನೀಡಿಲ್ಲ. ಮುಖ್ಯಮಂತ್ರಿಯವರು ಹಾಗೂ ಸಮಾಜ ಕಲ್ಯಾಣ ಇಲಾಖೆಯ ಸಚಿವರು ಈ ಬಗ್ಗೆ ಪ್ರಸ್ತಾಪ ಮಾಡಿಲ್ಲ.**

## ಹದಡಿ : ಭೂಲಕ್ಷ್ಮಿ ಅವರಿಗೆ ಸನ್ಮಾನ



ದಾವಣಗೆರೆ, ಆ.27- ಹದಡಿ ಗ್ರಾಮದ ಪ್ರಜಾಪಿತ ಬ್ರಹ್ಮಾಕುಮಾರಿ ಈಶ್ವರೀಯ ವಿಶ್ವವಿದ್ಯಾಲಯದಲ್ಲಿ ಕಳೆದ ವಾರ ನಡೆದ 'ಶ್ರೀ ಕೃಷ್ಣ ಜನ್ಮಾಷ್ಟಮಿ' ಹಾಗೂ 'ರಕ್ಷಾ ಬಂಧನ' ಕಾರ್ಯಕ್ರಮದಲ್ಲಿ ಈಶ್ವರೀಯ ವಿಶ್ವವಿದ್ಯಾಲಯದ ಹಾವೇರಿ ಸಂಚಾಲಕರಾದ ರಾಜಯೋಗಿನಿ ಬ್ರಹ್ಮಾಕುಮಾರಿ ಲೀಲಾಜಿ ಮುಖ್ಯ ಅತಿಥಿಯಾಗಿ ಪಾಲ್ಗೊಂಡಿದ್ದರು. ಇದೇ ಸಂದರ್ಭದಲ್ಲಿ, ನ್ಯಾಯಾಂಗ ಇಲಾಖೆ ನೌಕರರೂ, ರಾಷ್ಟ್ರಮಟ್ಟದ ಕುಸ್ತಿ ಕ್ರೀಡೆಯ ವಿಜೇತರೂ ಆದ ಶ್ರೀಮತಿ ಭೂಲಕ್ಷ್ಮಿ ಅವರನ್ನು ಲೀಲಾಜಿ ಸನ್ಮಾನಿಸಿದರು.

ಹದಡಿಯ ಈಶ್ವರೀಯ ವಿಶ್ವವಿದ್ಯಾಲಯದ ಬ್ರಹ್ಮಾಕುಮಾರಿ ರೂಪ, ಚಂದ್ರ, ಗುರುರಾಜ ಹಾಗೂ ಸ್ಥಳೀಯರು ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು.

## ಅತ್ತಿಗೆರೆ ಗ್ರಾಮದಲ್ಲಿ ಜಾಥಾ

ದಾವಣಗೆರೆ, ಆ.27- ತಾಲ್ಲೂಕಿನ ಅತ್ತಿಗೆರೆ ಗ್ರಾಮದ ಶ್ರೀಮತಿ ಚನ್ನಪ್ಪ ಶಿವಲಿಂಗಮ್ಮ ಗುರುಬಸಪ್ಪ ಪದವಿ ಪೂರ್ವ ಕಾಲೇಜ್ ವತಿಯಿಂದ ಸ್ವಾತಂತ್ರ್ಯ ಅಮೃತ ಮಹೋತ್ಸವದ ಅಂಗವಾಗಿ ಸ್ವಾತಂತ್ರ್ಯ ಹೋರಾಟಗಾರರ ಭಾವಚಿತ್ರಗಳೊಂದಿಗೆ ವಿದ್ಯಾರ್ಥಿಗಳು ಘೋಷಣೆಗಳನ್ನು ಕೂಗುತ್ತಾ ಜಾಥಾ ನಡೆಸಿದರು.


ಕಾಲೇಜಿನ ಪ್ರಾಂಶುಪಾಲ ಹೆಚ್.ಚಂದ್ರಪ್ಪ, ಉಪನ್ಯಾಸಕರಾದ ಎನ್.ಎಸ್.ಪರಮೇಶ್ವರಪ್ಪ, ಗುಡ್ಡಪ್ಪ ಆರ್.ಓಲೇಕಾರ್, ಕೆ.ಎಂ. ಬಸವರಾಜಪ್ಪ, ಸುಭಾಷ್ ಆರ್.ಸಿಂಧೆ, ಸಲ್ಮಾಬಿ, ಕೆ.ಎನ್.ನಾಗವೇಣಿ ಮತ್ತು ಸೌಮ್ಯ ಹಾಗು ಶಿವಶಂಕರ್ ಮತ್ತು ಭೋಜರಾಜಪ್ಪ ಭಾಗವಹಿಸಿದ್ದರು.

ಧ್ವಜಾರೋಹಣ ಮಾಡಿದ ಪ್ರೊ. ಹೆಚ್.ಚನ್ನಪ್ಪ ಪಲ್ಲಾಗಟ್ಟಿ ಮಾತನಾಡಿ, ವಿದ್ಯಾರ್ಥಿಗಳು ಚಿಕ್ಕ ವಯಸ್ಸಿನಲ್ಲಿಯೇ ರಾಷ್ಟ್ರೀಯ ಭಾವೈಕ್ಯತೆ ಬೆಳೆಸಿಕೊಳ್ಳಬೇಕು ಎಂದು ಕರೆ ನೀಡಿದರು.

## ಪವರ್ ಲಿಫ್ಟಿಂಗ್ : ಎ. ಚಂದ್ರಪ್ಪಗೆ 'ಕರ್ನಾಟಕದ ಬಲಿಷ್ಠ ವ್ಯಕ್ತಿ' ಪ್ರಶಸ್ತಿ



ದಾವಣಗೆರೆ, ಆ.27- ಕರ್ನಾಟಕ ರಾಜ್ಯ ಪವರ್ ಲಿಫ್ಟಿಂಗ್ ಅಸೋಸಿಯೇಷನ್ ಮತ್ತು ಶ್ರೀ ಸಾಯಿ ಫಿಟ್‌ನೆಸ್ ಇವರ ಸಂಯುಕ್ತಾಶ್ರಯದಲ್ಲಿ ಕಳೆದ ವಾರ ನಡೆದ ರಾಜ್ಯಮಟ್ಟದ ಜ್ಯೂನಿಯರ್, ಸೀನಿಯರ್, ಮಾಸ್ಟರ್ಸ್ ಓಪನ್ ಪವರ್ ಲಿಫ್ಟಿಂಗ್ ಚಾಂಪಿಯನ್‌ಶಿಪ್ - 2022 ಸ್ಪರ್ಧೆಯಲ್ಲಿ ನಗರದ ಬೀರೇಶ್ವರ ವ್ಯಾಯಾಮ ಶಾಲೆಯ ಪವರ್ ಲಿಫ್ಟರ್ ಎ. ಚಂದ್ರಪ್ಪ ಅವರು 'ಮಾಸ್ಟರ್ಸ್ ಸ್ಟ್ರಾಂಗ್ ಮ್ಯಾನ್ ಆಫ್ ಕರ್ನಾಟಕ-2022' ಪ್ರಶಸ್ತಿಗೆ ಭಾಜನರಾಗಿದ್ದಾರೆ. ಅಲ್ಲದೇ, ಸೀನಿಯರ್ ಮಾಸ್ಟರ್ಸ್ ವಿಭಾಗದಲ್ಲಿ 77 ಕೆ.ಜಿ. ಭಾರವನ್ನು ಎತ್ತಿ ಬಂಗಾರದ ಪದಕ ಪಡೆದು ಅಸ್ಸಾಂನ ಗೌಹಾಟಿಯಲ್ಲಿ ಸೆಪ್ಟೆಂಬರ್ 20 ರಿಂದ 25 ರ ವರೆಗೆ ನಡೆಯುವ ಆಲ್ ಇಂಡಿಯಾ ಪವರ್ ಲಿಫ್ಟಿಂಗ್ ಚಾಂಪಿಯನ್ ಶಿಪ್‌ನಲ್ಲಿ ಕರ್ನಾಟಕವನ್ನು ಪ್ರತಿನಿಧಿಸಲಿದ್ದಾರೆ.

# ನಗರದಲ್ಲಿ ಇಂದು 'ಜ್ಞಾನಕಾಶಿ' ಪ್ರಶಸ್ತಿ ಪ್ರದಾನ

ದಾವಣಗೆರೆ, ಆ. 27- ಕರ್ನಾಟಕ ರಕ್ಷಣಾ ವೇದಿಕೆ (ಕನ್ನಡಪರ ಸಂಘಟನೆಗಳ ಒಕ್ಕೂಟ) ವತಿಯಿಂದ 2021-22 ನೇ ಸಾಲಿನ ಎಸ್ಸೆಸ್ಸೆಲ್ಸಿ ಪರೀಕ್ಷೆಯಲ್ಲಿ ಕನ್ನಡ ಐಚ್ಛಿಕ ವಿಷಯದಲ್ಲಿ 125 ಕ್ಕೆ 125 ಅಂಕ ಪಡೆದ ವಿದ್ಯಾರ್ಥಿಗಳಿಗೆ ದಾವಣಗೆರೆ ವಲಯ ಮಟ್ಟದ ಪ್ರತಿಭಾ ಪುರಸ್ಕಾರ 'ಜ್ಞಾನಕಾಶಿ'ಪ್ರಶಸ್ತಿ ಪ್ರದಾನ ಸಮಾರಂಭ ನಾಳೆ ದಿನಾಂಕ 28 ರ ಭಾನುವಾರ ಬೆಳಿಗ್ಗೆ 11.30 ಕ್ಕೆ ನಗರದ ಗುರುಭವನದಲ್ಲಿ ನಡೆಯಲಿದೆ ಎಂದು ವೇದಿಕೆ ಜಿಲ್ಲಾಧ್ಯಕ್ಷ ಎಂ.ಎಸ್. ರಾಮೇಗೌಡ ಪತ್ರಿಕಾಗೋಷ್ಠಿಯಲ್ಲಿ ತಿಳಿಸಿದ್ದಾರೆ.

ರಾ.ಲ. ಕಾಯ್ದೆ ಕಾಲೇಜು ಪ್ರಾಂಶುಪಾಲ ಡಾ. ಸೋಮಶೇಖರಪ್ಪ ಕಾರ್ಯಕ್ರಮ ಉದ್ಘಾಟಿಸುವರು. ವೇದಿಕೆ ಗೌರವಾಧ್ಯಕ್ಷ ವಾಸುದೇವ ರಾಯ್ಕರ್ ಪ್ರಾಸ್ತಾವಿಕವಾಗಿ ಮಾತನಾಡಲಿದ್ದಾರೆ. ಮುಖ್ಯ ಅತಿಥಿಗಳಾಗಿ ಶಾಸಕ ಎಸ್.ವಿ. ರಾಮಚಂದ್ರ, ಡಿಡಿಪಿಐ ಜಿ. ಆರ್. ತಿಪ್ಪೇಶಪ್ಪ, ಕ್ಷೇತ್ರ ಶಿಕ್ಷಣಾಧಿಕಾರಿಗಳಾದ ಎಂ. ನಿರಂಜನಮೂರ್ತಿ, ಟಿ. ಅಂಬಣ್ಣ, ಜೈನ್ ವಿದ್ಯಾಲಯದ ಕಾರ್ಯದರ್ಶಿ ನರೇಂದ್ರಕುಮಾರ್, ಕರವೇ ಮಹಿಳಾ ಘಟಕದ ಜಿಲ್ಲಾಧ್ಯಕ್ಷೆ ಬಸಮ್ಮ ಆಗಮಿಸಲಿದ್ದಾರೆ.

ಬಾಪೂಜಿ ಶಾಲೆಯ ನಿವೃತ್ತ ಪ್ರಾಚಾರ್ಯ ಕೆ. ಇಮಾಂ ಅವರಿಗೆ ಸಾವಿತ್ರಿ ಬಾಯಿ ಪುಲೆ ಪ್ರಶಸ್ತಿ ನೀಡಲಾಗುವುದು. ವಿವಿಧ ಕ್ಷೇತ್ರಗಳ ಸಾಧಕರಾದ ಎಂ. ಇಂದ್ರಪ್ಪ, ಜೆ. ಅಮಾನುಲ್ಲಾಖಾನ್, ಮಲ್ಲಿಕಾರ್ಜುನ್ ಕಡಕೋಳ, ಬಸವರಾಜ ದೊಡ್ಡಮನಿ, ಮಂಜುನಾಥ ಪಿ. ಕಾಡಜ್ಜಿ, ಚನ್ನಬಸವ ಶೀಲವಂತ, ಪ್ರಕಾಶ ಉತ್ತಂಗಿ, ಪಿ. ಮಂಜುನಾಥ, ಎಸ್. ಪ್ರೇಮಾ ಅವರನ್ನು ಗೌರವಿಸಲಾಗುವುದು ಎಂದು ಅವರು ವಿವರಿಸಿದರು.

ಪತ್ರಿಕಾಗೋಷ್ಠಿಯಲ್ಲಿ ಕರವೇ ಪದಾಧಿಕಾರಿಗಳಾದ ಮಹೇಶಪ್ಪ, ಲೋಕೇಶ್, ರವಿಕುಮಾರ್, ಪರಮೇಶ್, ಬಾಷಾಸಾಬ್, ಜಬೀವುಲ್ಲಾ, ಸಂತೋಷ್ ಉಪಸ್ಥಿತರಿದ್ದರು.

## ಶರಣರ ಮೇಲಿನ ಆರೋಪ ಅಚ್ಚರಿ ತಂದಿಲ್ಲ : ಕುಮಾರಸ್ವಾಮಿ

ರಾಮನಗರ, ಆ. 27 - ಚಿತ್ರದುರ್ಗದ ಶ್ರೀ ಶಿವಮೂರ್ತಿ ಮುರುಘಾ ಶರಣರ ಮೇಲಿನ ಲೈಂಗಿಕ ಕಿರುಕುಳ ಆರೋಪ ನನಗೆ ಆಶ್ಚರ್ಯ ತಂದಿಲ್ಲ. ಐದಾರು ತಿಂಗಳ ಹಿಂದೆಯೇ ಇದರ ಬಗ್ಗೆ ಚರ್ಚೆ ನಡೆದಿತ್ತು ಎಂದು ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಹೆಚ್.ಡಿ. ಕುಮಾರಸ್ವಾಮಿ ಹೇಳಿದರು. ಚನ್ನಪಟ್ಟಣದಲ್ಲಿ ಪತ್ರಕರ್ತರೊಂದಿಗೆ ಮಾತನಾಡಿದ ಅವರು, ಈ ವಿಷಯದಲ್ಲಿ ಸರ್ಕಾರ ಆರಂಭಿಕ ಹಂತದಲ್ಲಿಯೇ ಮುಂಜಾಗ್ರತಾ ಕ್ರಮ ವಹಿಸಿ ತನಿಖೆ ನಡೆಸಬೇಕಿತ್ತು. ಇದರಿಂದ ನಮ್ಮ ಧಾರ್ಮಿಕ ಕ್ಷೇತ್ರಗಳ ಮೇಲೆ ಪರಿಣಾಮ ಆಗಬಾರದು. ಜನರ ಭಾವನೆಗಳಿಗೆ ಧಕ್ಕೆ ಆಗದಂತೆ ನಿರ್ವಹಿಸಬೇಕು. ಯಾರಾದರೂ ಬಲವಂತವಾಗಿ, ಕಾನೂನುಬಾಹಿರವಾಗಿ ನಡೆದುಕೊಂಡಿದ್ದರೆ ಖಂಡಿತಾ ಸರ್ಕಾರ ಕ್ರಮ ತೆಗೆದುಕೊಳ್ಳಬೇಕು ಎಂದರು.

## ಆಲೂರು ಚಂದ್ರಶೇಖರಪ್ಪ ಮೆಮೋರಿಯಲ್ ಟ್ರಸ್ಟ್‌ನಿಂದ ಅಮೃತ ಮಹೋತ್ಸವ




ದಾವಣಗೆರೆ, ಆ. 27- ಆಲೂರು ಚಂದ್ರಶೇಖರಪ್ಪ ಮೆಮೋರಿಯಲ್ ಟ್ರಸ್ಟ್ ವತಿಯಿಂದ ಸ್ವಾತಂತ್ರ್ಯ ದಿನಾಚರಣೆ ಆಚರಿಸಲಾಯಿತು. ಆಲೂರು ಸೂಪರ್ ಸ್ಪೆಷಾಲಿಟಿ ಆಸ್ಪತ್ರೆ ಬಳಿ ನಡೆದ ಕಾರ್ಯಕ್ರಮದಲ್ಲಿ ಡಾ. ಮಂಜುನಾಥ್ ಆಲೂರು ಧ್ವಜಾರೋಹಣ ನೆರವೇರಿಸಿದರು.

ಕಾರ್ಯಕ್ರಮದಲ್ಲಿ ಶೈಲಜಾ ಮಂಜುನಾಥ್ ಆಲೂರು, ಡಾ. ವರುಣ್‌ಚಂದ್ರ ಆಲೂರು, ಡಾ. ವರ್ಷಿತ ವರುಣ್ ಹಾಗೂ ಆಸ್ಪತ್ರೆ ಸಿಬ್ಬಂದಿ ಉಪಸ್ಥಿತರಿದ್ದರು.

## ಪಾಕ್: ಭಾರೀ ಮಳೆಯಿಂದ 4.4 ಶತಕೋಟಿ ಡಾಲರ್ ನಷ್ಟ

ಕರಾಚಿ, ಆ. 27 – ಪಾಕಿಸ್ತಾನದಲ್ಲಿ ಸುರಿದಿರುವ ಭಾರೀ ಮುಂಗಾರು ಮಳೆ ಹಾಗೂ ವ್ಯಾಪಕ ಕ್ಷಿಪ್ರ ಪ್ರವಾಹಗಳಿಂದಾಗಿ ಆ ದೇಶದ ಆರ್ಥಿಕತೆಗೆ 4.4 ಶತಕೋಟಿ ಡಾಲರ್ ನಷ್ಟವಾಗಿದೆ ಎಂದು ಅಂದಾಜಿಸಲಾಗಿದೆ. ವಿಕೋಪದಿಂದಾಗಿ ಸಿಂಧ್ ಹಾಗೂ ಬಲೂಚಿಸ್ತಾನದ ಕೃಷಿ ಚಟುವಟಿಕೆಗಳಿಗೆ ತೀವ್ರ ಹಾನಿಯಾಗಿದೆ.


ಪಾಕಿಸ್ತಾನದ ಜಿ.ಡಿ.ಪಿ.ಯಲ್ಲಿ ಕೃಷಿ ಪಾಲು ಶೇ.23ರಷ್ಟಾಗಿದೆ. ವಾಸ್ತವಿಕವಾಗಿ ಮಳೆಯಿಂದ ಎಷ್ಟು ಹಾನಿಯಾಗಿದೆ ಎಂಬುದನ್ನು ಈಗಲೇ ನಿಖರವಾಗಿ ಅಂದಾಜಿಸಲು ಸಾಧ್ಯವಾಗದು ಎಂದು ಅಧಿಕಾರಿಗಳು ಹೇಳಿದ್ದಾರೆ. ಜೂನ್ ಮಧ್ಯಾವಧಿಯಿಂದ ಆರಂಭವಾದ ತೀವ್ರ ಮುಂಗಾರಿನಲ್ಲಿ ಸಾವಿರಕ್ಕೂ ಹೆಚ್ಚು ಜನ ಸಾವನ್ನಪ್ಪಿದ್ದಾರೆ ಹಾಗೂ ಸಾವಿರಾರು ಜನ ಸ್ಥಳಾಂತರಗೊಂಡಿದ್ದಾರೆ.

ಪ್ರಾಥಮಿಕ ಅಂದಾಜುಗಳ ಪ್ರಕಾರ ಮಳೆಯಿಂದಾಗಿ 4.4 ಶತಕೋಟಿ ಡಾಲರ್ ಹಾನಿಯಾಗಿದೆ. ಇದು ಒಟ್ಟು ಜಿ.ಡಿ.ಪಿ.ಯ ಶೇ.1ರಷ್ಟಾಗಿದೆ. ತೀವ್ರ ಬೆಳೆ ಹಾನಿಯಾಗಿರುವುದು ಹಣದುಬ್ಬರಕ್ಕೆ ಕಾರಣವಾಗಲಿದೆ ಎಂದು ಜೆ.ಎಸ್. ಗ್ಲೋಬಲ್ ರೀಸರ್ಚ್ ಸಂಸ್ಥೆಯ ವರದಿ ತಿಳಿಸಿದೆ.

ಕ್ಷಿಪ್ರ ಪ್ರವಾಹದಿಂದ ಜಮೀನುಗಳಲ್ಲಿ ನುಗ್ಗಿರುವ ನೀರು ಮರೆಯಾಗಲು ಎರಡರಿಂದ ಮೂರು ತಿಂಗಳು ಬೇಕಾಗಬಹುದು ಎಂದು ಹೇಳಲಾಗುತ್ತಿದೆ. ಇದರಿಂದಾಗಿ ಗೋಧಿ ಹಾಗೂ ಖಾದ್ಯ ತೈಲ ಬೀಜಗಳ ಬಿತ್ತನೆ ವಿಳಂಬವಾಗಲಿದೆ. ಪ್ರವಾಹಕ್ಕೆ ಸಿಲುಕಿ 5 ಲಕ್ಷ ಜಾನುವಾರುಗಳು ಸಾವನ್ನಪ್ಪಿವೆ. ರೋಗ ರುಜಿನಿಗಳಿಂದ ಜಾನುವಾರುಗಳ ಸಾವು ಇನ್ನಷ್ಟು ಹೆಚ್ಚಾಗುವ ಕಳವಳ ಇದೆ.

## ಪದವಾಣಿ-33

ರಚನೆ : ಮಮತಾ ರಾಧಾಕೃಷ್ಣ ದಾವಣಗೆರೆ.



**ಎಡದಿಂದ ಬಲಕ್ಕೆ :**

1) ಸುರುಳಿ ಸುರುಳಿಯ ಕೂದಲು 3
3) ಕುದುರೆಯ ಸವಾರ 3
5) ಆಶ್ಚರ್ಯದಿಂದ ನುಡಿದದ್ದು 3
6) ಮಧುರವಾದ ನುಡಿ 4
7) ಮಟ್ಟಸವಾದ ಪ್ರದೇಶ 4
9) ಕೆನ್ನೆಗೆ ಹೊಡೆದ ಏಟು 4
12) ಗರ ಬಡಿದವನು ಹಿಡಿದ ಅನ್ಯಮಾರ್ಗ 4
14) ಸತ್ವ, ರಜೋ ಜೊತೆ ಬರುವ ಮತ್ತೊಂದು ಗುಣ 3
15) "ಪತಿ"ಯ ಮಧ್ಯೆ ಬಂದ ಕಾಲಾಳು 3
16) ಸೀರೆಯ ಹೊದೆಯುವ ಭಾಗ 3

**ಮೇಲಿನಿಂದ ಕೆಳಕ್ಕೆ :**

1) ಯಾವ ಕಟ್ಟುಪಾಡು ಇಲ್ಲದವನು 4
2) ದೃಢ ಪಡಿಸುವ ಸಾಧನ 4
3) ಅಂತಃಪುರ 4
4) ಬುದ್ಧನ ಮತ್ತೊಂದು ಹೆಸರು 4
6) ಒಪ್ಪಿಗೆಯಾದುದು 3
8) ಸಾಲ ಮಾಡಿ ತಂದ ಮಾವು ಉಲ್ಟಾ ಆಗಿದೆ 3
10) ಪರರಿಗೆ ತಾಪ ನೀಡುವ ಅರ್ಜುನ 4
11) ಪತಿ ಮಾಡಿದ ಸಲ್ಲದ ಕಾರ್ಯ 4
12) ಪಾಯಸಕ್ಕೆ ಬಳಸುವ ಮತ್ತು ಬರಿಸುವ ಕಾಳು 4
13) "ಮೆಚ್ಚಿಗೆ ಸೂಚಿಸು" ಎಂಬರ್ಥದ ನುಡಿಗಟ್ಟು 4

(ಉತ್ತರಗಳು ಮುಂದಿನ ವಾರಕ್ಕೆ)

**ಪದವಾಣಿ - 32ರ ಉತ್ತರಗಳು :**

ಎಡದಿಂದ ಬಲಕ್ಕೆ: 1) ತಿಪಜಾರಿಗಿ (ಗಿರಿಜಾಪತಿ) 4) ಕನಿಕರ 5) ಗಜಮುಖ 7) ಪಾಶ 8) ಗಾಳ 11) ನೆರೆಮನೆ 12) ಸಮವಸ್ತ್ರ 14) ಮದುವಣಿಗ.
ಮೇಲಿನಿಂದ ಕೆಳಕ್ಕೆ: 1) ತಿಗ್ಮಕರ 2) ಜಾಸ್ತಿ 3) ಗಿರಿಜನ 4) ಕಲೋಪಾಸನೆ 6) ಖಗೋಳಶಾಸ್ತ್ರ 9) ರಾಮನಾಮ 10) ಕೋಮಲಾಂಗ 13) ಜಾವ.

**ಬಿಲ್ಡಿಂಗ್ ಬಾಡಿಗೆಗಿದೆ**
ಚಾಮರಾಜಪೇಟೆ ಸರ್ಕಲ್ ಹತ್ತಿರ, ಕಲ್ಲೇಶ್ವರ ಕಿರಾಣಿ ಅಂಗಡಿ ಮೇಲ್ಭಾಗದಲ್ಲಿ 3 ಮಹಡಿ ಇರುವ 10,000 ಚದುರ ಅಡಿ ವಿಶಾಲವಾದ ಜಾಗ ಇರುವ ಬಿಲ್ಡಿಂಗ್ ಬಾಡಿಗೆಗಿದೆ. ಸಂಪರ್ಕಿಸಿ :
ಮೊ. : 98453 17181

**ಸೈಟುಗಳು ಮಾರಾಟಕ್ಕಿವೆ**
ಆಂಜನೇಯ ಬಡಾವಣೆ ಉತ್ತರ 50x40, ಸಿದ್ದವೀರಪ್ಪ ಬಡಾವಣೆ ದಕ್ಷಿಣ 30x40, ವಿದ್ಯಾನಗರ ಪಾರ್ಕ್ ಹಿಂಭಾಗ ಪಶ್ಚಿಮ 30x60, ಸರ್ಕಾರಿ ನೌಕರರ ಬಡಾವಣೆ ಪೂರ್ವ 30x40, 40x60 ಉತ್ತರ-ಪಶ್ಚಿಮ ಕಾರ್ನರ್ 30x40
ಐಗೂರು ವಿಜಯಕುಮಾರ
99457 02495

**ಶ್ರೇಯಸ್ ಉದರ, ಲಿವರ್, ಕರುಳು ರೋಗಗಳ ಚಿಕಿತ್ಸಾ ಕೇಂದ್ರ**
ಡಾ. ಇ.ಆರ್. ಸಿದ್ದೇಶಿ
M.D. (MED), D.M. (Gastro), F.A.C.G. (USA), P.G.C.C. Diab. Care (Aust)
ಉದರ, ಲಿವರ್, ಕರಳು, ಪ್ಯಾನ್‌ಕ್ರಿಯಾಸ್, ಎಂಡೋಸ್ಕೋಪಿ, ಸಕ್ಕರೆ ಕಾಯಿಲೆ ತಜ್ಞರು
8th Main, 8th Cross, P.J. Extension, Davangere.
08192-237325, 94837 23166

**ಟ್ಯಾಂಕ್ ಕ್ಲೀನಿಂಗ್**
ಮನೆಯ ನೀರಿನ ತೊಟ್ಟಿ, ಟ್ಯಾಂಕ್‌ಗಳು ಗಲೀಜಾಗಿದ್ದರೆ ಯಂತ್ರಗಳನ್ನು ಬಳಸಿ ನಾವು ಕ್ಲೀನ್ ಮಾಡುತ್ತೇವೆ.
ಅತ್ಯುತ್ತಮ ಸೇವೆಗೆ ಸಂಪರ್ಕಿಸಿ
99863 61250
91132 85992

**ಮನೆಗಳು ಮಾರಾಟಕ್ಕಿವೆ**
S S ಮಾಲ್ ಎದುರು (ಕುವೆಂಪು ನಗರ) ಪೂರ್ವ 30x40 ಮೇಲೆ ಕೆಳಗೆ, ಮಹಾಲಕ್ಷ್ಮಿ ಬಡಾವಣೆ ಪೂರ್ವ 30x35 (ಹೊಸ ಮನೆ) ಸಿದ್ದವೀರಪ್ಪ ಬಡಾವಣೆ ಉತ್ತರ ಡುಪ್ಲೆಕ್ಸ್ 30x45
ಐಗೂರು ವಿಜಯಕುಮಾರ
99457 02495

**ಬೋರ್‌ವೆಲ್ ಮಷಿನ್ ಮಾರಾಟಕ್ಕೆ ಇದೆ**
ಶಾಮನೂರು ದೇವರ ಬೆಳಕೆರೆ ರಸ್ತೆ 5ಹೆಚ್.ಪಿ 10 ಸ್ಟೇಜ್, 5 ಹೆಚ್.ಪಿ 5 ಸ್ಟೇಜ್, 2" ಜಿ.ಐ ಪೈಪು 195 ಅಡಿ, L&T ಸ್ಟಾರ್ಟರ್. 40 ಸಾವಿರ ರೇಟ್‌ನಲ್ಲಿ ಮಾರಾಟಕ್ಕಿದೆ.
94828 18253

**ಬಾಡಿಗೆಗೆ ಇದೆ**
1. 2BHK ಗ್ರೌಂಡ್ ಫ್ಲೋರ್ ಮನೆ ಈಶ್ವರ್-ಗಣಪತಿ ದೇವಸ್ಥಾನದ ಹಿಂದೆ ವಿದ್ಯಾನಗರ.
2. 30x50 ಗ್ರೌಂಡ್ ಫ್ಲೋರ್ ಕಮರ್ಷಿಯಲ್ ಹಾಲ್, ಕಾಫೀ ಡೇ ಪಕ್ಕ ವಿದ್ಯಾನಗರ.
99725 77991

**ಮರದ ಗಾಣದ ಎಣ್ಣೆ ದೊರೆಯುತ್ತದೆ**
ಶೇಂಗಾ ಎಣ್ಣೆ -ರೂ.270/-ಲೀ.
ಕೊಬ್ಬರಿ ಎಣ್ಣೆ -ರೂ.350/-ಲೀ.
ಶೇಂಗಾ ಹಿಂಡಿ -ರೂ.42/-ಕೆ.ಜಿ.
Amruth Cold Pressed Oil
BIET ಕಾಲೇಜ್ ಸರ್ಕಲ್, ದಾವಣಗೆರೆ.
97400 00192

**E-BIKE 0% INTEREST EMI**
ಎಲೆಕ್ಟ್ರಿಕ್ ಬೈಕ್ ಕೇವಲ 10 ರೂನಲ್ಲಿ 100 KM ಓಡಿಸಿ.
ಮರುತ್ ಎಂಟರ್‌ಪ್ರೈಸಸ್
ವೈ.ಎಂ.ಸಿ ಕಾಂಪ್ಲೆಕ್ಸ್, ಹದಡಿ ರಸ್ತೆ ಸ್ಟೇಡಿಯಂ ಎದುರು ದಾವಣಗೆರೆ.
98868 96574 (T&C)

**ಮನೆ ಬಾಡಿಗೆಗೆ ಇದೆ**
1BHK ಮನೆ 2nd Floor For Rent # 3425/22 4th Main, 11th Cross, S S Layout 'B' Block Davanagere
96638 28202
96320 60242

**OPPORTUNITY / ಅವಕಾಶ**
ದಾವಣಗೆರೆಯಲ್ಲಿ ಇರುವ XEROX ಅಂಗಡಿಯವರಿಗೆ ಯಾವುದೇ ಬಂಡವಾಳ ಇಲ್ಲದೆ ಹಣ ಗಳಿಸುವ ಅವಕಾಶವಿದೆ
96325 54524

**ಸೈಟುಗಳು ಮಾರಾಟಕ್ಕಿವೆ**
ಹರಿಹರ ನಗರದಲ್ಲಿ ದೂಡಾ ಅಪ್ರೂವ್ಡ್ ಸೈಟುಗಳು ವಿಶೇಷ ರಿಯಾಯಿತಿಯಲ್ಲಿ ಮಾರಾಟಕ್ಕಿವೆ. ಸುಲಭ ಕಂತಿನಲ್ಲಿ ಲಭ್ಯ.
30×40, 30x50
98441 24217, 94481 55202
86603 11021 , 93431 10009

**ಮನೆ ಬಾಡಿಗೆಗೆ ಇದೆ**
# 641/15, ಉತ್ತಮ ಲೇಔಟ್, ಆವರಗೆರೆ, ದಾವಣಗೆರೆ ಮೊದಲನೇ ಮಹಡಿ ಹಾಗೂ ಎರಡನೇ ಮಹಡಿಯಲ್ಲಿ ಸಿಂಗಲ್ ಬೆಡ್ ರೂಂ ಮನೆ ಬಾಡಿಗೆಗೆ ಇದೆ. ಎಲ್ಲಾ ಸೌಕರ್ಯವಿದೆ.
99644 90568, 70196 32334

**ಬೇಕಾಗಿದ್ದಾರೆ**
ದಾವಣಗೆರೆ, ಹರಿಹರ ಮತ್ತು ರಾಣೇಬೆನ್ನೂರು ಸುತ್ತ ಮುತ್ತ ಕೆಲಸ ಮಾಡಲು ಸೆಕ್ಯೂರಿಟಿ ಗಾರ್ಡ್‌ಗಳು ಬೇಕಾಗಿದ್ದಾರೆ. ESI, PF ಸೌಲಭ್ಯ ಇದೆ.
ಹೈ ಅಲರ್ಟ್ ಸೆಕ್ಯೂರಿಟಿ ಸರ್ವೀಸ್
78990 15677, 96113 94063

**ಸೈಟ್‌ಗಳು ಮಾರಾಟಕ್ಕಿವೆ**
ದಾವಣಗೆರೆ ರಾಮನಗರ, ಎಸ್.ಎಸ್. ಆಸ್ಪತ್ರೆ ಹಿಂಭಾಗದಲ್ಲಿ ಸುಲಭ ಕಂತುಗಳಲ್ಲಿ ಸೈಟುಗಳು ಮಾರಾಟಕ್ಕಿವೆ. (Rs 1,500/-Sqft)
ಹುಲ್ಲುಮನೆ ಪ್ರಾಪರ್ಟೀಸ್
ಫೋ.: 95135 03000

**ನೀರಿನ ಲೀಕೇಜ್ (ವಾಟರ್ ಪ್ರೂಫಿಂಗ್)**
ನಿಮ್ಮ ಮನೆ ಮತ್ತಿತರೆ ಕಟ್ಟಡಗಳ ಬಾತ್‌ರೂಂ, ಬಾಲ್ಕನಿ, ಟೆರೇಸ್, ನೀರಿನ ತೊಟ್ಟಿ, ಗೋಡೆ ಬಿರುಕು, ನೀರಿನ ಟ್ಯಾಂಕ್, ಎಲ್ಲಾ ರೀತಿಯ ನೀರಿನ ಲೀಕೇಜ್‌ಗಳಿಗೆ ಸಂಪರ್ಕಿಸಿ:
ಮೊ. 9538777582
ಕೆಲಸ 100% ಗ್ಯಾರಂಟಿ.

**ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ**
#49, ಪರಿಸರ ಭವನ, ಚರ್ಚ್ ಸ್ಟ್ರೀಟ್ ಬೆಂಗಳೂರು-560 001
ಫೋನ್: 080-2558 6520/2558 9112 ಫ್ಯಾಕ್ಸ್: 080-2588 6321
e-mail: ho@kspcb.gov.in | Website: kspcb.karnataka.gov.in

ಮಾನಿಮಂ/144/ಹಿಪಅ/ಗಣಿ/ಪಸಾಸ/2022-23/3690 ದಿನಾಂಕ: 26.08.2022

**ಪರಿಸರ ಸಾರ್ವಜನಿಕ ಸಭೆಗಾಗಿ ಸೂಚನೆ**

**ಕರ್ನಾಟಕ ಸ್ಟೇಟ್ ಮಿನರಲ್ಸ್ ಕಾರ್ಪೋರೇಷನ್ ಲಿಮಿಟೆಡ್** ರವರು ಬಿದರಗದ್ದೆ ಮರಳು ಬ್ಲಾಕ್ (Block No.01) ನಲ್ಲಿ ಸಾಮಾನ್ಯ ಮರಳು ಗಣಿಗಾರಿಕೆ ಮಾಡಲು ತುಂಗಾಭದ್ರಾ ನದಿ ತಳ ಸರ್ವೆ ನಂ. 19-24, ಬಿದ್ದರಗದ್ದೆ ಗ್ರಾಮ, ಹೊನ್ನಾಳಿ ತಾಲ್ಲೂಕು, ದಾವಣಗೆರೆ ಜಿಲೆಯಲ್ಲಿ ಒಟ್ಟು 24.00 ಎಕರೆ ಪ್ರದೇಶದಲ್ಲಿ ವರ್ಷಕ್ಕೆ 1,39,861 ಟನ್‌ಗಳಷ್ಟು ಸಾಮಾನ್ಯ ಮರಳು ಗಣಿಗಾರಿಕೆಯನ್ನು ಸ್ಥಾಪಿಸಲು ಉದ್ದೇಶಿಸಿರುತ್ತಾರೆ. ಸದರಿ ಯೋಜನೆಯು ಪರಿಸರ ಆಘಾತ ಅಧ್ಯಯನದ ಅಧಿಸೂಚನೆ ದಿನಾಂಕ 14.09.2006ರ (ತಿದ್ದುಪಡಿ ದಿನಾಂಕ: 01.12.2009)ಗೆ ಒಳಪಟ್ಟಿದ್ದು, ಅದರ ಪ್ರಕಾರ, ಪರಿಸರ ಸಾರ್ವಜನಿಕ ಆಲಿಕೆಯನ್ನು ನಡೆಸಬೇಕಿದೆ. ರಾಜ್ಯ ಮಟ್ಟದ ಪರಿಸರ ಅಘಾತ ಅಧ್ಯಯನ ಪ್ರಾಧಿಕಾರ, ಕರ್ನಾಟಕ, ಇವರ Terms of Reference ಪತ್ರ ಸಂಖ್ಯೆ : SEIAA 232 MIN 2021 ದಿನಾಂಕ: 15.11.2021 ಮತ್ತು ಉದ್ದಿಮೆದಾರರು ಮಂಡಳಿಗೆ ಸಲ್ಲಿಸಿದ ಮನವಿ ಪತ್ರದ ದಿನಾಂಕ: 30.03.2022 ಪ್ರಕಾರ ಪರಿಸರ ಸಾರ್ವಜನಿಕ ಆಲಿಕೆ ಸಭೆಯನ್ನು ಮಂಡಳಿವತಿಯಿಂದ ನಡೆಸಲಾಗುತ್ತಿದೆ.

**ಯೋಜನೆಯ ವಿವರಗಳು ಕೆಳಕಂಡಂತಿವೆ**

| | |
|---|---|
| 1 | **ಕಂಪನಿ ಹೆಸರು ಮತ್ತು ವಿಳಾಸ:** ಕರ್ನಾಟಕ ಸ್ಟೇಟ್ ಮಿನರಲ್ಸ್ ಕಾರ್ಪೋರೇಷನ್ ಲಿಮಿಟೆಡ್ ಟಿಟಿಎಂಸಿ ಕಟ್ಟಡ, ಎ ಬ್ಲಾಕ್, 5ನೇ ಮಹಡಿ, ಬಿಎಂಟಿಸಿ ಕಟ್ಟಡ, ಕೆ ಹೆಚ್‌ರಸ್ತೆ, ಶಾಂತಿನಗರ, ಬೆಂಗಳೂರು-560027 |
| 2 | **ಉದ್ದೇಶಿತ ಯೋಜನೆಯ ಸ್ಥಳ:** ಸರ್ವೆ ನಂ. 19-24, ಬಿದರಗದ್ದೆ ಗ್ರಾಮ, ಹೊನ್ನಾಳಿ ತಾಲ್ಲೂಕು, ದಾವಣಗೆರೆ ಜಿಲ್ಲೆ, ಕರ್ನಾಟಕ. |
| 3 | **ಉದ್ದೇಶಿತ ಯೋಜನೆಯ ಕಾರ್ಯಚಟುವಟಿಕೆ:** ವರ್ಷಕ್ಕೆ 1,39,861 ಟನ್‌ಗಳಷ್ಟು ಸಾಮಾನ್ಯ ಮರಳು ಗಣಿಗಾರಿಕೆ. |
| 4 | **ಉದ್ದೇಶಿತ ಮಾಲಿನ್ಯ ನಿಯಂತ್ರಣ ಕ್ರಮಗಳು:** ರಸ್ತೆಗಳಲ್ಲಿ ನಿಯಮಿತವಾಗಿ ನೀರು ಚಿಮುಕಿಸುವುದು, ಅವೆನ್ಯೂ ಪ್ಲಾಂಟೇಶನ್, ಲೋಡ್ ವಾಹನವನ್ನು ಟಾರ್ಪಾಲಿನ್‌ನಿಂದ ಮುಚ್ಚುವುದು, ನಿಯಮಿತ ರಸ್ತೆ ನಿರ್ವಹಣೆ, ಹಸಿರು ಪಟ್ಟಿ ರಚನೆ ಇತ್ಯಾದಿ. ವಾಹನದ ನಿಯಮಿತ ನಿರ್ವಹಣೆ, ಗ್ರೀನ್ ಬೆಲ್ಟ್ ಅಭಿವೃದ್ಧಿ, ಸರಿಯಾದ ರಸ್ತೆ ಗ್ರೇಡಿಯಂಟ್ ನಿರ್ವಹಣೆ ಇತ್ಯಾದಿ. ಅನುಮತಿಸುವ ಶಬ್ದ ಮಟ್ಟಗಳು ಮತ್ತು ಆ ಮಟ್ಟಗಳಿಗೆ ಗರಿಷ್ಠ ಮಾನ್ಯತೆ ಬಗ್ಗೆ ಕಾರ್ಮಿಕರಿಗೆ ಅರಿವು ನೀಡಲಾಗುವುದು. ಭೂ ಮಾಲೀಕರೊಂದಿಗೆ ಸಮಾಲೋಚಿಸಿ ಅಂತರ್ಜಲ ಮರುಪೂರಣ ಪಿಟ್, ಮಳೆ ನೀರುಕೊಯ್ಲು ಕೆಲಸ, ಮರಳು ಬ್ಲಾಕ್‌ನ ಆಚೆಯ ಕಡೆಗೆ ಜಲಾನಯನ ಪ್ರದೇಶದ ಪುನಶ್ಚೇತನ, ಗಲ್ಲಿ ಪ್ಲಗ್ ಮತ್ತು ಚೆಕ್ ಡ್ಯಾಂಗಳನ್ನು ಕೈಗೊಳ್ಳಲು ಉದ್ದೇಶಿಸಲಾಗಿದೆ. ಮೇಲ್ಮೈ ನೀರಿನ ಮಾರ್ಗವನ್ನು ತಿರುಗಿಸಲಾಗುವುದಿಲ್ಲ. ಲೀಸ್‌ನ ಗಡಿಯುದ್ದಕ್ಕೂ ಮಳೆ ನೀರು ಕೆಲಸದ ಸ್ಥಳಕ್ಕೆ ಹೋಗುವುದನ್ನು ತಪ್ಪಿಸಲು ಸಣ್ಣ ಕಾಲುವೆಯನ್ನು ರಚಿಸಲಾಗುತ್ತದೆ ಮತ್ತು ನೀರನ್ನು ನೈಸರ್ಗಿಕ ನೀರಿನ ಹರಿವಿಗೆ ಬಿಡಲಾಗುತ್ತದೆ. |
| 5 | **ಪರಿಸರ ಸಾರ್ವಜನಿಕ ಸಭೆಯ ದಿನಾಂಕ, ಸಮಯ ಮತ್ತು ಸ್ಥಳ:** 28.09.2022 ರಂದು ಬುಧವಾರ ಬೆಳಿಗ್ಗೆ 11.00 ಗಂಟೆಗೆ, ಶ್ರೀಶೈಲ ಮಲ್ಲಿಕಾರ್ಜುನ ಸಮುದಾಯ ಭವನ, ಬಿದರಗಡ್ಡೆ ಗ್ರಾಮ, ಹೊನ್ನಾಳಿ ತಾಲ್ಲೂಕು, ದಾವಣಗೆರೆ ಜಿಲ್ಲೆ, ಕರ್ನಾಟಕ. |
| 6 | **ಯೋಜನೆಯ ಕಾರ್ಯಕಾರಿ ಸಾರಾಂಶ ಸಾರ್ವಜನಿಕ ಪರಾಮರ್ಶೆಗೆ ಇಡುವ ಸ್ಥಳ:** (ಅ) ಜಿಲ್ಲಾಧಿಕಾರಿಗಳ ಕಛೇರಿ, ದಾವಣಗೆರೆ. (ಆ)ಮುಖ್ಯ ಕಾರ್ಯ ನಿರ್ವಾಹಕ ಅಧಿಕಾರಿಗಳ ಕಛೇರಿ, ಜಿಲ್ಲಾ ಪಂಚಾಯತ್, ದಾವಣಗೆರೆ. (ಇ) ಜಿಲ್ಲಾ ಕೈಗಾರಿಕಾ ಕೇಂದ್ರ, ದಾವಣಗೆರೆ. (ಈ) ತಾಲ್ಲೂಕು ಪಂಚಾಯತಿ ಕಾರ್ಯಲಯ, ಹೊನ್ನಾಳಿ. (ಉ) ತಹಶೀಲ್ದಾರರ ಕಾರ್ಯಲಯ, ಹೊನ್ನಾಳಿ. (ಊ) ಗ್ರಾಮ ಪಂಚಾಯಿತಿ ಕಾರ್ಯಾಲಯ, ಹೆಚ್ ಕಡದಕಟ್ಟೆ, ಹೊನ್ನಾಳಿ ತಾಲ್ಲೂಕು. (ಋ) ಪ್ರಾದೇಶಿಕ ಅಧಿಕಾರಿಗಳ ಕಛೇರಿ, ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ, ದಾವಣಗೆರೆ. (ಎ) ರಾಜ್ಯ ಮಟ್ಟದ ಪರಿಸರ ಅಘಾತ ಅಧ್ಯಯನ ಪ್ರಾಧಿಕಾರ, ಕರ್ನಾಟಕ ಸರ್ಕಾರ, ಕೊಠಡಿ ಸಂಖ್ಯೆ. 706, 7ನೇ ಮಹಡಿ 4ನೇ ಗೇಟ್, ಬಹುಮಹಡಿಗಳ ಕಟ್ಟಡ, ಬೆಂಗಳೂರು-560 001. ಸಹಾಯಕೇಂದ್ರ, ಕರ್ನಾಟಕರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ, ನೆಲ ಅಂತಸ್ತು, ನಂ.49, ಪರಿಸರ ಭವನ, ಚರ್ಚ್ ಸ್ಟ್ರೀಟ್, ಬೆಂಗಳೂರು-560001. |

**ಸೂಚನೆ:** ಯೋಜನಾ ಸ್ಥಳದಲ್ಲಿ ವಾಸವಾಗಿರುವ ಆಸಕ್ತ ನಿವಾಸಿಗಳು, ಪರಿಸರಾಸಕ್ತ ಗುಂಪುಗಳು ಮತ್ತು ಈ ಯೋಜನೆಯಿಂದ ತೊಂದರೆಗೊಳಗಾಗಬಹುದಾದ ಸಾರ್ವಜನಿಕರು ಮತ್ತು ಸಲಹೆಗಳು, ಅನಿಸಿಕೆಗಳು, ಟೀಕೆ ಟಿಪ್ಪಣಿಗಳು ಹಾಗೂ ಅಹವಾಲುಗಳನ್ನು ಮೌಖಿಕ / ಲಿಖಿತ / ಇ-ಮೇಲ್ ಮೂಲಕ ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ / ಅಧ್ಯಕ್ಷರು, ಪರಿಸರ ಸಾರ್ವಜನಿಕ ಸಮಿತಿ (ಜಿಲ್ಲಾಧಿಕಾರಿಗಳು, ದಾವಣಗೆರೆ ಜಿಲ್ಲೆ, ದಾವಣಗೆರೆ) ಇವರಿಗೆ ಈ ಅಧಿಸೂಚನೆ ಪ್ರಕಟವಾದ 30 ದಿನಗಳ ಒಳಗೆ ಸಲ್ಲಿಸತಕ್ಕದ್ದು. ಇಚ್ಛೆಯುಳ್ಳ ಸಾರ್ವಜನಿಕರು ಮೇಲೆ ತಿಳಿಸಿರುವ ದಿನದಂದು ಪರಿಸರ ಸಾರ್ವಜನಿಕ ಸಭೆಯಲ್ಲಿ ಪಾಲ್ಗೊಳ್ಳಬಹುದಾಗಿದೆ.ಹೆಚ್ಚಿನ ವಿವರಗಳನ್ನು ಮಂಡಳಿಯ ವೆಬ್‌ಸೈಟ್: kspcb.karnataka.gov.in ರಲ್ಲಿ ಪಡೆಯಬಹುದು.

ಸಹಿ/-
ಸದಸ್ಯ ಕಾರ್ಯದರ್ಶಿ

**ಮನೆ ಲೀಜ್‌ಗೆ ಇದೆ**
ಕುಂದುವಾಡ ರೋಡ್ ಜೈನ್ ಲೇಔಟ್, 2ನೇ ಮೇನ್, 2ನೇ ಕ್ರಾಸ್, DR/1885/81 ರಲ್ಲಿ ಬರುವ ಪೂರ್ವ ಫೇಸ್, 3ನೇ ಫ್ಲೋರ್‌ನಲ್ಲಿ ಸಿಂಗಲ್ ಬೆಡ್ ರೂಂ ಮನೆ ಲೀಜ್‌ಗೆ ಇದೆ. ಸಸ್ಯಹಾರಿಗಳಿಗೆ ಮಾತ್ರ.
97392 04631, 88673 58631

**ಸೇಲ್ಸ್ ಮ್ಯಾನ್ ಬೇಕಾಗಿದ್ದಾರೆ**
ಆಕರ್ಷಕ ಕಮೀಷನ್
ಆಕರ್ಷಕ ಬೋನಸ್
ಪ್ರಕಾಶ್ ಕಾಫಿ ವರ್ಕ್ಸ್
ವಿಜಯಲಕ್ಷ್ಮಿ ರಸ್ತೆ, ದಾವಣಗೆರೆ.
88619 39467, 97401 53513

**ಬೇಕಾಗಿದ್ದಾರೆ**
ಮನೆಯಲ್ಲಿ ಅಡುಗೆ ಮಾಡುವವರು ಬೇಕಾಗಿದ್ದಾರೆ. ಸಮಯ : ಬೆಳಿಗ್ಗೆ 8 ರಿಂದ ಸಂಜೆ 6 ರವರೆಗೆ. ಮನೆ ವಿಳಾಸ ಹೈಟೆಕ್ ಹಾಸ್ಪಿಟಲ್ ಹತ್ತಿರ. ಆಸಕ್ತಿ ಇರುವ ಹೆಣ್ಣು ಮಕ್ಕಳು ಈ ನಂಬರ್‌ಗೆ ಸಂಪರ್ಕಿಸಿ.
83102 57998

**ಮನೆ ಬಾಡಿಗೆ/ಲೀಸ್‌ಗೆ ಇದೆ**
ಕೊಟ್ಟೂರೇಶ್ವರ ಬಡಾವಣೆ ನಿಟುವಳ್ಳಿಯಲ್ಲಿ ಎರಡನೇ ಮಹಡಿಯಲ್ಲಿ ಪೂರ್ವ ದಿಕ್ಕಿನ, ಕಮೋಡ್ ಸಿಸ್ಟಂ, ಬೋರ್, ಮುನ್ಸಿಪಲ್ ನೀರಿನ ವ್ಯವಸ್ಥೆ ಇರುವ ಸಿಂಗಲ್ ಬೆಡ್ ರೂಂ ಮನೆ ಬಾಡಿಗೆ/ಲೀಸ್‌ಗೆ ಇದೆ.
96634 65543

**ಮನೆ ಬಾಡಿಗೆಗೆ ಇದೆ**
ದಾವಣಗೆರೆ ಎಂಸಿಸಿ ಬಿ ಬ್ಲಾಕ್‌ನಲ್ಲಿ ಗ್ರೌಂಡ್ ಫ್ಲೋರ್‌ನಲ್ಲಿ 2 ಬೆಡ್ ರೂಂ ಮನೆ, ಮೊದಲನೇ ಮಹಡಿಯಲ್ಲಿ 1 ಬೆಡ್ ರೂಂ ಮನೆ ಬಾಡಿಗೆಗೆ ಇದೆ.
ಬ್ರೋಕರ್ ಕುಮಾರ್
94804 79300

**2 BHK HOUSE RENT**
2008/131 "ಅದಿತಿ ಸ್ವರ ಸಂಗೀತ ನಿಲಯ" ತರಳಬಾಳು ಬಡಾವಣೆ, ವೆಲ್ ಫರ್ನಿಷ್ಡ್ ಹೌಸ್ 17ನೇ ಕ್ರಾಸ್
72046 68334
96633 75541

**ಮನೆ ಬಾಡಿಗೆ/ಲೀಸ್‌ಗೆ ಇದೆ**
ಬಾಲಾಜಿ ನಗರ, ಪಾರ್ಕ್ ಎದುರು, ಕುಂದುವಾಡ ರಸ್ತೆ, # 3616/154 2ನೇ ಮಹಡಿಯಲ್ಲಿ ಸಿಂಗಲ್ ಬೆಡ್ ರೂಂ ಮನೆ ಬಾಡಿಗೆಗೆ/ಲೀಸ್‌ಗೆ ಇದೆ. (ಸಸ್ಯಹಾರಿಗಳಿಗೆ ಮಾತ್ರ) ಸಂಪರ್ಕಿಸಿ :
ಫೋ. : 94817 21551

**ಮನೆ ಬಾಡಿಗೆಗೆ ಇದೆ**
ಸರಸ್ವತಿ ನಗರ ಮುಖ್ಯ ರಸ್ತೆ ದುರ್ಗಾಂಬಿಕಾ ಸ್ಕೂಲ್ ಹತ್ತಿರ 2 ಬೆಡ್ ರೂಂ ಇರುವ ಮುನಿಸಿಪಲ್ ಹಾಗೂ ಬೋರ್ ನೀರಿನ ಸೌಕರ್ಯವಿರುವ 2ನೇ ಮಹಡಿಯಲ್ಲಿ ಮನೆ ಬಾಡಿಗೆಗೆ ಇದೆ
99028 55395

**ಆಫೀಸ್/ಮನೆಗೆ ಬಾಡಿಗೆಗೆ ಇದೆ**
ಪಿ.ಜೆ. ಬಡಾವಣೆ, 4ನೇ ಮುಖ್ಯರಸ್ತೆಯಲ್ಲಿ 1ನೇ ಮಹಡಿಯ ಸುಮಾರು 2000 ಚ. ಅಡಿ. 3 BHK ಬಿಲ್ಡಿಂಗ್ ಆಫೀಸ್ ಅಥವಾ ಮನೆ ಉಪಯೋಗಕ್ಕೆ ಬಾಡಿಗೆಗೆ ಇದೆ.
ಫೋ. : 98441 88191

**ಗೌರಿ ಗಣೇಶ ಹಬ್ಬದ ಕೊಡುಗೆ**
FULLY AUTO MATIC ಗ್ಯಾಸ್ ಗೀಸರ್ ಎಕ್ಸ್‌ಚೇಂಜ್ ಆಫರ್ : 1000 /- OFF
ಸೇಲ್ಸ್, ಸರ್ವೀಸ್‌ಗಾಗಿ ಸಂಪರ್ಕಿಸಿ
ಮರುತ್ ಎಂಟರ್‌ಪ್ರೈಸಸ್
ವೈ.ಎಂ.ಸಿ ಕಾಂಪ್ಲೆಕ್ಸ್, ಹದಡಿ ರಸ್ತೆ ಸ್ಟೇಡಿಯಂ ಎದುರು, ದಾವಣಗೆರೆ.
98868 96574, 98458 67574

**ಸೈಟ್ ಮಾರಾಟಕ್ಕಿದೆ**
ರಾಜೀವ್‌ಗಾಂಧಿ ಬಡಾವಣೆಯಲ್ಲಿ 20x30 ಪಶ್ಚಿಮ ದಿಕ್ಕಿನ ಸೈಟ್ ಮಾರಾಟಕ್ಕಿದೆ. ಸಂಪರ್ಕಿಸಿ :
83106 11169
98446 33119

**ಬೇಕಾಗಿದ್ದಾರೆ**
ರೆಸ್ಟೋರೆಂಟ್‌ನಲ್ಲಿ ಕೆಲಸ ಮಾಡಲು ಮ್ಯಾನೇಜರ್ (ಮಹಿಳೆ) ಮತ್ತು ನಾರ್ತ್ ಇಂಡಿಯನ್ ಕುಕ್, ಸಪ್ಲೆಯರ್ ಬೇಕಾಗಿದ್ದಾರೆ. ಆಕರ್ಷಕ ವೇತನದೊಂದಿಗೆ ಊಟ, ವಸತಿ ನೀಡಲಾಗುವುದು.
97428 29451

**ಮನೆ ಬಾಡಿಗೆ/ಲೀಸ್‌ಗಿದೆ**
ಸರಸ್ವತಿ ಬಡಾವಣೆ, ಜಯನಗರ, ಶಿವಕುಮಾರಸ್ವಾಮಿ ಬಡಾವಣೆ, ಶಕ್ತಿ ನಗರ, ಆಂಜನೇಯ ಬಡಾವಣೆ, ಸಿದ್ದವೀರಪ್ಪ ಬಡಾವಣೆಯಲ್ಲಿ ಮನೆಗಳು ಬಾಡಿಗೆ/ಲೀಸ್‌ಗೆ ಇವೆ. ಶಿವಕುಮಾರಸ್ವಾಮಿ ಬಡಾವಣೆಯಲ್ಲಿ ಮನೆಗಳು ಬಾಡಿಗೆಗಿವೆ.
78997 60749, 99726 75759

**ಮನೆ ಬಾಡಿಗೆಗೆ ಇದೆ**
#853/6 ಮೊದಲನೇ ಹಂತ, 2ನೇ ಮೇನ್ ಹಾಗೂ 6ನೇ ಕ್ರಾಸ್, ಶಿವ ಕುಮಾರ ಸ್ವಾಮಿ ಬಡಾವಣೆಯಲ್ಲಿರುವ ಸಿಂಗಲ್ ಬೆಡ್ ರೂಂ ಮನೆ ಮುನಿಸಿಪಲ್ ಹಾಗೂ ಬೋರ್ ಎರಡೂ ನೀರಿನ ವ್ಯವಸ್ಥೆ ಇರುವ ವಿಶಾಲವಾದ ಪಾರ್ಕಿಂಗ್ ಇರುವ ಮನೆ. ಸಂಪರ್ಕಿಸಿ:
63618 93176

**ಮನೆಗಳು ಬಾಡಿಗೆಗೆ ದೊರೆಯುತ್ತವೆ**
1BHK ಮನೆಗಳು ಬಾಡಿಗೆಗೆ ದೊರೆಯುತ್ತವೆ. #1674/A1, 4th ಕ್ರಾಸ್, ಶ್ರೀನಿವಾಸ ನಗರ ದಾವಣಗೆರೆ
97425 52737

**ಬೇಕಾಗಿದ್ದಾರೆ**
HPCL ಕಂಪನಿ ವತಿಯಿಂದ ಪೆಟ್ರೋಲ್ ಬಂಕ್‌ಗಳಲ್ಲಿ ಕೆಲಸ ಮಾಡಲು ಬೈಕ್ ಮೆಕ್ಯಾನಿಕ್ ಬೇಕಾಗಿದ್ದಾರೆ. ಸಂಬಳ 10,000 ರೂ. ಸಂಪರ್ಕಿಸಿ :
81235 06863,
74831 76531

**ಮನೆ ಮಾರಾಟಕ್ಕಿದೆ**
20x60 ಅಳತೆಯಲ್ಲಿ ಎಂಸಿಸಿ 'ಬಿ' ಬ್ಲಾಕ್‌ನಲ್ಲಿ ಮನೆ ಮಾರಾಟಕ್ಕಿದೆ. ಸಂಪರ್ಕಿಸಿ :
94496 84768
ಮಧ್ಯವರ್ತಿಗಳಿಗೆ ಅವಕಾಶವಿಲ್ಲ

**ಜಮೀನು ಮಾರಾಟಕ್ಕೆ ಬೇಕಾಗಿದೆ**
ದಾವಣಗೆರೆಯಿಂದ ಕೊಂಡಜ್ಜಿ-ಕಕ್ಕರಗೊಳ್ಳ ಮುಖ್ಯ ರಸ್ತೆಗೆ ಹೊಂದಿಕೊಂಡಂತೆ 4 ರಿಂದ 6 ಎಕರೆ ಜಮೀನು ಬೇಕಾಗಿದೆ. ಸಂಪರ್ಕಿಸಿ :
91085 21680
87226 06008

ದಾವಣಗೆರೆಯಲ್ಲಿ ತೆರೆಯಲಿರುವ ಸೀರೆ ಮತ್ತು ಒಡವೆಗಳ ಭವ್ಯ ಶೋ ರೂಂಗೆ ಸೇಲ್ಸ್ ಮನ್ ಮತ್ತು ಸೇಲ್ಸ್ ಗರ್ಲ್ಸ್ ಹುದ್ದೆ ಭರ್ತಿಗೆ ಅರ್ಜಿ ಆಹ್ವಾನ
ಫೋಟೋ, ಆಧಾರ ಕಾರ್ಡ್ ನೊಂದಿಗೆ ಸಲ್ಲಿಸಿ.
Shilpakala Silk Sarees & Jewels
@323/8, Chamarajpet Circle, Davangere-1
Email: Shilpakaladvg@gmail.com
WhatsApp no:
7019501737

**ಮನೆ ಬಾಡಿಗೆಗೆ ಇದೆ**
2 BHK ಮನೆ, DCM TownShip, No. 329/87/91, 5th Main, 3rd Cross, Ist Floor
94484 77150

**ಸಿಂಗಲ್ ಬೆಡ್ ರೂಂ ಮನೆ ಖಾಲಿ ಇದೆ**
SS Layout, B Block, 2nd Main road, Near Clock Tower Circle, Davangere. (ಸಸ್ಯಹಾರಿಗಳಿಗೆ ಮಾತ್ರ)
98443 06988

**ತಕ್ಷಣ ಬೇಕಾಗಿದ್ದಾರೆ**
ಬಟ್ಟೆ ಅಂಗಡಿಯಲ್ಲಿ ಕೆಲಸ ಮಾಡಲು ಸೇಲ್ಸ್ ಗರ್ಲ್ಸ್ ಬೇಕಾಗಿದ್ದಾರೆ.
ರಾಜ್‌ಹಂಸ್ ಕಲೆಕ್ಷನ್ಸ್
ಚಾಮರಾಜ ಪೇಟೆ, ದಾವಣಗೆರೆ
94816 72542

**ಬಾಡಿಗೆಗೆ**
ಸಿಂಗಲ್ ಬೆಡ್ ರೂಂ ಮೊದಲನೇ ಮಹಡಿಯಲ್ಲಿರುವ ಮನೆ ಖಾಲಿ ಇದೆ. 60 ಅಡಿ ರಸ್ತೆ, ರಾಮಣ್ಣನ ತೋಟದ ಪಕ್ಕ, ಆನಂದ್ ಅಕಾಡೆಮಿ ಕಾಲೇಜು ಹತ್ತಿರ, ನಿಟುವಳ್ಳಿ.
93537 93839

**ಬೇಕಾಗಿದ್ದಾರೆ**
ಕನ್ನಡಕದ ಅಂಗಡಿಗೆ ಕೆಲಸಕ್ಕೆ ಹುಡುಗರು ಬೇಕಾಗಿದ್ದಾರೆ. ಸಂಪರ್ಕಿಸಿ:
94486 89345
99455 24193

**ಬೇಕಾಗಿದ್ದಾರೆ**
ಸನ್ನಿಧಿ ಟ್ರೇಡಿಂಗ್ ಕೋ ಚಿತ್ರದುರ್ಗ ಮತ್ತು ದಾವಣಗೆರೆ ವಿಭಾಗಕ್ಕೆ ಬೇಕಾಗಿದ್ದಾರೆ.
* ಮಾರ್ಕೆಟಿಂಗ್ ಎಕ್ಸಿಕ್ಯೂಟಿವ್ಸ್ ಮ್ಯಾನೇಜರ್ಸ್
* ಡಾಟಾ ಎಂಟ್ರಿ ಎಕ್ಸಿಕ್ಯೂಟಿವ್ಸ್
* ಟೆಲಿಕಾಲಿಂಗ್ ಎಕ್ಸಿಕ್ಯೂಟಿವ್ಸ್.
76767 62286, 76767 62216

**ಮನೆ ಬಾಡಿಗೆಗಿದೆ**
ವಿದ್ಯಾನಗರ, ನೂತನ ಕಾಲೇಜು ಮುಖ್ಯರಸ್ತೆಯಲ್ಲಿ ಮೆಸ್/ಪಿ ಜಿ/ಹಾಸ್ಟೆಲ್ ನಡೆಸಲು ಅನುಕೂಲವಾಗುವ 3 ಬೆಡ್ ರೂಮ್, ವರಾಂಡ, ಹಾಲ್, ಡೈನಿಂಗ್ ಹಾಲ್, ಕಿಚನ್, ಬಾತ್‌ರೂಮ್ ಹಾಗೂ ಹಿತ್ತಲಿನಲ್ಲಿ ಅಗಲವಾದ ಶೆಡ್ ಮತ್ತು ಅಪಾರ ಸ್ಥಳವುಳ್ಳ ವಿಶಾಲವಾದ ಮನೆ ಬಾಡಿಗೆಗೆ ಇದೆ.
90088 20824

**ಮನೆಗಳು ಬಾಡಿಗೆಗೆ ಇವೆ**
ದಾವಣಗೆರೆ ಜಯನಗರ ಬಿ ಬ್ಲಾಕ್‌ನಲ್ಲಿ ಬೋರ್‌ನೀರಿನ ಸೌಲಭ್ಯವಿರುವ ಸಿಂಗಲ್ ಬೆಡ್ ರೂಂ ಮನೆಗಳು ಬಾಡಿಗೆಗೆ ಇವೆ.
98440 21743
99646 95557

**FOR RENT**
RCC Godown 11x50
Opp : Aruna Talkies, P.B.Road
**FOR SALE**
30x100, K.R. Road
98440 73939

**ಮನೆ ಬಾಡಿಗೆಗೆ ಇದೆ**
# 641/15, ಉತ್ತಮ ಲೇಔಟ್, ಆವರಗೆರೆ, ದಾವಣಗೆರೆ ಮೊದಲನೇ ಮಹಡಿ ಹಾಗೂ ಎರಡನೇ ಮಹಡಿಯಲ್ಲಿ ಸಿಂಗಲ್ ಬೆಡ್ ರೂಂ ಮನೆ ಬಾಡಿಗೆಗೆ ಇದೆ. ಎಲ್ಲಾ ಸೌಕರ್ಯವಿದೆ.
99644 90568, 70196 32334

**ನೀರಿನ ಲೀಕೇಜ್ (ವಾಟರ್ ಪ್ರೂಫಿಂಗ್)**
ನಿಮ್ಮ ಮನೆ, ಮತ್ತಿತರೆ ಕಟ್ಟಡಗಳ ಬಾತ್‌ರೂಂ, ಟೆರೇಸ್, ಬಾಲ್ಕನಿ, ಸಂಪು, ಗೋಡೆ ಬಿರುಕು, ನೀರಿನ ಟ್ಯಾಂಕ್ ಎಲ್ಲಾ ರೀತಿಯ ನೀರಿನ ಲೀಕೇಜ್‌ಗಳಿಗೆ ಸಂಪರ್ಕಿಸಿರಿ :
80955 09025
ಕೆಲಸ 100% ಗ್ಯಾರಂಟಿ.

**ಸೈಟು ಮಾರಾಟಕ್ಕಿದೆ**
ಬೂದಾಳ್ ರಸ್ತೆಯ B.N.-2 ಲೇ ಔಟ್‌ನ ಪಕ್ಕದ 60 ಅಡಿ ರಸ್ತೆಯುಳ್ಳ 30x40 ಅಳತೆಯ ಉತ್ತರ ದಿಕ್ಕಿನ ಸೈಟು ಮಾರಾಟಕ್ಕಿದೆ.
91642 20822

**ವಾಸ್ತು ಮನೆ, ಶಾಪ್ ಬಾಡಿಗೆ**
ಶಾಪ್ ಮತ್ತು 3 ಬೆಡ್ ರೂಂ ಅಟ್ಯಾಚ್ ಬಾತ್‌ರೂಂ, ಹಾಲ್, ಅಡುಗೆ ಮನೆ ಸಕಲ ನೀರಿನ ಸೌಕರ್ಯವುಳ್ಳ ಮನೆ 408 ಪಿ.ಜೆ ಬಡಾವಣೆ 8ನೇ ಮುಖ್ಯ, 8ನೇ ಅಡ್ಡ ರಸ್ತೆ ಮಹಾತ್ಮಾಗಾಂಧಿ ಲ್ಯಾಬ್ ಹತ್ತಿರ
80888 61845, 95386 41980

**WANTED**
PUC., B.Com., M.Com., MA English, B E. M tech . BCA. BSc.PCM /nursing MSc (P.C.M.B). Diploma & B.E., ದಾವಣಗೆರೆ.
90195 80600

**ಮನೆ ಬಾಡಿಗೆಗೆ ಇದೆ**
ಸಿದ್ದವೀರಪ್ಪ ಬಡಾವಣೆ BIET ಕಾಲೇಜ್ ರೋಡ್ 12ನೇ ಕ್ರಾಸ್, 3ನೇ ಮೇನ್, 1ನೇ ಮಹಡಿಯಲ್ಲಿ 1ಬೆಡ್ ರೂಂ ಮನೆ (1BHK) ಖಾಲಿ ಇದೆ. ಪೂರ್ವ ದಿಕ್ಕಿನ ಮನೆ ಬೋರ್‌ವೆಲ್ ನೀರಿನ ಸೌಲಭ್ಯ ಇರುತ್ತದೆ. ಬೇಕಾಗಿರುವವರು ವಿಚಾರಿಸಿ
94489 23704, 94807 78709

**ಮನೆ ಬಾಡಿಗೆಗೆ**
ವಾಸ್ತು ಪ್ರಕಾರದ, ಪೂರ್ವ ಮುಖದ, ಹೌಸಿಂಗ್ ಬೋರ್ಡ್ ಕಾಲೋನಿ, ಮೆಡಿಕಲ್ ಹಾಸ್ಟೇಲ್ ಪಕ್ಕ, Extended MCC 'B' Block, ಕಾರ್ಪೋರೆಷನ್ ನೀರು, ಬೋರ್, ಕಾರ್ ಪಾರ್ಕಿಂಗ್, ಸ್ವತಂತ್ರವಾದ 3 BHK ಮನೆ (ಸಸ್ಯಹಾರಿಗಳಿಗೆ ಮಾತ್ರ)
63015 58346

**WANTED**
1. Recepionist
2. Staff Nurses
3. Lab Technician
SHILPA DIAGNOSTICS
MCC B Block Near Swimming Pool, Davangere.
98440 65638

**ಸೈಟುಗಳು ಮಾರಾಟಕ್ಕಿವೆ**
ಬಾಡ ಕ್ರಾಸ್ ಹತ್ತಿರ ಅಪೂರ್ವ ರೆಸಾರ್ಟ್ ಎದುರುಗಡೆ 30x40 ಉತ್ತರ ಸೈಟುಗಳು ಮಾರಾಟಕ್ಕಿವೆ. ಸಂಪರ್ಕಿಸಿ:
99165-11447
98865 22052

**ONLY LINGAYATH MARRIAGE LINKS**
(Doctors / Engineers New / Second)
Parameshwar Diana Shimoga
84315 54368, 98861 70600
Through Whattsapp

**ಮನೆ ಬಾಡಿಗೆಗೆ**
ಹರಿಹರ ದೇವಾಲಯದ ಆವರಣದಲ್ಲಿ 1 ಬೆಡ್ ರೂಂ ಮನೆ ಬಾಡಿಗೆಗೆ, ಸಸ್ಯಹಾರಿಗಳಿಗೆ ಮಾತ್ರ, ರೂ. 4000/ ಬಾಡಿಗೆ ಅಡ್ವಾನ್ಸ್ : ರೂ 25,000. 24 ಗಂಟೆಗಳ ನೀರು ಪ್ರಶಾಂತ ವಾತಾವರಣ
94814 56017, 94819 01103
Girija Hegde

**ಕಂಪ್ಯೂಟರ್ ಆಪರೇಟರ್ ಬೇಕಾಗಿದ್ದಾರೆ**
KSS SOLUTION CSC
ಸಂಬಳ: 4000 To 6000. ವಯೋಮಿತಿ: 20-25 ವರ್ಷದ ಮಹಿಳೆಯರು ಬೇಕಾಗಿದ್ದಾರೆ. ಎಸ್‌ಎಸ್ ಲೇಔಟ್ 'ಬಿ' ಬ್ಲಾಕ್, ದಾವಣಗೆರೆ
72045 42910
(Time:10am to 6pm)

**We Provide Professional Training on Computer Programming Languages C, C++, Java,Python Etc. For further Details**
Contact:
ZEN COMPUTERS
99641 45161

**ಬೇಕಾಗಿದ್ದಾರೆ**
ರೆಡಿಮೇಡ್ ಗಾರ್ಮೆಂಟ್ಸ್ ಶಾಪ್‌ನಲ್ಲಿ ಅನುಭವವಿರುವ ಸೇಲ್ಸ್ ಗರ್ಲ್ಸ್ ಬೇಕಾಗಿದ್ದಾರೆ.
ವೀರ್ ಕ್ರಿಯೇಷನ್ಸ್
ವಿಜಯಲಕ್ಷ್ಮೀ ರೋಡ್, ಗುಪ್ತ ಗೋಲ್ಡ್‌ಪ್ಯಾಲೇಸ್ ಎದುರು, ದಾವಣಗೆರೆ.
98447 36261, 96630 08996

**ಸೈಟು ಮಾರಾಟಕ್ಕಿದೆ**
ಸುಬ್ರಮಣ್ಯ ನಗರ ಹೈಟೆಕ್ ಆಸ್ಪತ್ರೆ ಹತ್ತಿರ, ಪುನೀತ್ ಬಡಾವಣೆ ಪಶ್ಚಿಮ ಮುಖದ ಅಪ್ರೂವ್ಡ್ ಎರಡು ಸೈಟ್‌ಗಳು ಮಾರಾಟಕ್ಕಿವೆ.
98443 04848

**ಪ್ರವೇಶ ಪ್ರಕಟಣೆ**
ಡಿಪ್ಲೋಮಾ ಇನ್ ಪೇಷೆಂಟ್ ಕೇರ್ ನರ್ಸಿಂಗ್ - 2ವರ್ಷ
ವಿದ್ಯಾರ್ಹತೆ: SSLC/PUC/ITI ಪಾಸ್/ಫೇಲ್ ಖಾಸಗಿ ಆಸ್ಪತ್ರೆ, ನರ್ಸಿಂಗ್ ಹೋಂಗಳಲ್ಲಿ ನರ್ಸ್‌ಗಳಾಗಿ ಕೆಲಸ ಮಾಡಬಹುದು. ಯಶಸ್ವಿ 15ನೇ ವರ್ಷದಲ್ಲಿ
ಮಾನಸ ಕಮ್ಯೂನಿಟಿ ಕಾಲೇಜ್ (ರಿ)
LK ಕಾಂಪ್ಲೆಕ್ಸ್, 1ನೇ ಮಹಡಿ, ಅಶೋಕ ರಸ್ತೆ, 1ನೇ ಕ್ರಾಸ್, ಆಹಾರ್ 2000 ಹಿಂಭಾಗ ರಸ್ತೆ, ದಾವಣಗೆರೆ-577002.
97402 58276

**ಹೊಸ ಮನೆ ಮಾರಾಟಕ್ಕಿದೆ**
S.S. Layout 'B' Block, 3rd Main ಅಳತೆ: 20x65 ಪಶ್ಚಿಮ ದಿಕ್ಕು ಗ್ರೌಂಡ್ ಫ್ಲೋರ್, 1st ಫ್ಲೋರ್, 2nd ಫ್ಲೋರ್
90191 19905

**ಬೇಕಾಗಿದ್ದಾರೆ**
ಕಂಪ್ಯೂಟರ್ / ಸಿ.ಸಿ.ಟಿವಿ ಕ್ಯಾಮೆರಾ ಸರ್ವೀಸ್ ಮಾಡಲು ಅನುಭವವುಳ್ಳ ಸರ್ವೀಸ್ ಇಂಜಿನಿಯರ್ ಹಾಗೂ ಆಫೀಸ್ ಬಾಯ್ ಬೇಕಾಗಿದ್ದಾರೆ. ಸಂಪರ್ಕಿಸಿ:
ಶ್ರೀ ಬಾಲಾಜಿ ಕಂಪ್ಯೂಟರ್ಸ್
ಮಹಿಳಾ ಸಮಾಜ ಕಾಂಪ್ಲೆಕ್ಸ್, ದಾವಣಗೆರೆ.
86604 51318, 95382 36923

**ಕಂಪ್ಲೀಟ್ ವಾಟರ್ ಪ್ರೂಫಿಂಗ್ ಸಲ್ಯೂಷನ್**
ನಿಮ್ಮ ಮನೆಯ ಮೇಲ್ಛಾವಣಿ ಮತ್ತು ಹೊರ ಗೋಡೆಗಳನ್ನು ವಾಟರ್ ಪ್ರೂಫಿಂಗ್ ಮಾಡಿಕೊಡಲಾಗುವುದು. 5 ವರ್ಷದ ವಾರಂಟಿಯೊಂದಿಗೆ ಸಂಪರ್ಕಿಸಿ
63604 66916, 80734-56426

**FOR RENT**
Commercial & Official Purpose, 4th main,Ram & Co Circle, P.J. Extn., Davangere - 02. East Facing Ground Floor 440 Sqft + Wardrobe facility first floor 440 sq.ft. 2 room Passage + wash room facility
95917 26098, 86604 71427

**ಮಾಂತ್ರಿಕ ಮೋಡಿ ಬೆಟ್ಟಪ್ಪ**
ನಂ.1 ವಶೀಕರಣ ಸ್ಪೆಷಲಿಸ್ಟ್
ಸ್ತ್ರೀ-ಪುರುಷ ವಶೀಕರಣ, ಗುಪ್ತ ಲೈಂಗಿಕ ದಾಂಪತ್ಯ ಸಮಸ್ಯೆ, ಇಷ್ಟಪಟ್ಟವರು ನಿಮ್ಮಂತಾಗಲು 100% ಶೀಘ್ರದಲ್ಲೇ ಪರಿಹಾರ ಮಾಡುತ್ತಾರೆ. ಫೋನ್ ಮೂಲಕ ಸಂಪರ್ಕಿಸಿ: ಗಾಂಧಿ ಸರ್ಕಲ್, ದಾವಣಗೆರೆ.
89716 99826

ADMISSION OPEN 2022
**MBBS**
India & Abroad - NEET Required
MCC Screening test must be practice in India
Pharma. D, BSc. Nursing
P.B. BSc (N) D. Pharma
BPT, B.Pharm
B.Sc., MLT, Cardiac, Perfusion, Agri, Radiology
Conditions Apply
99160 67627, 80501 08120

**KSS SOLUTION CSC**
Computer Operator Bekagidare. 4 to 6 thousand Salary. 20-25 years. Female Candidate Bekagidare.
72045 42910
10 am to 6 pm time, SS Layout 'B' Block, Davangere.

**TO LET**
Commercial Place, well Suitable for Clinic or Poly Clinic, cum Medical store or other Office's Purpose Place: Behind Mothi Veerappa School, (Near Chigateri Hospital)
99001 01260, 83107 94347

ವಾಹ್ ಕಾಫಿ !!
ರಿಚ್ ಕಾಫಿ !!
SRK COFFEE
ಶ್ರೀ ರಾಮಕೃಷ್ಣ ಕಾಫಿ ಕಂಪನಿ
ಮಂಡಿಪೇಟೆ, ದಾವಣಗೆರೆ.
ಮೊಬೈಲ್ : 94487 27084

ಶ್ರೀ ಗುರು ಮರುಳಸಿದ್ದೇಶ್ವರ ಸ್ವಾಮಿ ಸೇವಾ ಸಂಸ್ಥೆ (ರಿ.)
**ಹಿಂದೂ ವಧು-ವರರ ಮಾಹಿತಿ ಕೇಂದ್ರ**
www.hindusmatrimony.com
ನಮ್ಮಲ್ಲಿ ಎಲ್ಲಾ ತರಹದ ಹಿಂದೂ ವಧು-ವರರಿಗಾಗಿ ಸಂಪರ್ಕಿಸಿ.
ವಿಳಾಸ: ಬಾಣಾಪುರಮಠ ಹಾಸ್ಪಿಟಲ್ ಎದುರು, 8ನೇ ಮೇನ್, ಪಿ.ಜೆ. ಬಡಾವಣೆ, ದಾವಣಗೆರೆ-2.
94481-59303, 94834 63783

# ಪ್ರಜೆಗಳೇ ಪ್ರಭುಗಳಾಗಬೇಕು ಎನ್ನುವ ಆಶಯದಲ್ಲಿ ಪತ್ರಿಕಾ ರಂಗ 3ನೇ ಅಂಗವಾಗಲು ಒಪ್ಪದ ಅಂಬೇಡ್ಕರ್



ದಾವಣಗೆರೆ,ಆ.27- ರಾಜ್ಯಮಟ್ಟದ ಪತ್ರಿಕೆ ಗಳ ಜಿಲ್ಲಾ ಆವೃತ್ತಿಗಳ ಕಾರ್ಪೊರೇಟ್ ವ್ಯವಸ್ಥೆ ಯಿಂದಾಗಿ ಸ್ಥಳೀಯ ಪತ್ರಿಕೆಗಳು ಲಾಭದಾಯಕ ವಾಗಿ ನಡೆಯುತ್ತಿಲ್ಲ ಎಂದು ಶಿಕಾರಿಪುರದ ಸರ್ವಜ್ಞ ಪತ್ರಿಕೆ ಸಂಪಾದಕ ಎಸ್.ಬಿ. ಮಠದ್ ವ್ಯಾಕುಲತೆ ವ್ಯಕ್ತಪಡಿಸಿದರು.

ನಗರದ ವಿರಕ್ತ ಮಠದಲ್ಲಿ ಇಂದು ಜರುಗಿದ 'ಶಿಡ್ಲು' ಮತ್ತು 'ಕೌರವ' ದಿನ ಪತ್ರಿಕೆಗಳ ದಾವಣಗೆರೆ ಆವೃತ್ತಿ ಬಿಡುಗಡೆ ಸಮಾರಂಭದ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ಪತ್ರಿಕೆಗಳು ವಾಸ್ತವಿಕವಾಗಿ ಪ್ರಜೆಗಳ ಆಪ್ತ ಕಾರ್ಯದರ್ಶಿ ಇದ್ದ ಹಾಗೆ, ಪತ್ರಿಕಾ ರಂಗ ನಾಲ್ಕನೇ ಅಂಗವೆಂದು ಕರೆಸಿಕೊಂಡರೂ, ಅಮೆರಿಕಾದಲ್ಲಿ ಪತ್ರಕರ್ತರಿಗೆ ಇರುವಂತಹ ವಿಶೇಷ ಸೌಲಭ್ಯವಾಗಲೀ, ರಕ್ಷಣೆಯಾಗಲೀ ಇಲ್ಲಿನ ಪತ್ರಕರ್ತರಿಗೆ ಇಲ್ಲವಾಗಿದೆ. ಪ್ರಜೆಗಿರುವ ಹಕ್ಕು ಬೇರೆ, ಯಾರಿಗೂ ಇರಬಾರದೆಂಬ ಕಾರಣಕ್ಕೆ ಸಂವಿಧಾನ ಕರ್ತ ಡಾ. ಬಿ.ಆರ್. ಅಂಬೇಡ್ಕರ್ ಅವರೇ ಪತ್ರಿಕಾ ರಂಗವನ್ನು ಮೂರನೇ ಅಂಗವೆಂದು ಒಪ್ಪಿಕೊಳ್ಳಲಿಲ್ಲ. ಅದಕ್ಕೆ ಕಾರಣ ಪ್ರಜೆಗಳೇ ಪ್ರಭುಗಳಾಗಬೇಕು. ಅವರಿಗಿಂತ ದೊಡ್ಡವರು ಯಾರೂ ಇರಬಾರದೆಂಬುದೇ ಅವರ ಆಶಯವಾಗಿತ್ತು ಎಂದರು.

ಪತ್ರಿಕೆಗಳು ಯಶಸ್ವಿಯಾಗಿ ನಡೆಯಬೇಕಾದರೆ ಓದುಗರು ಬಹಳ ಮುಖ್ಯ, ಕಳೆದ 35 ವರ್ಷಗಳಿಂದ ವೈಯಕ್ತಿಕ ಹಿತ ಮರೆತು ಪತ್ರಿಕಾ ಧರ್ಮ ಪಾಲಿಸುತ್ತಾ, ಜನರ ಪರವಾಗಿ ಕೆಲಸ ಮಾಡುತ್ತಾ, ಬಂದಿರುವ ಮಹಾನುಭವಿಮಠ ಸಹೋದರರ ಶಿಡ್ಲು ಮತ್ತು ಕೌರವ ಪತ್ರಿಕೆಗಳನ್ನು ಕೊಂಡು ಓದಿ ಸಹಕರಿಸುವಂತೆ ಮಠದ್ ಮನವಿ ಮಾಡಿದರು.

ಮುಖ್ಯ ಅತಿಥಿಗಳಾಗಿ ಆಗಮಿಸಿದ್ದ ಜಿಲ್ಲಾ ವಕೀಲರ ಸಂಘದ ಅಧ್ಯಕ್ಷ ಡಿ.ಪಿ. ಬಸವರಾಜ್ ಮಾತನಾಡಿ, ವಿದ್ಯುನ್ಮಾನ ಮಾಧ್ಯಮಕ್ಕಿಂತ ಮುದ್ರಣ ಮಾಧ್ಯಮ ವಸ್ತು ನಿಷ್ಠ ವರದಿಗಳನ್ನು ನೀಡುವಲ್ಲಿ ಶ್ರಮಿಸುತ್ತಿದ್ದು, ಪತ್ರಿಕಾ ವರದಿಗಳು ಜೀವಂತ ದಾಖಲೆ ಕೂಡಾ ಆಗಿವೆ ಎಂದು ಉದಾಹರಣೆಗಳೊದಿಗೆ ತಿಳಿಸಿದರು. ಮುದ್ರಣ ಮಾಧ್ಯಮ ಉತ್ತಮ ಕೆಲಸ ನಿರ್ವಹಿಸುತ್ತಿದೆ ಎಂದು ಹೇಳಿದ ಅವರು, ಸ್ವಾತಂತ್ರ್ಯವು ಸ್ವೇಚ್ಛಾಚಾರವಲ್ಲ, ಅಭಿವ್ಯಕ್ತಿ ಸ್ವಾತಂತ್ರ್ಯದ ಇತಿ ಮಿತಿ ಅರಿತು ನಡೆಯಬೇಕಾಗಿದೆ ಎಂದು ತಿಳಿಸಿದರು.

ಮತ್ತೋರ್ವ ಮುಖ್ಯ ಅತಿಥಿ ಜಿಲ್ಲಾ ಕಾರ್ಯನಿರತ ಪತ್ರಕರ್ತರ ಸಂಘದ ಅಧ್ಯಕ್ಷ ಇ.ಎಂ. ಮಂಜುನಾಥ ಮಾತನಾಡಿ, ಜನಸಂಖ್ಯೆ ಹೆಚ್ಚಿದಂತೆ ಮತ್ತು ನಗರ ಬೆಳೆದಂತೆ ಓದುಗರ ಸಂಖ್ಯೆಯೂ ಹೆಚ್ಚಾಗುತ್ತಿಲ್ಲ. ಕೇರಳ ಮತ್ತು ಆಂಧ್ರ ರಾಜ್ಯಗಳಲ್ಲಿ ಅಲ್ಲಿನ ಪ್ರತಿಯೊಬ್ಬರೂ ಪತ್ರಿಕೆ ಕೊಂಡು ಓದುತ್ತಾರೆ. ಆದರೆ ಇಲ್ಲಿ ಒಬ್ಬರು ಪತ್ರಿಕೆ ಕೊಂಡರೆ ಅದನ್ನು ನಾಲ್ಕಾರು ಜನ ಓದುವಂತಹ ಪರಿಸ್ಥಿತಿ ಇದೆ. ಕೊಂಡು ಓದಿದಾಗ ಮಾತ್ರ ಪತ್ರಿಕೆಗಳ ಬೆಳವಣಿಗೆ ಸಾಧ್ಯ. ಈ ದಿಸೆಯಲ್ಲಿ ದಾವಣಗೆರೆ ಆವೃತ್ತಿ ಆರಂಭಿಸಿರುವ ಶಿಡ್ಲು ಮತ್ತು ಕೌರವ ಪತ್ರಿಕೆಗಳ ಪ್ರಸಾರ ಹೆಚ್ಚಾಗಲಿ ಎಂದು ಹಾರೈಸಿದರು.

ಪ್ರಾಸ್ತಾವಿಕವಾಗಿ ಮಾತನಾಡಿದ ಶಿಡ್ಲು ಪತ್ರಿಕೆ ಸಹ ಸಂಪಾದಕ ಎಸ್.ಜಿ. ಮಹಾನುಭಾವಿಮಠ, ಹಿರಿಯರ ಆಶಯದಂತೆ ಪತ್ರಿಕಾ ಧರ್ಮಕ್ಕೆ ಚ್ಯುತಿ ಬಾರದ ಹಾಗೆ ಕಷ್ಟಕಾಲದಲ್ಲಿಯೂ ಪತ್ರಿಕೆಯನ್ನು ನಿರಂತರವಾಗಿ ನಡೆಸಿಕೊಂಡು ಬಂದಿದ್ದೇವೆ. ದಾವಣಗೆರೆ ಜನತೆ ತಮಗೆ ಸಹಕಾರ ನೀಡಿ, ಪತ್ರಿಕೆಯ ಬೆಳವಣಿಗೆಗೆ ಸಹಕರಿಸುವಂತೆ ಕೇಳಿಕೊಂಡರು.

ಮುಖ್ಯ ಅತಿಥಿಗಳಾಗಿ ಸಂಯುಕ್ತ ಕರ್ನಾಟಕ ಪತ್ರಿಕೆ ಸ್ಥಾನಿಕ ಸಂಪಾದಕ ಮಂಜುನಾಥ ಗೌರಕ್ಕಳವರ, ಜಿಲ್ಲಾ ಕಾರ್ಯನಿರತ ಪತ್ರಕರ್ತರ ಸಂಘದ ಉಪಾಧ್ಯಕ್ಷ ಆರ್.ಎಸ್.ತಿಪ್ಪೇಸ್ವಾಮಿ ದುಗ್ಗತ್ತಿಮಠ, ಅಹಿಂದ ಪ್ರಜಾಶಕ್ತಿ ಸಂಸ್ಥಾಪನಾ ಅಧ್ಯಕ್ಷ ಜಿ.ಗೋವಿಂದ ರಾಜು, ನಿಟುವಳ್ಳಿ ಕೆ.ಚಂದ್ರಪ್ಪ, ಶರಭೇಶ್ವರ ಫುಡ್ಸ್ ವ್ಯವಸ್ಥಾಪಕ ನಿರ್ದೇಶಕ ಹೆಚ್.ಬಿ. ಅಭಿಷೇಕ್, ಜನತಾವಾಣಿ ಹಿರಿಯ ವರದಿಗಾರ ಉತ್ತಂಗಿ ಕೊಟ್ರೇಶ್ ಆಗಮಿಸಿದ್ದರು.

ಶಿಡ್ಲು ಪತ್ರಿಕೆ ಸಂಪಾದಕ ಆರ್. ಜಿ.ಮಹಾನುಬಾವಿಮಠ ಅವರು ಅತಿಥಿಗಳನ್ನು ಸನ್ಮಾನಿಸಿ ಗೌರವಿಸಿದರು. ಉಪ ಸಂಪಾದಕ ಕೆ.ಜಿ. ಮಹಾನುಭಾವಿ ಮಠ ಕಾರ್ಯಕ್ರಮ ನಿರೂಪಿಸಿ, ವಂದಿಸಿದರು. ಜಿಲ್ಲೆಯ ಶಿಡ್ಲು ವರದಿಗಾರ ಟಿ.ಜಿ.ಶಿವಮೂರ್ತಿ ಸ್ವಾಗತಿಸಿದರು.

## ದಾವಣಗೆರೆ ವೈದ್ಯರು ಕಳಪೆಯೇ ?

ಮಣಿಪಾಲ ಮತ್ತು ಎನ್ನಪೋಯಾ ಆಸ್ಪತ್ರೆಗಳಿಗೆ ನಿತ್ಯವೂ ಹಲವಾರು ಬಸ್ಸುಗಳು ದಾವಣಗೆರೆಯಿಂದ ಸಂಚರಿಸುತ್ತವೆ. ಜಿಲ್ಲಾ ಕೇಂದ್ರ, ವ್ಯಾಪಾರ, ವಿದ್ಯಾ ಕೇಂದ್ರವಾಗಿ ಆಕರ್ಷಣೆಯ ಸ್ಥಳವಾಗಿದ್ದರೂ ಅಭಿವೃದ್ದಿ ಕಾಣುತ್ತಿಲ್ಲ. ಇಲ್ಲಿಂದ ಸಣ್ಣ ಕಾಯಿಲೆಗೂ ಮಣಿಪಾಲ ಆಸ್ಪತ್ರೆಗೆ ಜನ ಹೋಗುತ್ತಾರೆಂದರೆ ದಾವಣಗೆರೆ ವೈದ್ಯರು ಕಳಪೆಯೇ ? ಇಲ್ಲಿನ ಶಿಕ್ಷಣ ವ್ಯವಸ್ಥೆ ಕಳಪೆಯೇ ?. ಇದು ದಾವಣಗೆರೆಗೆ ಆದ ಅವಮಾನವಲ್ಲವೇ ? ಇಂತಹ ವಿಚಾರಗಳ ಬಗ್ಗೆ ಪತ್ರಕರ್ತರು ಗಮನಹರಿಸಬೇಕಾಗಿದೆ ಎಂದರು.

**- ಎಸ್.ಬಿ. ಮಠದ್**
ಸಂಪಾದಕರು, 'ಸರ್ವಜ್ಞ' ಶಿಕಾರಿಪುರ

## ಗೌತಮ್ ಎಜುಕೇಷನಲ್ ಚಾಲನೆ



ದಾವಣಗೆರೆ, ಆ. 27- ನಗರದ ಎಸ್.ಎಸ್. ಬಡಾವಣೆಯಲ್ಲಿರುವ ಶ್ರೀ ಗೌತಮ್ ಎಜುಕೇಷನಲ್ ಟ್ರಸ್ಟ್‌ಗೆ ಶಾಸಕ ಡಾ. ಶಾಮನೂರು ಶಿವಶಂಕರಪ್ಪ ಚಾಲನೆ ನೀಡಿದರು.

ಈ ಸಂದರ್ಭದಲ್ಲಿ ದಾವಣಗೆರೆ-ಹರಿಹರ ನಗರಾಭಿವೃದ್ಧಿ ಪ್ರಾಧಿಕಾರದ ಮಾಜಿ ಅಧ್ಯಕ್ಷ ದೇವರಮನಿ ಶಿವಕುಮಾರ್, ಮಹಾನಗರ ಪಾಲಿಕೆ ಸದಸ್ಯ ಎ. ನಾಗರಾಜ್, ಮಾಜಿ ಸದಸ್ಯ ದಿನೇಶ್ ಕೆ.ಶೆಟ್ಟಿ, ಪಾಲಿಕೆ ಸದಸ್ಯೆ ಶಿಲ್ಪಾ ಜಯಪ್ರಕಾಶ್, ಟ್ರಸ್ಟ್ ಅಧ್ಯಕ್ಷ ವಿಜಯ್ ಶಂಕರ್‌ಲಾಲ್, ಕಾರ್ಯದರ್ಶಿ ವರ್ಷಾ ವಿ. ಚವ್ಹಾಣ್, ಜೈನ್ ಟ್ರಿನಿಟಿ ಪಿಯು ಕಾಲೇಜ್ ಹಾಗೂ ಜೈನ್ ಟ್ರಿನಿಟಿ ಬ್ಯುಸಿನೆಸ್ ಸ್ಕೂಲ್ ನಿರ್ದೇಶಕರಾದ ಮೋಕ್ಷಾ ವಿ. ಚವ್ಹಾಣ್, ಪ್ರಾಂಶುಪಾಲರಾದ ಸಿ. ಸುನೀಲ್ ಕುಮಾರ್, ಎ.ಆರ್. ಸಲೀಂ ಮಲ್ಲಿಕ್ ಹಾಗೂ ಸಿಬ್ಬಂದಿ ವರ್ಗದವರು ಹಾಜರಿದ್ದರು.

## ಜಿಲ್ಲಾ ಮಟ್ಟದ ಬಾಲ್ ಬ್ಯಾಡ್ ಮಿಂಟನ್ ಕ್ರೀಡಾಕೂಟಕ್ಕೆ ಆಯ್ಕೆ



ದಾವಣಗೆರೆ, ಆ.27- ಸಾರ್ವಜನಿಕ ಶಿಕ್ಷಣ ಇಲಾಖೆ ಇವರ ಆಶ್ರಯದಲ್ಲಿ ನಡೆದ ತಾಲ್ಲೂಕು ಮಟ್ಟದ ಕ್ರೀಡಾಕೂಟದಲ್ಲಿ ಹೊನ್ನೂರಿನ ಶ್ರೀ ಪಂಪಾರೂಢ ಸ್ವಾಮಿ ಗ್ರಾಮಾಂತರ ಪ್ರೌಢಶಾಲೆಯ ಬಾಲಕರು, ಬಾಲಕಿಯರು 'ಬಾಲ್ ಬ್ಯಾಡ್‌ಮಿಂಟನ್' ಪಂದ್ಯಾವಳಿಯಲ್ಲಿ ಗೆದ್ದು ಜಿಲ್ಲಾ ಮಟ್ಟಕ್ಕೆ ಆಯ್ಕೆಯಾಗಿದ್ದಾರೆ.

ಈ ವಿದ್ಯಾರ್ಥಿಗಳಿಗೆ ಶಾಲಾ ಆಡಳಿತ ಮಂಡಳಿ, ಮುಖ್ಯ ಶಿಕ್ಷಕರು, ಸಹಶಿಕ್ಷಕರು ಹಾಗೂ ಊರಿನ ಗ್ರಾಮಸ್ಥರು ಶುಭ ಕೋರಿದ್ದಾರೆ.

## ಯೋಗ ಕೇಂದ್ರದಲ್ಲಿ ರಕ್ಷಾ ಬಂಧನ



ದಾವಣಗೆರೆ, ಆ. 27 - ಇಲ್ಲಿನ ಮಹಾರಾಜಪೇಟೆಯಲ್ಲಿರುವ ವಿಠಲ ರುಕುಮಾಯಿ ಯೋಗ ಕೇಂದ್ರದಲ್ಲಿ ರಕ್ಷಾ ಬಂಧನ ಕಾರ್ಯಕ್ರಮ ನಡೆಯಿತು. ಯೋಗಪಟುಗಳಿಗೆ ಟಿ-ಶರ್ಟ್ ವಿತರಿಸಿದ ದಾನಿ ಸಾಕ್ರೆ ಅವರನ್ನು ಸನ್ಮಾನಿಸಲಾಯಿತು. ಕಾರ್ಯಕ್ರಮದಲ್ಲಿ ಯೋಗ ಗುರುಗಳಾದ ವಿಶ್ವನಾಥ್, ಪ್ರಭಾಕರ್, ತುಕಾರಾಂ, ರವಿ, ವೀರೇಶ್ ಮತ್ತಿತರರು ಭಾಗವಹಿಸಿದ್ದರು.

## ನಗರದಲ್ಲಿ ಇಂದು 'ದಿವ್ಯಪಥ ಲೋಕಹಿತ' ಪ್ರವಚನ ಮಂಗಲ ಸಮಾರಂಭ

ಬಸವ ಕೇಂದ್ರ, ಶ್ರೀ ಮುರುಘರಾಜೇಂದ್ರ ವಿರಕ್ತಮಠ, ಶ್ರೀ ಜಗದ್ಗುರು ಮುರುಘರಾಜೇಂದ್ರ ಶಿವಯೋಗಾಶ್ರಮ ಟ್ರಸ್ಟ್ ವತಿಯಿಂದ 112 ನೇ ವರ್ಷದ ಶ್ರಾವಣ ಮಾಸ ಕಾರ್ಯಕ್ರಮದಲ್ಲಿ ಡಾ. ಶಿವಮೂರ್ತಿ ಮುರುಘಾ ಶರಣರು ರಚಿಸಿರುವ 'ದಿವ್ಯಪಥ ಲೋಕಹಿತ' ಪ್ರವಚನ ಮಂಗಲ ಕಾರ್ಯಕ್ರಮ ಇಂದು ಸಂಜೆ 6.30 ಕ್ಕೆ ವಿರಕ್ತಮಠದಲ್ಲಿ ನಡೆಯಲಿದೆ. ಶ್ರೀ ಶಿವಮೂರ್ತಿ ಮುರುಘಾ ಶರಣರು ಅಧ್ಯಕ್ಷತೆ ವಹಿಸುವರು. ಶ್ರೀ ಬಸವಪ್ರಭು ಸ್ವಾಮೀಜಿ ಸಮ್ಮುಖ ವಹಿಸಲಿದ್ದಾರೆ.

ಬ್ಯಾಡಗಿ ತಾಲ್ಲೂಕು ಕಲ್ಲೇದೇವರ ಕುಮಾರ ಶಾಸ್ತ್ರಿಗಳು ಪ್ರವಚನ ನುಡಿಗಳನ್ನಾಡುವರು. ಮುಖ್ಯ ಅತಿಥಿಗಳಾಗಿ ಕೆ.ಬಿ. ಶಂಕರನಾರಾಯಣ, ಜಿ.ಎಂ. ಲಿಂಗರಾಜ್, ಬಿ. ಚಿದಾನಂದಪ್ಪ, ಗೋವಿಂದ ಜೋಷಿ ಆಗಮಿಸಲಿದ್ದಾರೆ. ಬಸವ ಕಲಾಲೋಕದ ಅರುಣ, ವಾಗೀಶ ವಚನ ಗಾಯನ ನಡೆಸಿಕೊಡಲಿದ್ದಾರೆ.

## ನಗರದಲ್ಲಿ ಇಂದು ಓಶೋ ಶಿಬಿರ

ಓಶೋ ಸನ್ನಿಧಿ ಇನ್‌ಸೈಟ್ ಫೌಂಡೇಷನ್ ಆಶ್ರಯದಲ್ಲಿ ಒಂದು ದಿನದ ಧ್ಯಾನ ಶಿಬಿರವು ತರಳಬಾಳು ಶಾಲೆ ಎದುರಿನ ದೃಶ್ಯಕಲಾ ಮಹಾವಿದ್ಯಾಲಯ ದಲ್ಲಿ ಇಂದು ಬೆಳಿಗ್ಗೆ 7 ರಿಂದ ಸಂಜೆ 6 ರವರೆಗೆ ನಡೆಯಲಿದೆ ಎಂದು ಅರ್ಚನ (97385 72318), ಪುಷ್ಪ (90367 19573) ತಿಳಿಸಿದ್ದಾರೆ.



## ಎವಿಕೆ ಕಾಲೇಜಿನಲ್ಲಿ ಸಾಂಪ್ರದಾಯಿಕ ಸೊಗಡಿನ 'ದೇಶೀ ಕಲರವ'

ದಾವಣಗೆರೆಯ ಎ.ವಿ. ಕಮಲಮ್ಮ ಮಹಿಳಾ ಕಾಲೇಜಿನ 'ದೇಶೀ ಕಲವರ' ಸಾಂಪ್ರದಾಯಿಕ ವೇಷಭೂಷಣ ಹಾಗೂ ಜಾನಪದ ನೃತ್ಯ ಸೇರಿದಂತೆ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ನಡೆಸಲಾಯಿತು. ವಿದ್ಯಾರ್ಥಿನಿಯರಷ್ಟೇ ಅಲ್ಲದೇ ಕಾಲೇಜಿನ ಪ್ರಾಂಶುಪಾಲ ಬಿ.ಪಿ. ಕುಮಾರ್ ಸೇರಿದಂತೆ ಉಪನ್ಯಾಸಕರೂ ಸಾಂಪ್ರದಾಯಿಕ ಉಡುಗೆಯಲ್ಲಿ ಕಂಗೊಳಿಸಿದರು. ವಿದ್ಯಾರ್ಥಿನಿಯರು ವಿವಿಧ ರಾಜ್ಯಗಳ ಸಾಂಪ್ರದಾಯಿಕ ನೃತ್ಯ ಪ್ರದರ್ಶನ ನೀಡಿದರು.

## 'ಮಿಸ್ಟರ್ ಅಂಡ್ ಮಿಸ್ ದಾವಣಗೆರೆ' ಸೀಸನ್ - 4 ಗ್ರ್ಯಾಂಡ್ ಫಿನಾಲೆ ಇಂದು

ಖುಷಿ ಈವೆಂಟ್ಸ್ ವತಿಯಿಂದ ಸತತ ನಾಲ್ಕನೇ ಬಾರಿಗೆ ಇಂದು ಹೊಸ ಕುಂದುವಾಡ ಬಳಿ ಇರುವ ಬೈ ಪಾಸ್ ಪಕ್ಕದ ಸುಶೀ ಸಮುದಾಯ ಭವನದಲ್ಲಿ 'ಮಿಸ್ಟರ್ ಅಂಡ್ ಮಿಸ್ ದಾವಣಗೆರೆ' ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ. ಈ ಕಾರ್ಯಕ್ರಮಕ್ಕೆ ಫಿಟ್ನೆಸ್ ಕೋಚ್ ಅರುಣ್ ಭಟ್ಟಾಚಾರ್ಯ, ಫ್ಯಾಶನ್ ಛಾಯಾಗ್ರಾಹಕ ಫರಾಜ್ ಅಹಮದ್, ನಟಿ ಹರಿತ್ ಷಾ, ಲೋಪಮುದ್ರ, ಚೇತನ್ ಆಗಮಿಸಲಿದ್ದಾರೆ.

## ಶರಣರ ವಿರುದ್ಧ ಕೇಸ್ : ನಾಗರಾಜ್ ಖಂಡನೆ

ದಾವಣಗೆರೆ,ಆ.27- ಚಿತ್ರದುರ್ಗ ಬೃಹನ್ಮಠದ ಪೀಠಾಧಿಪತಿ ಶ್ರೀ ಶಿವಮೂರ್ತಿ ಮುರುಘಾ ಶರಣರ ವಿರುದ್ಧ ಪೋಕ್ಸ್ ಕಾಯ್ದೆ ಕೇಸ್ ದಾಖಲು ಮಾಡಿರುವ ಪಟ್ಟಭದ್ರ ಹಿತಾಸಕ್ತಿಗಳ ಕ್ರಮವನ್ನು ರಾಜ್ಯ ಜೆಡಿಎಸ್ ಎಸ್ಸಿ ವಿಭಾಗದ ಸಂಘಟನಾ ಕಾರ್ಯದರ್ಶಿ ಎಂ.ಎನ್. ನಾಗರಾಜ್ ತೀವ್ರವಾಗಿ ಖಂಡಿಸಿದ್ದಾರೆ.

ಶೋಷಿತರ, ದೀನ-ದಲಿತರ, ಅಂಧ ಮಕ್ಕಳ ಸೇವೆಯಲ್ಲಿ ತಮ್ಮನ್ನುತಾವು ತೊಡಗಿಸಿಕೊಂಡಿರುವ ಮುರುಘಾ ಶರಣರ ಜನಪ್ರಿಯತೆಯನ್ನು ಸಹಿಸಿಕೊಳ್ಳದ ಪಟ್ಟಭದ್ರ ಹಿತಾಸಕ್ತಿಗಳು ಶರಣರ ವಿರುದ್ಧ ಕಿರುಕುಳ ನೀಡುತ್ತಲೇ ಬಂದಿದ್ದಾರೆ ಎಂದು ನಾಗರಾಜ್ ಆರೋಪಿಸಿದ್ದಾರೆ. ಈ ಬಗ್ಗೆ ಸರ್ಕಾರ ಸೂಕ್ತ ಕ್ರಮ ಕೈಗೊಳ್ಳುವಂತೆ ಅವರು ಒತ್ತಾಯಿಸಿದ್ದಾರೆ.


## ಅರಸಿ ಕನ್ಸಲ್ಟೆನ್ಸಿ ಸರ್ವೀಸಸ್

ನಮ್ಮಲ್ಲಿ ಕಟ್ಟಡ ಪರವಾನಿಗೆ (ದಾವಣಗೆರೆ ಮಹಾನಗರ ಪಾಲಿಕೆ ಮತ್ತು DHUDA), ಬಿಲ್ಡಿಂಗ್ ಪ್ಲಾನ್ (ವಾಸ್ತು ಪ್ರಕಾರ), ಎಸ್ಟಿಮೇಷನ್, ಕನ್‌ಸ್ಟ್ರಕ್ಷನ್ ಮತ್ತು ಮೆಟೀರಿಯಲ್ ಕಾಂಟ್ರ್ಯಾಕ್ಟ್ ಹಾಗೂ ಅಲಿನೇಷನ್, ಲೇಔಟ್ ಪ್ಲಾನ್ ಮತ್ತು ಅಭಿವೃದ್ಧಿ (Development) ಮಾಡಿಕೊಡಲಾಗುವುದು.

ಸಂಪರ್ಕಿಸಿ : **ಪ್ರಿಯಾಂಕ ಜಿ.ಪಿ., ಇಂಜಿನಿಯರ್**
**+91 70190 70400**

8ನೇ ಮೇನ್, 8ನೇ ಕ್ರಾಸ್, ಬ್ಯಾಡಗಿ ಶೆಟ್ರು ಸ್ಕೂಲ್ ಹತ್ತಿರ, ಪಿ.ಜೆ. ಬಡಾವಣೆ, ದಾವಣಗೆರೆ-4.


## ಕೃಷಿ ಪ್ರಶಸ್ತಿಗೆ ಮಹಿಳೆಯರಿಂದ ಅರ್ಜಿ

ದಾವಣಗೆರೆ, ಆ. 27 - 2022-23ನೇ ಸಾಲಿನ ಕೃಷಿ ಮತ್ತು ಪ್ರಶಸ್ತಿ ಬೆಳೆ ಸ್ಪರ್ಧೆಗೆ ಅರ್ಜಿಗಳನ್ನು ಆಹ್ವಾನಿಸಲಾಗಿದ್ದು. ಜಿಲ್ಲಾ ಮಟ್ಟಕ್ಕೆ ಮುಸುಕಿನ ಜೋಳ ಮಳೆಯಾಶ್ರಿತ ಬೆಳೆಯನ್ನು ನಿಗದಿಪಡಿಸಲಾಗಿದ್ದು. ತಾಲ್ಲೂಕು ಮಟ್ಟಕ್ಕೆ ದಾವಣಗೆರೆ, ಚನ್ನಗಿರಿ, ಹರಿಹರ ಹಾಗೂ ಹೊನ್ನಾಳಿ ತಾಲ್ಲೂಕುಗಳಿಗೆ ಭತ್ತ ನೀರಾವರಿ ಮತ್ತು ನ್ಯಾಮತಿ ತಾಲ್ಲೂಕಿಗೆ ಶೇಂಗಾ ಮಳೆಯಾಶ್ರಿತ ಹಾಗೂ ಜಗಳೂರು ತಾಲ್ಲೂಕಿಗೆ ಮುಸುಕಿನ ಜೋಳ ಮಳೆಯಾಶ್ರಿತ ಬೆಳೆಗಳನ್ನು ನಿಗದಿಪಡಿಸಲಾಗಿದೆ. ಮುಂಗಾರು ಹಂಗಾಮಿಗೆ ಅರ್ಜಿ ಸಲ್ಲಿಸಲು ಆಗಸ್ಟ್ 31 ಹಾಗೂ ಹಿಂಗಾರು ಹಂಗಾಮಿಗೆ ನವೆಂಬರ್ 30 ಕೊನೆಯ ದಿನ ಆಗಿರುತ್ತದೆ.

ಪ್ರಸಕ್ತ ಸಾಲಿನಲ್ಲಿ ಕೃಷಿ ಪ್ರಶಸ್ತಿಗೆ ಪ್ರತ್ಯೇಕವಾಗಿ ಮಹಿಳೆಯರಿಂದ ಅರ್ಜಿಗಳನ್ನು ಆಹ್ವಾನಿಸಲಾಗಿದೆ. ಕೂಡಲೇ ರೈತ ಬಾಂಧವರು ನಿಗದಿತ ದಿನಾಂಕದೊಳಗೆ ಕೃಷಿ ಪ್ರಶಸ್ತಿಗೆ ಅರ್ಜಿ ಸಲ್ಲಿಸಬಹುದು.

ಹೆಚ್ಚಿನ ಮಾಹಿತಿಗಾಗಿ ಹತ್ತಿರದ ರೈತ ಸಂಪರ್ಕ ಕೇಂದ್ರ ಅಥವಾ ಸಹಾಯಕ ಕೃಷಿ ನಿರ್ದೇಶಕರ ಕಚೇರಿಯನ್ನು ಸಂಪರ್ಕಿಸಬಹುದು ಎಂದು ದಾವಣಗೆರೆ ಜಂಟಿ ನಿರ್ದೇಶಕರು ತಿಳಿಸಿದ್ದಾರೆ.

## ನಗರದಲ್ಲಿ ಇಂದು ಲಯನ್ಸ್ ಕ್ಲಬ್ ಪದಾಧಿಕಾರಿಗಳ ಪದಗ್ರಹಣ

ಲಯನ್ಸ್ ಕ್ಲಬ್ ನೇಸರ ಸಂಸ್ಥೆಯ ನೂತನ ಪದಾಧಿಕಾರಿಗಳ ಪದಗ್ರಹಣ ಸಮಾರಂಭವು ಇಂದು ಸಂಜೆ 6 ಗಂಟೆಗೆ ಲಯನ್ಸ್ ಭವನದಲ್ಲಿ ನಡೆಯಲಿದೆ. ಪ್ರತಿಷ್ಠಾಪನಾ ಅಧಿಕಾರಿಯಾಗಿ ವಿದ್ಯಾಲತಾ ವಿ. ಶೆಟ್ಟಿ ಆಗಮಿಸುವರು. ಅಧ್ಯಕ್ಷತೆಯನ್ನು ಶ್ರೀಲಕ್ಷ್ಮಿ ವೈ.ಬಿ. ಸತೀಶ್ ವಹಿಸುವರು. ಮುಖ್ಯ ಅತಿಥಿಗಳಾಗಿ ನರೇಂದ್ರ ಜಿ.ಎಂ., ಎಸ್. ಓಂಕಾರಪ್ಪ, ಎನ್.ಆರ್. ನಾಗಭೂಷಣರಾವ್ ಆಗಮಿಸುವರು.

## ನಗರದಲ್ಲಿ ಇಂದು 'ಕನ್ನಡ ಕೌಸ್ತುಭ'- 'ಸರಸ್ವತಿ ಪುರಸ್ಕಾರ' ಪ್ರಶಸ್ತಿಗಳ ಪ್ರದಾನ

ಕಲಾಕುಂಚ ಸಾಂಸ್ಕೃತಿಕ ಸಂಸ್ಥೆ, ಶ್ರೀಮತಿ ಸರಸ್ವತಿ ದಾಸಪ್ಪ ಶೆಣೈ ಪ್ರತಿಷ್ಠಾನ ಸಾಲಿಗ್ರಾಮ ಹಾಗೂ ಶ್ರೀ ಸಿದ್ಧಗಂಗಾ ವಿದ್ಯಾಸಂಸ್ಥೆ ಸಂಯುಕ್ತಾಶ್ರಯದಲ್ಲಿ ಇಂದು ಬೆಳಿಗ್ಗೆ 10 ಕ್ಕೆ ನಗರದ ಶ್ರೀ ಸಿದ್ಧಗಂಗಾ ವಿದ್ಯಾಸಂಸ್ಥೆ ಆವರಣದಲ್ಲಿ 'ಕನ್ನಡ ಕೌಸ್ತುಭ'- ' ಸರಸ್ವತಿ ಪುರಸ್ಕಾರ' ರಾಜ್ಯ ಪ್ರಶಸ್ತಿಗಳ ಪ್ರದಾನ ಸಮಾರಂಭ ನಡೆಯಲಿದೆ.

ನಾಡೋಜ ಡಾ. ಮಹೇಶ್ ಜೋಷಿ ಕಾರ್ಯಕ್ರಮ ಉದ್ಘಾಟಿಸುವರು. ಕರ್ನಾಟಕ ಯಕ್ಷಗಾನ ಅಕಾಡೆಮಿ ಅಧ್ಯಕ್ಷ ಡಾ. ಜಿ.ಎಲ್. ಹೆಗಡೆ ಅಧ್ಯಕ್ಷತೆ ವಹಿಸಲಿದ್ದಾರೆ. ಹಿರಿಯ ಯಕ್ಷಗಾನ ಸಾಹಿತಿ ಜಯಲಕ್ಷ್ಮಿ ಕಾರಂತ ಅವರು 'ಸರಸ್ವತಿ ಸಿರಿ' ರಾಜ್ಯ ಪ್ರಶಸ್ತಿ ಪ್ರದಾನ ಮಾಡಲಿದ್ದಾರೆ.

ಮುಖ್ಯ ಅತಿಥಿಗಳಾಗಿ ಕನ್ನಡ ಸಾಹಿತ್ಯ ಪರಿಷತ್ ಜಿಲ್ಲಾಧ್ಯಕ್ಷ ಬಿ. ವಾಮದೇವಪ್ಪ, ಶ್ರೀ ಸಿದ್ಧಗಂಗಾ ಪದವಿ ಪೂರ್ವ ಕಾಲೇಜಿನ ನಿರ್ದೇಶಕ ಡಾ. ಡಿ.ಎಸ್. ಜಯಂತ್ ಮತ್ತಿತರರು ಭಾಗವಹಿಸಲಿದ್ದಾರೆ.

## ಮುರುಘಾ ಶರಣರ ಮೇಲೆ ಪೋಕ್ಸ್ ಕೇಸ್ ದಾಖಲು; ಪಟ್ಟಭದ್ರ ಹಿತಾಸಕ್ತಿಗಳ ಕೈವಾಡ : ಬಾಡದ ಆನಂದರಾಜ್

ದಾವಣಗೆರೆ, ಆ 27 - ಮುರುಘಾ ಮಠದ ಪೀಠಾಧಿಪತಿ ಶ್ರೀ ಶಿವಮೂರ್ತಿ ಮುರುಘಾ ಶರಣರ ಜನಪ್ರಿಯತೆ ಸಹಿಸಿಕೊಳ್ಳದೇ ಪಟ್ಟಭದ್ರ ಹಿತಾಸಕ್ತಿಗಳು ಅಮಾಯಕರನ್ನಿಟ್ಟುಕೊಂಡು ಶರಣರ ಮೇಲೆ ಪೋಕ್ಸ್ ಕಾಯಿದೆ ಕೇಸ್ ದಾಖಲೆಯಾಗುತ್ತಿರುವುದನ್ನು ಜಿಲ್ಲಾ ಶೋಷಿತ ವರ್ಗಗಳ ಒಕ್ಕೂಟದ ಜಿಲ್ಲಾಧ್ಯಕ್ಷ ಬಾಡದ ಆನಂದರಾಜ್ ಖಂಡಿಸಿದ್ದಾರೆ.

ಮೂರು ದಶಕಗಳಿಂದ ಶೋಷಿತರ ದೀನ-ದಲಿತರ, ಅಂಧ ಮಕ್ಕಳ, ವಿಧವೆಯರ ಆರಾಧ್ಯ ದೈವವಾಗಿರುವ ಮುರುಘಾ ಶರಣರ ಜನಪರ ಆಡಳಿತ ಹಾಗೂ ಬಸವಣ್ಣ, ಅಂಬೇಡ್ಕರ್‌ರವರ ಆಶಯದಂತೆ ಹಗಲಿರುಳು ಶ್ರಮಿಸುತ್ತಿರುವ ಶರಣರಿಗೆ ಪಟ್ಟಭದ್ರ ಹಿತಾಸಕ್ತಿಗಳು ಮೊದಲಿನಿಂದಲೂ ಕಿರುಕುಳ ನೀಡುತ್ತಿದೆ ಎಂದು ಅವರು ದೂರಿದ್ದಾರೆ.

ನಾವುಗಳು ಬಸವಣ್ಣನವರನ್ನ, ಅಂಬೇಡ್ಕರ್ ರವರನ್ನ ಕಣ್ಣಾರೆ ನೋಡಿಲ್ಲ. ಡಾ.ಶಿವಮೂರ್ತಿ ಶರಣರಲ್ಲಿ ಅವರ ಆದರ್ಶಗಳನ್ನು ನೋಡುತ್ತಿದ್ದೇವೆ. ಶರಣರ ಮೇಲಿನ ಈ ಆಪಾದನೆಯಿಂದ ದೇಶದ ಕೋಟ್ಯಾಂತರ ಭಕ್ತರಿಗೆ ನೋವು ತರಿಸಿದೆ. ಆದಷ್ಟು ಬೇಗ ರಾಜ್ಯ ಸರ್ಕಾರ ಈ ಘಟನೆಯ ಹಿಂದಿರುವ ಕುತಂತ್ರಿಗಳನ್ನು ಬಯಲಿಗೆಳೆಯಬೇಕೆಂದು ಆನಂದರಾಜ್ ಒತ್ತಾಯಿಸಿದ್ದಾರೆ.




## ಕುಕ್ಕುವಾಡ ಕೃಷಿ ಪತ್ತಿನ ಸಂಘಕ್ಕೆ ಪಾಲಾಕ್ಷಪ್ಪ ಅಧ್ಯಕ್ಷ



ದಾವಣಗೆರೆ, ಆ.27- ತಾಲ್ಲೂಕಿನ ಕುಕ್ಕುವಾಡ ಗ್ರಾಮದ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದ ಅಧ್ಯಕ್ಷರಾಗಿ ಕೆ. ಎನ್. ಪಾಲಾಕ್ಷಪ್ಪ ಕುಕ್ಕುವಾಡ ಅವರು ಮೊನ್ನೆ ನಡೆದ ಚುನಾವಣೆಯಲ್ಲಿ ಆಯ್ಕೆಯಾಗಿದ್ದಾರೆ.


## ಬಾಡಿಗೆಗೆ




1. PB Roadನಲ್ಲಿ 3400x4 = 13600 Sqft B+G+2 floors
2. ಪಿಜೆ ಎಕ್ಸ್‌ಟೆನ್ಷನ್‌ನಲ್ಲಿ 6000 Sqft ಬಿಲ್ಡಿಂಗ್‌ಗಳು ಬಾಡಿಗೆಗಿವೆ.

94480 28103

Suitable for Hospitals, showrooms,banks,malls, offices.

## ಜನ್ಮ ದಿನದ ಶುಭಾಶಯಗಳು...





ದಾವಣಗೆರೆ ಜಿಲ್ಲಾ ವಾಲ್ಮೀಕಿ ನಾಯಕ ಯುವ ಘಟಕದ ಉಪಾಧ್ಯಕ್ಷರೂ, ಆತ್ಮೀಯ ಸ್ನೇಹಿತರಾದ

ಶ್ರೀ ಪ್ರವೀಣ್ ಶಾಮನೂರು

ಅವರಿಗೆ ಹುಟ್ಟುಹಬ್ಬದ ಹಾರ್ದಿಕ ಶುಭಾಶಯಗಳು. ಶ್ರೀಯುತರಿಗೆ ಭಗವಂತನು ಆಯುರಾರೋಗ್ಯ ಭಾಗ್ಯ ಕರುಣಿಸಲೆಂದು ಪ್ರಾರ್ಥಿಸುತ್ತೇವೆ.



ಬಸವರಾಜ್ ತೋಟದ
ಯುವ ಮುಖಂಡರು, ನಿಟುವಳ್ಳಿ

ಭೀಮೇಶ್ ತೋಟದ

ಈಶ್ವರ್ ತೋಟದ

ಬಸವರಾಜ್ ತೋಟದ ಸ್ನೇಹಿತರ ಬಳಗ, ನಿಟುವಳ್ಳಿ

## ಹುಟ್ಟುಹಬ್ಬದ ಶುಭಾಶಯಗಳು



ದಾವಣಗೆರೆ ಜಿಲ್ಲಾ ವಾಲ್ಮೀಕಿ ನಾಯಕ ಯುವ ಘಟಕದ ಉಪಾಧ್ಯಕ್ಷರೂ, ಆತ್ಮೀಯ ಸ್ನೇಹಿತರಾದ

ಶ್ರೀ ಪ್ರವೀಣ್ ಶಾಮನೂರು

ಅವರಿಗೆ ಹುಟ್ಟುಹಬ್ಬದ ಹಾರ್ದಿಕ ಶುಭಾಶಯಗಳು. ಶ್ರೀಯುತರಿಗೆ ಭಗವಂತನು ಆಯುರಾರೋಗ್ಯ ಭಾಗ್ಯ ಕರುಣಿಸಲೆಂದು ಪ್ರಾರ್ಥಿಸುತ್ತೇವೆ.

ಶ್ರೀನಿವಾಸ ದಾಸಕರಿಯಪ್ಪ ಗೆಳೆಯರ ಬಳಗ
ಹ್ಯಾಪಿ ಫ್ರೆಂಡ್ಸ್ ಗ್ರೂಪ್, ವಿನೋಬನಗರ
ಇಂಡಿಯನ್ ಕಾಫಿ ಬಾರ್ ಗೆಳೆಯರ ಬಳಗ
ಹಳೇ ಬಸ್ ನಿಲ್ದಾಣ
ಟೀ ಲಾಂಜ್ ಗೆಳೆಯರ ಬಳಗ, ದಾವಣಗೆರೆ.



॥ ಶ್ರೀ ಕಲ್ಲೇಶ್ವರ ಪ್ರಸನ್ನ ॥

## ಕೈಲಾಸ ಶಿವಗಣಾರಾಧನೆ ಆಹ್ವಾನ

ದಾವಣಗೆರೆ ಜಿಲ್ಲೆ, ದಾವಣಗೆರೆ ತಾಲ್ಲೂಕು ಬಾಡ ಗ್ರಾಮದ ವಾಸಿ
ಗಂಗಪ್ಪರ ಶ್ರೀಮತಿ ಗಿರಿಜಮ್ಮ ಮತ್ತು ಮಕ್ಕಳು
ಇವರು ಮಾಡುವ ವಿಜ್ಞಾಪನೆಗಳು.

ದಿನಾಂಕ : 21.08.2022ನೇ ಭಾನುವಾರ ಬೆಳಗಿನ ಜಾವ 01.55ಕ್ಕೆ ನನ್ನ ಪೂಜ್ಯ ಪತಿಯವರಾದ

ಗಂಗಪ್ಪರ ಶ್ರೀ ಮಲ್ಲಿಕಾರ್ಜುನಪ್ಪನವರು

ಶಿವಾಧೀನರಾದ ಪ್ರಯುಕ್ತ ಮೃತರ ಆತ್ಮಶಾಂತಿಗಾಗಿ

'ಕೈಲಾಸ ಶಿವಗಣಾರಾಧನೆ'ಯನ್ನು

ದಿನಾಂಕ : 29.08.2022ನೇ ಸೋಮವಾರ ಬೆಳಿಗ್ಗೆ 10.30ಕ್ಕೆ
ಶ್ರೀ ಮರುಳಸಿದ್ದೇಶ್ವರ ಕಲ್ಯಾಣ ಮಂಟಪ, ಬಾಡ, ದಾವಣಗೆರೆ ತಾಲ್ಲೂಕು
ಇಲ್ಲಿ ನೆರವೇರಿಸಲು ಗುರು-ಹಿರಿಯರು ನಿಶ್ಚಯಿಸಿರುವುದರಿಂದ ತಾವುಗಳು ಆಗಮಿಸಿ, ಮೃತರ ಆತ್ಮಕ್ಕೆ ಚಿರಶಾಂತಿಯನ್ನು ಕೋರಬೇಕಾಗಿ ವಿನಂತಿ.

ಇಂತಿ ದುಃಖತಪ್ತರು : ಮೃತರ ಧರ್ಮಪತ್ನಿ : ಶ್ರೀಮತಿ ಗಿರಿಜಮ್ಮ ಮಲ್ಲಿಕಾರ್ಜುನಪ್ಪ, ಬಾಡ.
ತಮ್ಮ : ದಿ॥ ಶ್ರೀ ಬಿ.ಜಿ. ಹಾಲೇಶಪ್ಪ ಶ್ರೀಮತಿ ನಾರಮ್ಮ ಮತ್ತು ಮಕ್ಕಳು, ಬಾಡ.
ಮಕ್ಕಳಾದ : ಶ್ರೀಮತಿ ಕಮಲಮ್ಮ ಶ್ರೀ ಆರ್.ಎಸ್. ಗುರುಶಾಂತಪ್ಪ ಮತ್ತು ಮಕ್ಕಳು, ಬಾಡ.
ಶ್ರೀಮತಿ ಶಾರದಮ್ಮ ಶ್ರೀ ಎಸ್.ಜಿ. ಮಹಾದೇವಪ್ಪ ಮತ್ತು ಮಕ್ಕಳು, ಹಿರೇತೋಗಲೇರಿ.
ಶ್ರೀಮತಿ ರತ್ನಮ್ಮ ಶ್ರೀ ಬಿ.ಎಸ್. ಚನ್ನಬಸಪ್ಪ ಮತ್ತು ಮಕ್ಕಳು, ಕಾಮನಹಳ್ಳಿ.
ಶ್ರೀಮತಿ ರೂಪ ಶ್ರೀ ಬಿ.ಎಂ. ಬಸವರಾಜಪ್ಪ ಮತ್ತು ಮಕ್ಕಳು, ಬಾಡ.
ಶ್ರೀಮತಿ ರೇಖಾ ಶ್ರೀ ಬಿ.ಎಂ. ಶಾಂತಕುಮಾರ್ ಮತ್ತು ಮಕ್ಕಳು, ಬಾಡ.
ಗಂಗಪ್ಪರ ವಂಶಸ್ಥರು, ಬಾಡ ಗ್ರಾಮಸ್ಥರು ಹಾಗೂ ಬಂಧು-ಮಿತ್ರರು, ಫೋ. : 99009 94558

ವಿ.ಸೂ. : ಆಹ್ವಾನ ಪತ್ರಿಕೆ ತಲುಪದೇ ಇರುವವರು ಇದನ್ನೇ ಆಹ್ವಾನವೆಂದು ಭಾವಿಸಿ ಆಗಮಿಸಬೇಕಾಗಿ ವಿನಂತಿ.


## ಶ್ರೀ ಅಂಬಾಭವಾನಿ ಅರ್ಬನ್ ಕೋ-ಆಪರೇಟಿವ್ ಬ್ಯಾಂಕ್ ಲಿ.,

# 26/2ಎ, ವಿಜಯಲಕ್ಷ್ಮಿ ರೋಡ್, ದಾವಣಗೆರೆ 577 001. ☎ : 271688 235645, GST No.: 29AABAS2774F1ZC ✉ ambabhavaniucbdvg@gmail.com



ಶ್ರೀ ಕಿರಣ್‌ಕುಮಾರ್ ಎ.
ಅಧ್ಯಕ್ಷರು



ಡಾ॥ ತಿಪ್ಪೇಸ್ವಾಮಿ ಏಕಬೋಟೆ, ನಿರ್ದೇಶಕರು | ಶ್ರೀ ಸತ್ಯನಾರಾಯಣ ಆರ್.ಜಿ., ನಿರ್ದೇಶಕರು | ಶ್ರೀ ಬಾಬುರಾವ್ ಸಾಳಂಕಿ ಎಸ್., ನಿರ್ದೇಶಕರು | ಶ್ರೀ ಜಗನ್ನಾಥ ಗಂಜಗಟ್ಟೆ ಎಸ್., ನಿರ್ದೇಶಕರು | ಶ್ರೀ ಪಿ.ಜಿ. ಪಾಂಡುರಂಗ, ನಿರ್ದೇಶಕರು | ಶ್ರೀ ಶಿವಾಜಿರಾವ್, ನಿರ್ದೇಶಕರು | ಶ್ರೀ ಗಿರಿಧರ್ ಎಂ.ಡಿ., ನಿರ್ದೇಶಕರು | ಶ್ರೀ ಆನಂದ ಡಿ. ಸಫಾರೆ, ನಿರ್ದೇಶಕರು | ಶ್ರೀ ಗೋಪಿನಾಥ್, ನಿರ್ದೇಶಕರು



ಶ್ರೀ ಬಾಬು, ನಿರ್ದೇಶಕರು | ಶ್ರೀಮತಿ ಡಾ. ರಜನಿ ಎಸ್., ನಿರ್ದೇಶಕರು | ಶ್ರೀಮತಿ ಅನಿತಾಬಾಯಿ ಜಿ., ನಿರ್ದೇಶಕರು | ಶ್ರೀಮತಿ ಶಾಮಲಾ ಜಿ.ಎಂ., ನಿರ್ದೇಶಕರು | ಶ್ರೀ ರಾಜು ಮಹೇಂದ್ರಕರ್, ವೃತ್ತಿಪರ ನಿರ್ದೇಶಕರು, ಚಾರ್ಟರ್ಡ್ ಅಕೌಂಟೆಂಟ್ | ಶ್ರೀ ಎ.ಸಿ. ರಾಘವೇಂದ್ರ ಮೊಹರೆ, ವೃತ್ತಿಪರ ನಿರ್ದೇಶಕರು, ವಕೀಲರು | ಶ್ರೀ ನಾಗರಾಜ್ ಗೌಡನಕಟ್ಟಿ, ವ್ಯವಸ್ಥಾಪಕರು | ಶ್ರೀ ಅನಿಲ್ ಟಿ. ಮಾಳದಕರ್, ಸಹಾಯಕ ವ್ಯವಸ್ಥಾಪಕರು | ಶ್ರೀ ಕೃಷ್ಣಕಾಂತ್, ಲೆಕ್ಕಾಧಿಕಾರಿ



ಶ್ರೀ ಪರಶುರಾಮರಾವ್ ಜಿ.ಎಂ.
ಉಪಾಧ್ಯಕ್ಷರು

### ಸೂಚನೆ :

1) ಈಗಾಗಲೇ ಬ್ಯಾಂಕಿನ ಸದಸ್ಯರಿಗೆ ವಾರ್ಷಿಕ ಮಹಾಸಭೆಯ ಆಹ್ವಾನ ಪತ್ರಿಕೆ ಕಳುಹಿಸಲಾಗಿದ್ದು, ಕೆಲವು ಪ್ರತಿಗಳು ವಿಳಾಸ ಬದಲಾವಣೆಯಿಂದ ಬ್ಯಾಂಕಿಗೆ ವಾಪಸ್ ಬಂದಿರುತ್ತವೆ. ಆದ ಕಾರಣ, ಬ್ಯಾಂಕಿನ ಕಛೇರಿ ವೇಳೆಯಲ್ಲಿ ಬಂದು ಸರಿಯಾದ ವಿಳಾಸ, ದೂರವಾಣಿ ಸಂಖ್ಯೆ ಹಾಗೂ ಕೆ.ವೈ.ಸಿ (ಚುನಾವಣಾ ಕಾರ್ಡ್, ಪಾನ್ ಕಾರ್ಡ್, ಆಧಾರ ಕಾರ್ಡ್) ನೀಡಿ, ಪತ್ರಿಕೆ ಪಡೆಯತಕ್ಕದ್ದು ಹಾಗೂ ಇದನ್ನು ಆಹ್ವಾನವೆಂದು ಭಾವಿಸಿ, ಮಹಾಸಭೆಯಲ್ಲಿ ಭಾಗವಹಿಸಿ ಯಶಸ್ವಿಗೊಳಿಸಬೇಕೆಂದು ಕೋರಿಕೆ.

## 27ನೇ ವಾರ್ಷಿಕ ಮಹಾಸಭೆಯ ನೋಟೀಸ್

ನಮ್ಮ ಬ್ಯಾಂಕಿನ 2021-2022ನೇ ಸಾಲಿನ 27ನೇ ವಾರ್ಷಿಕ ಮಹಾಸಭೆಯನ್ನು ದಿನಾಂಕ 28-08-2022ನೇ ಭಾನುವಾರ ಬೆಳಿಗ್ಗೆ 11-30 ಕ್ಕೆ ಸ್ಥಳ : ಶ್ರೀಕೃಷ್ಣಭವಾನಿ ಕಲ್ಯಾಣ ಮಂಟಪ, ದೇವರಾಜ ಅರಸು ಬಡಾವಣೆ, ಬಿ ಬ್ಲಾಕ್ ಇಲ್ಲಿ ಕರೆಯಲಾಗಿದೆ. ಮಾನ್ಯ ಬ್ಯಾಂಕಿನ ಸರ್ವಸದಸ್ಯರು ವಾರ್ಷಿಕ ಮಹಾಸಭೆಯಲ್ಲಿ ಭಾಗವಹಿಸಿ ವಾರ್ಷಿಕ ಮಹಾಸಭೆಯನ್ನು ಯಶಸ್ವಿಯಾಗಿ ನಡೆಸಿಕೊಡಬೇಕಾಗಿ ವಿನಂತಿಸಿಕೊಳ್ಳುತ್ತೇವೆ.

### ಸಭೆಯ ಕಾರ್ಯಕಲಾಪಗಳು

(1) ಪ್ರಾರ್ಥನೆ (2) ಸ್ವಾಗತ ಭಾಷಣ (3) ದಿನಾಂಕ 25.09.2021 ರಂದು ನಡೆದ 26ನೇ ಮಹಾಸಭೆಯ ನಿರ್ಣಯ ಓದಿ ಅಂಗೀಕರಿಸುವುದು. (4) 2021-22ನೇ ಸಾಲಿನ ಆಡಳಿತ ಮಂಡಲಿಯು ತಯಾರಿಸಿರುವ 27ನೇ ವಾರ್ಷಿಕ ವರದಿಯನ್ನು ಪರಿಶೀಲಿಸುವುದು (ಅನುಮೋದಿಸುವುದು). (5) 2021-22ನೇ ಸಾಲಿನ ಲೆಕ್ಕಪರಿಶೋಧನೆಯಾದ ಲಾಭ-ನಷ್ಟ ಮತ್ತು ಆಢಾವೆ ಪತ್ರಿಕೆಯನ್ನು ಹಾಗೂ ಲೆಕ್ಕಪರಿಶೋಧಕರ ವರದಿಯನ್ನು ಪರಿಶೀಲಿಸುವುದು. (ಅನುಮೋದಿಸುವುದು). (6) 2021-2022ನೇ ಸಾಲಿನ ಲಾಭ ವಿಲೇವಾರಿ ಮಾಡುವುದು. (7) 2022-2023ನೇ ಸಾಲಿಗೆ ಶಾಸನಬದ್ಧ ಲೆಕ್ಕ ಪರಿಶೋಧಕರ ನೇಮಕಾತಿ ಮಾಡುವುದು ಮತ್ತು ಅವರಿಗೆ ಕೊಡಬಹುದಾದ ಸಂಭಾವನೆ ನಿರ್ಣಯದ ಬಗ್ಗೆ ಚರ್ಚಿಸುವುದು. (8) 2021-2022ನೇ ಸಾಲಿನಲ್ಲಿ ಮುಂಗಡ ಪತ್ರಕ್ಕಿಂತ ಹೆಚ್ಚುವರಿ ಆದ ಖರ್ಚುಗಳನ್ನು ಒಪ್ಪುವುದು ಮತ್ತು 2022 - 2023ನೇ ಸಾಲಿಗೆ ವಾರ್ಷಿಕ ಮುಂಗಡ ಪತ್ರವನ್ನು ಮಂಜೂರು ಮಾಡುವುದು. (9) ನಿರ್ದೇಶಕ ಮಂಡಲಿಯು ರೂಪಿಸಿದ ಬ್ಯಾಂಕಿನ ಮುಂಬರುವ ವರ್ಷದ ಕಾರ್ಯಚಟುವಟಿಕೆಗಳನ್ನು ಅನುಮೋದಿಸುವುದು. (10) ಬ್ಯಾಂಕಿನ ನಿವೇಶನ ಮಾರಾಟ ಮಾಡಲು ಹಾಗೂ ಸೂಕ್ತ ಜಾಗ ಖರೀದಿಸಲು ಅನುಮೋದನೆ ಮಾಡುವ ಬಗ್ಗೆ. (11) ಪದಾಧಿಕಾರಿಗಳು ಸೇರಿದಂತೆ ನಿರ್ದೇಶಕರಿಗೆ, ಅವರ ಸಾಮರ್ಥ್ಯದಲ್ಲಿ ನಿರ್ವಹಿಸಿದ ಕರ್ತವ್ಯಗಳಿಗೆ ಸಂಬಂಧಪಟ್ಟ ಸಭೆಗೆ ಹಾಜರಾದುದಕ್ಕೆ ಅವರಿಗೆ ಸಂದಾಯ ಮಾಡಿದ ಸಂಭಾವನೆ ಹಾಗೂ ಇತರೆ ಭತ್ಯೆಗಳ ಪರಿಶೀಲನೆ. (12) ಅಧ್ಯಕ್ಷರ ಅಪ್ಪಣೆ ಮೇರೆಗೆ ಬರಬಹುದಾದ ಇತರೆ ವಿಷಯಗಳು.

ಸಹಿ/- ಶ್ರೀ ಕಿರಣ್‌ಕುಮಾರ್ ಎ., ಅಧ್ಯಕ್ಷರು
ಸಹಿ/- ಪರಶುರಾಮರಾವ್ ಜಿ.ಎಂ., ಉಪಾಧ್ಯಕ್ಷರು
ಸಹಿ/- ನಾಗರಾಜ್ ಗೌಡನಕಟ್ಟಿ, ವ್ಯವಸ್ಥಾಪಕರು
ಸಹಿ/- ಅನಿಲ್ ಟಿ. ಮಾಳದಕರ್, ಸಹಾಯಕ ವ್ಯವಸ್ಥಾಪಕರು

JANATHAVANI - Published, Owned and Printed by Vikas Shadaksharappa Mellekatte, at Jayadhara Offset Printers, # 605, 'Jayadhara' Hadadi Road, Davangere - 5, Published from # 605, 'Jayadhara' Hadadi Road, Davangere - 5. Editor Vikas Shadaksharappa Mellekatte